UNIVERSAL LIBRARY
OU_202290
UNIVERSAL LIBRARY

ಶ್ರೀ

ಕನ್ನಡ

# ಪಂಚರಾತ್ರ

[ಭಾಸಮಹಾಕವಿಯ ಸಂಸ್ಕೃತ ನಾಟಕದ ಗದ್ಯಾನುವಾದ]

ಎ. ಎಸ್. ನಾರಾಯಣ ಶಾಸ್ತ್ರಿ, ಎಂ. ಎ.

ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ. ಎ.,

ಅವರು, ಇದರ ಪರಿಚಯಮಾಡಿಕೊಟ್ಟಿರುವರು

ರಾಮ ಮೋಹನ ಕಂಪೆನಿ
ಬೆಂಗಳೂರು
೧೯೪೨

*Copying the Cover-design wholly or in part is strictly prohibited.*

ಈ ಪುಸ್ತಕದ ಎಲ್ಲಾ ಹಕ್ಕುಗಳೂ ಗ್ರಂಥಕರ್ತರಿಗೆ ಸೇರಿವೆ.

ಈ ನಾಟಕವನ್ನು ಆಡಲಿಚ್ಛಿಸುವವರು ಗ್ರಂಥಕರ್ತರ ಅನುಮತಿಯನ್ನು ಪಡೆಯಬೇಕು.

ಅಚ್ಚು ಹಾಕಿದವರು

ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಾಲಯ, ಮೈಸೂರು.

ಗೆಳೆತನದೊಲುಮೆಯ

ಗುರುತಿ

ಗೆ

ದ್ರೋಣಃ ಪೃಥ್ವ್ಯರ್ಜುನಭೀಮದೂತೋ
ಯಃ ಕರ್ಣಧಾರಃ ಶಕುನೀಶ್ವರಸ್ಯ ।
ದುರ್ಯೋಧನೋ ಭೀಷ್ಮಯುಧಿಷ್ಠಿರಃ ಸ
ಪಾಯಾದ್ವಿರಾಡುತ್ತರಗೋಽಭಿಮನ್ಯುಃ ॥

# ಪರಿಚಯ.

ಕರ್ಣಾಟಕ ರಂಗಭೂಮಿಗೆ ಸುಪರಿಚಿತರಾಗಿಯೂ ನಾಟಕಾಭಿನಯ ಕಲಾ ಕುಶಲರಾಗಿಯೂ ಹೆಸರುಗೊಂಡಿರುವ ಶ್ರೀ ವರ್ಾ ನಾರಾಯಣಶಾಸ್ತ್ರಿಗಳು ಕನ್ನಡಿಗರಿಗೆ ಹೊಸಬರೇನೂ ಅಲ್ಲ. ಅವರು ಶ್ರೇಷ್ಠನಟರಾಗಿ ಉತ್ತಮ ನಾಟಕಗಳಲ್ಲಿ ಪಾತ್ರವಹಿಸಿ, ರೌದ್ರದಿಂದ ಹಿಡಿದು ಹಾಸ್ಯದವರೆಗೆ ಎಲ್ಲ ರಸಗಳನ್ನೂ ಪ್ರತಿಭೆಯಿಂದ ಪ್ರದರ್ಶಿಸಿ, ಸುಸಂಸ್ಕೃತರಾದ ಮಹಾಜನಗಳ ಪ್ರೀತಿ ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ. ಈಗವರು ಈ ಪ್ರಥಮ ಉದ್ಯಮದಲ್ಲಿ ಆ ಎಲ್ಲ ಅನುಭವಗಳ ಭಂಡಾರವನ್ನೂ ವಿನಿಯೋಗಿಸಿ ಸಾಹಿತ್ಯಸೇವೆ ಮಾಡಲು ನಾಟಕರಚನೆಗೆ ಕೈಹಾಕಿರುತ್ತಾರೆ. ಇಲ್ಲಿಯೂ ಅವರು ಸಾಹಿತ್ಯಾಭಿಮಾನಿಗಳ ಮೆಚ್ಚುಗೆಗೆ ಪಕ್ಕಾಗುವಂತೆ ಕಾರ್ಯಸಾಧನೆ ಮಾಡಿರುತ್ತಾರೆಂದು ನನ್ನ ಭಾವನೆ.

ನಾಟಕವು ಸ್ವತಂತ್ರವಾದುದಲ್ಲ; ಭಾಸಮಹಾಕವಿಯ 'ಪಂಚರಾತ್ರ'ದ ಸರಳ ಭಾಷಾಂತರ. ಆದರೂ ಶ್ರೀ ವರ್ಾ ಶಾಸ್ತ್ರಿಗಳು ಸ್ವಲ್ಪ ಸ್ವಾತಂತ್ರ್ಯ ವಹಿಸಿಯೇ ಕೆಲಸಮಾಡಿದ್ದಾರೆ. ಮೂಲನಾಟಕವು ಗದ್ಯಪದ್ಯ ಮಿಶ್ರವಾಗಿದೆ; ಅಂದಿನ ಕಾಲದ—ಇಂದು ಅಂತಹರಿಲ್ಲವೆಂಬಲ್ಲ—ಪಂಡಿತರ ಅಭಿರುಚಿಯು ಉತ್ತಮ ಕಲೆ ಎಂದುಕೊಂಡಿರಬಹುದಾದ ಹಲಕೆಲವು ಅಲಂಕಾರಗಳಿಂದ ಕೂಡಿದೆ. ಈ ನಾಟಕವು ಗದ್ಯದಲ್ಲಿದೆ; ಇಂದಿನವರ ರುಚಿಗೆ ತಗುವಂತೆ, ಪರಿಚಯಮಂದವೆಂದು(hackneyed) ತೋರದ ಅಲಂಕಾರಗಳನ್ನು ಸೂಕ್ತತೋರಿದಂತೆಯೂ ಒಂದು ನಿಯಮಕ್ಕೆ ಹೊಂದಿಕೊಳ್ಳುವಂತೆಯೂ ಪಾತ್ರದಿಂದ ಪಾತ್ರಕ್ಕೆ ಬದಲಾಯಿಸಿಕೊಂಡು ಯುಕ್ತಿಯಿಂದ ಉಪಯೋಗಿಸಿದ್ದಾರೆ. ಇಂದಿನ ರಂಗಭೂಮಿಯಲ್ಲಿ ಪಂಡಿತರಲ್ಲದಿದ್ದರೂ ಕಲಾಭಿಮಾನಿಗಳಾದವರು ಆಡಲೂ ನೋಡಲೂ

ಸುಲಭಸಾಧ್ಯವಾಗುವಂತೆ ಮೂಲ ನಾಟಕವನ್ನು ಕನ್ನಡಿಸುವುದೇ—ಭಾಸಕವಿಗೆ ಕನ್ನಡಿ ಹಿಡಿಯುವುದಲ್ಲ—ಅವರ ಈ ಉದ್ಯಮದ ಮುಖ್ಯ ಉದ್ದೇಶ. ಹಾಗೆ ಅನುವಾದ ಮಾಡಿರುವುದರಿಂದ ಗ್ರಂಥಕರ್ತರು ಕೃತಿಚೋರರೂ ಆಗುವುದಿಲ್ಲ; ಮೂಲಕವಿಗೆ ಕೃತಘ್ನರೂ ಆಗುವುದಿಲ್ಲ. ಸಾಗರೋಪಮವಾದ ಪವಿತ್ರಸಂಸ್ಕೃತ ಸಾಹಿತ್ಯಕ್ಕೆ ಅನ್ಯಾಯ ನಷ್ಟಗಳೊಂದೂ ಇದರಿಂದ ಸಂಭವಿಸುವ ಭಯವಿಲ್ಲ. ಹೊಸದಾಗಿ ವ್ಯವಸಾಯಮಾಡುವವರಿಗೆ, ಅದೆಷ್ಟೇ ಪೂಜ್ಯವಾಗಿರಲಿ, ಪ್ರದರ್ಶನಮಾತ್ರಕ್ಕೆಂದಿರುವ ಪ್ರಾಕ್ತನ ಆಯುಧಸಂಗ್ರಹಶಾಲೆಯಿಂದ ಪ್ರಯೋಜನವೇನೂ ಇಲ್ಲ ಸದ್ಯದ ಕೆಲಸಕ್ಕೆ ಉಪಯೋಗವಾಗುವ 'ಹತಾರು'ಗಳು ಬೇಕು ಅಂತಹವು ದೊರಕದಿದ್ದರೆ ಪೂಜ್ಯವಾದ ಪುರಾತನ ಆಯುಧಗಳನ್ನೇ ಮುರಿದು ಬಡಿದು ಸದ್ಯೋಪಯೋಗಿಗಳಾದ 'ಹತಾರು'ಗಳನ್ನು ಮಾಡಿಕೊಂಡರೆ ನಾವು ಪಾಪಂಡಿಗಳಾಗುವೆವೆಂದು ತಿಳಿದವರಾರೂ ಹೇಳರು. ಉಳಿದವರು ಹೇಳಿಕೊಳ್ಳಲಿ.

ಶ್ರೀವರ್ಮಾ ಶಾಸ್ತ್ರಿಗಳವರ ಕನ್ನಡ 'ಪಂಚರಾತ್ರ'ವು ರಂಗಭೂಮಿಯ ಮೇಲೆ ರಂಜಿಸುವುದರಲ್ಲಿ ಒಂದಿನಿತೂ ಸಂದೇಹವಿಲ್ಲ ಅಲ್ಲದೆ ಕನ್ನಡ ಸಾಹಿತ್ಯದೇವಿಯ ಕೊರಲಹಾರದಲ್ಲಿ ಒಂದು ಹೊಸ ಹೂವಾಗಿ ಮೆರೆಯುವುದೆಂದೂ ನನ್ನ ಹಾರೈಕೆ. ರಂಗಭೂಮಿಯಲ್ಲಿ ಅವರ ಅಭಿನಯವನ್ನು ಕಂಡು ತಲೆದೂಗಿರುವವರೆಲ್ಲರೂ ಅವರ ಈ ನಾಟಕವನ್ನೂ ಓದಿ ನೋಡಿ ತಲೆದೂಗಲಿ ಎಂಬುದು ನನ್ನ ಹರಕೆ ಎಲ್ಲಕ್ಕೂ ಮುಖ್ಯವಾಗಿ ಪುರಾತನ ಪೂಜ್ಯನಾದ ಭಾಸಮಹಾಕವಿಯ ಮಂಗಲ ಮಹದಾಶೀರ್ವಾದವು ಅವರಿಗೆ ಬೆಂಬಲವಾಗಲಿ

ಮೈಸೂರು
೩-೧೦-೩೩

ಕೆ. ವಿ ಪುಟ್ಟಪ್ಪ

# ಮುನ್ನುಡಿ.

ಕೆಲವು ದಿನಗಳ ಹಿಂದೆ, ನನ್ನ ಗುರುವರ್ಯರಾದ ಶ್ರೀಮಾನ್ ಟಿ. ಎಸ್ ವೆಂಕಣ್ಣಯ್ಯನವರು, ಭಾಸಮಹಾಕವಿಯ ಪಂಚರಾತ್ರ ನಾಟಕವನ್ನು ಆಧುನಿಕ ರಂಗಸ್ಥಳದ ಮೇಲೆ ಉತ್ತಮರೀತಿಯಿಂದ ಪ್ರದರ್ಶಿಸುವುದಕ್ಕೆ ಅನುಕೂಲವಾಗುವಂತೆ ಕನ್ನಡಿಸಲು ನನಗೆ ಸೂಚನೆಯನ್ನು ಕೊಟ್ಟರು. ಆ ಸೂಚನೆಯನ್ನು ಆಜ್ಞೆಯೆಂದು ಭಾವಿಸಿ, ಆ ಉದ್ದೇಶವನ್ನೇ ಮನಸ್ಸಿನಲ್ಲಿಟ್ಟುಕೊಂಡು ಈ ಕೆಲಸವನ್ನು ಪ್ರಾರಂಭಿಸಿದೆನು.

ಇದರಿಂದ ಭಾಸಮಹಾಕವಿಯ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕೆಂಬುದು ನನ್ನ ಉದ್ದೇಶವಲ್ಲ. ಆ ಉದ್ದೇಶವುಳ್ಳವರೂ, ನನಗಿಂತಲೂ ಹೆಚ್ಚು ಅಧಿಕಾರವುಳ್ಳವರೂ ಆದ ಕೆಲವರು ಈಗಾಗಲೇ ಆ ಕೆಲಸವನ್ನು ಮಾಡಿರುವರು.

ಭಾಷಾಮರ್ಯಾದೆಯನ್ನನುಸರಿಸಿ ಶಬ್ದಶಃ ಭಾಷಾಂತರವನ್ನು ಮಾಡಬಹುದಾಗಿತ್ತು. ಆದರೆ ಪಠನಕ್ಕೆ ಎಷ್ಟೇ ಚೆನ್ನಾಗಿದ್ದರೂ, ಅದನ್ನು ಆಧುನಿಕ ರಂಗಸ್ಥಳದ ಮೇಲೆ ತಲೆದೂಗಿಸುವಂತೆ ಪ್ರಯೋಗ ಮಾಡಲು ಅಸಾಧ್ಯವೆಂದು ತೋರಿತು. ಆದ್ದರಿಂದ ಈ ಅನುವಾದನದಲ್ಲಿ ಕೆಲವು ಬದಲಾವಣೆಗಳನ್ನು ಅವಶ್ಯವಾಗಿ ಮಾಡಬೇಕಾಯಿತು. ಪಂಚರಾತ್ರವನ್ನು ಆಧುನಿಕ ರಂಗಸ್ಥಳದ ಮೇಲೆ ಪ್ರಯೋಗಾರ್ಹವಾಗಿ ಮಾಡಲು ಎಷ್ಟು ಸ್ವಾತಂತ್ರ್ಯವು ಬೇಕೋ ಅಷ್ಟನ್ನು ವಹಿಸಿ ಮೂಲ ನಾಟಕದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುತ್ತೇನೆ. ಹಿಂದೊಂದು ಕಾಲದಲ್ಲಿ ಸಾಮಾಜಿಕರೆದುರಿನಲ್ಲಿ ಈ ನಾಟಕವನ್ನು ಅಭಿನಯಿಸಿದಾಗ ಭಾಸನ ಪ್ರತಿಭೆಯು ಎಷ್ಟು ಹೊರಬಿದ್ದು ಕಾಣುತ್ತಿತ್ತೋ ಈಗ ಅಷ್ಟು

ಹೊರಬಿದ್ದು ಕಾಣಬೇಕಾದರೆ ಈ ಬದಲಾವಣೆಗಳು ಅವಶ್ಯಕ. ಈ ಬದಲಾವಣೆಗಳನ್ನು, ಭಾಸನ ಪ್ರತಿಭೆಯನ್ನು ಮೀರಿಸಲು ಮಾಡಿದ ಪ್ರಯತ್ನಗಳೆಂದು ಯಾರೂ ತಿಳಿಯಬಾರದು. ಅದು ಅಸಾಧ್ಯ. ಈ ಬದಲಾವಣೆಗಳಿಂದ, ನಾಟಕಕರ್ತೃವಾದ ಭಾಸನನ್ನು ಬರಿಯ ಕವಿಯಿಂದ ಬೇರ್ಪಡಿಸಿ, ಅವನ ನಾಟಕರಚನಾಕೌಶಲ್ಯವು ಎದ್ದು ಕಾಣುವಂತೆ ಮಾಡಲಾಗಿದೆ ಅಭಿನಯದೃಷ್ಟಿಯಿಂದ, ಮೂಲದಲ್ಲಿ ಕಾಣಬಹುದಾದ ಕೆಲವು ಸಣ್ಣ ಸಣ್ಣ ಕುಂದುಗಳನ್ನು ಬಿಡಲಾಗಿದೆ ಕೆಲವು ಪಾತ್ರಗಳ ವ್ಯಕ್ತಿತ್ವಪೂರ್ಣತೆಗಾಗಿ ಮೂಲದಲ್ಲಿ ಬೇರೆಯವರಾಡಿದ ಮಾತನ್ನು ಇಲ್ಲಿ ಇವರಿಂದ ಹೇಳಿಸಿದ್ದೇನೆ ಒಂದು ಮಾತಿನಲ್ಲಿ ಹೇಳುವುದಾದರೆ ಭಾಸನು ಎಲ್ಲಿ ಹೆಚ್ಚು ಹೆಚ್ಚಾಗಿ ಬರಿಯ ಅಲಂಕಾರಶರಣ್ಯನಾಗಿ ಮಾತ್ರ ಕಾಣುವನೋ ಅಲ್ಲಿ ಬದಲಾವಣೆಗಳೂ ಹೆಚ್ಚಾಗಿವೆ.

ಮಹಾಭಾರತದಲ್ಲಿಯೂ ಸ್ವಾತಂತ್ರ್ಯವಹಿಸಿ, ನಾಟಕದ ಕಥೆಯಲ್ಲಿ ಕಾಣುವ ವ್ಯತ್ಯಾಸಗಳನ್ನು ಭಾಸನು ಮಾಡಿರುದರಿಂದ, ಈ ಕಥಾಸನ್ನಿವೇಶವು, ಕಲಾದೃಷ್ಟಿಯಿಂದ ಉತ್ತಮ ನಾಟಕವಾಯಿತೆಂದು ನಾನು ತಿಳಿದಿರುವೆನು ರಸಪುಷ್ಟಿಗಾಗಿ ಹಾಗೆ ಮಾಡಿದ ಭಾಸನ ನಾಟಕರಚನಾ ಪ್ರತಿಭೆಯು ಕನ್ನಡಿಗರಿಗೆ ಸ್ವಲ್ಪಮಟ್ಟಿಗಾದರೂ ಕಾಣಬಂದರೆ ನಾನು ಕೃತಕೃತ್ಯನೆಂದು ಭಾವಿಸುತ್ತೇನೆ

ಈ ಅನುವಾದನದ ಶೈಲಿಯ ವಿಚಾರದಲ್ಲಿ ಎರಡು ಮಾತು ಅವಶ್ಯಕವೆಂದು ತೋರುತ್ತದೆ ಪೌರಾಣಿಕ ನಾಟಕಗಳಲ್ಲಿ ಮನೆಯ ಮಾತಿನ ವಾಡಿಕೆಯು ಸಂಪೂರ್ಣ ಪರಿಣಾಮಕಾರಿಯಾಗಲಾರದೆಂದು ನನ್ನ ನಂಬಿಕೆ. ಮಹಾರ್ಣವಸದೃಶ ಕಾವ್ಯದಲ್ಲಿ, ಪ್ರಚಂಡ ಚಂಡಮಾರುತವನ್ನು ಹೂಡಿ, ಅದ್ಭುತ ಲೀಲಾತರಂಗವನ್ನೆಬ್ಬಿಸಿ, ಅಲ್ಲಿ ಕಿರುದೆರೆಯ ಮೆಲ್ದನಿಯನ್ನು ಮಾತ್ರ ತುಂಬಿದರೆ ಅದು ಕಲೆಯ ಕೊಲೆ.

ಈ ನಾಟಕದಲ್ಲಿ ಬರುವ ಗೊಲ್ಲರ ಹೆಸರುಗಳು, ಆಧುನಿಕರ ಹೆಸರಿನಂತೆಯೇ ತೋರಿದರೂ, ಅವು ಮೂಲದಲ್ಲಿರುವ ಪ್ರಾಕೃತದ

ಅರ್ಥವನ್ನೇ ಸ್ವಲ್ಪಮಟ್ಟಿಗೆ ಹೋಲುವಂತೆ ಕಟ್ಟಿದ ಕನ್ನಡ ಅನ್ವರ್ಥ ನಾಮಗಳೆಂದು ತಿಳಿಯಬೇಕು. ಈ ನಾಟಕದಲ್ಲಿ ಅವರು ಆಡುವ ಮಾತು ಮೈಸೂರಿನ ಗ್ರಾಮ್ಯ. ಆದರೆ ಇದೇ ಅರ್ಥಬರುವಂತೆ, ಕರ್ಣಾಟಕದ ಪ್ರಾಂತಿಕ ವಿಭೇದಕ್ಕನುಸಾರವಾಗಿ ಈ ಗ್ರಾಮ್ಯವನ್ನು ಬದಲಾಯಿಸಲು ಈ ನಾಟಕದ ಪ್ರತಿಯೊಬ್ಬ ಸಂಚಾಲಕನಿಗೂ ಸ್ವಾತಂತ್ರ್ಯವುಂಟು.

ಈ ನಾಟಕವನ್ನು ಬರೆದು ಕನ್ನಡಿಗರ ಮುಂದೆ ಇಡಲು, ನನ್ನ ಗೆಳೆಯರು ಕೆಲವರು ಸಹಾಯಕರು. ಅವರಲ್ಲಿ ಮುಖ್ಯವಾಗಿ ನನ್ನ ಪ್ರಿಯಮಿತ್ರರಾದ ಶ್ರೀಯುತ ಎ. ಸೀತಾರಾಮ್, ಬಿ.ಎಸ್‌ಸಿ., ಯವರಿಗೂ, ಶ್ರೀಯುತ ಕೆ. ವಿ. ಪುಟ್ಟಪ್ಪ, ಎಂ.ಎ., ಯವರಿಗೂ, ಚಿತ್ರಪಟ್ಟಿಕೆಯನ್ನೂ, ರಟ್ಟಿನ ಮೇಲಿರುವ ಚಿತ್ರವನ್ನೂ ಬರೆದ ನನ್ನ ಮಿತ್ರರಾದ ಶ್ರೀಯುತ ಎಸ್. ರಂಗಸ್ವಾಮಿ ಅಯ್ಯಂಗಾರ್ಯರಿಗೂ ನಾನು ಎಂದೆಂದಿಗೂ ಋಣಿ. ಈ ಪುಸ್ತಕವನ್ನು ಕನ್ನಡಿಗರ ಮುಂದಿಡುವ ಸಾಹಸವಮಾಡಿರುವ ರಾಮಮೋಹನ ಕಂಪನಿಗೆ ನಾನು ಕೃತಜ್ಞನಾಗಿದ್ದೇನೆ. ಮುದ್ರಣವೆಲ್ಲವೂ ಮುದ್ದಾಗಿದೆ, ಶ್ರೀ ಪಂಚಾಚಾರ್ಯ ಮುದ್ರಾಶಾಲೆಯ ಸಂಚಾಲಕರಿಗೆ ನನ್ನ ವಂದನೆಗಳು.

ಮಹಾರಾಜರವರ ಕಾಲೇಜು, ಮೈಸೂರು
ಆಂಗಿರಸ ಆಶ್ವಯುಜ ಶು|| ೫

ಎನ್. ಎಸ್. ನಾರಾಯಣ ಶಾಸ್ತ್ರಿ.

ಈ ನಾಟಕದ ಕೆಲವು ಪಾತ್ರಗಳ ವೇಷಭೂಷಣಗಳು.



೧ ೨ ೩ ೪ ೫

# ಚಿತ್ರದ ವಿವರಣೆ.

ಅ—ಯುದ್ಧೋನ್ಮುಖನಾದ ಅಭಿಷಿಕ್ತರಾಜ.

ಆ—ಅಭಿಷಿಕ್ತನಲ್ಲದ ಕ್ಷತ್ರಿಯಕುಮಾರ—ಸಾಧಾರಣ ವೇಷಭೂಷಣಗಳು.

ಇ— ಬ್ರಾಹ್ಮಣ (ವಾನಪ್ರಸ್ಥ).

ಈ—ಕಂಚುಕೀಯ.

ಉ—ಕಾಲಾಳು.

೧. ಕುಂಡಲ, ೨. ಭುಜಕೀರ್ತಿ, ೩. ಸ್ಕಂಧಮಾಲ, ೪. ಉದರಬಂಧ, ೫ ಕಟಿಬಂಧ, ೬. ರಾಜಪುತ್ರನ ಕಿರೀಟಪಟ್ಟಿ, ೭-೮. ಮುಂದೋಳ ರಕ್ಷೆ, (ಗೋಧಾ) ೯. ಉಷ್ಣೀಷಾಂಬರ, ೧೦. ಸೀಸಕ

ಪಟ್ಟಿಕೆಯಲ್ಲಿರುವ ಚಿತ್ರಗಳು ನಾಟಕದ ಯಾವ ವ್ಯಕ್ತಿಯನ್ನಾಗಲೀ ಸಂದರ್ಭವನ್ನಾಗಲೀ ಸೂಚಿಸುವುದಿಲ್ಲ. ಇವು ಬೇರೆ ಬೇರೆ ಅಂತಸ್ತಿನ ಪಾತ್ರಗಳು ಧರಿಸಬಹುದಾದ ಆಗಿನಕಾಲದ ವೇಷಭೂಷಣಗಳನ್ನು ಸೂಚಿಸುವ ಮಾದರಿಗಳು ಮಹಾಭಾರತದಲ್ಲಿ ಕಾಣುವ ವರ್ಣನೆಗಳೂ, ಶಿಲ್ಪಶಾಸ್ತ್ರ, ಪ್ರತಿಮಾ ನಿರ್ಮಾಣಾದಿ ಆಗಮಶಾಸ್ತ್ರಗಳೂ, ಅತಿ ಪುರಾತನ ಪ್ರತಿಮೆಗಳ ಮತ್ತು ಚಿತ್ರಗಳ ಪರಿಶೀಲನವೂ ಈ ಚಿತ್ರಕ್ಕೆ ತಳಹದಿ ದೃಶ್ಯವು ಕಳೆಗಟ್ಟಬೇಕಾದರೆ ಈ ವೇಷಭೂಷಣಗಳನ್ನು ಪಾತ್ರಗಳು ಅನುಸರಿಸಲೇ ಬೇಕು.

ಮಹಾಭಾರತದಲ್ಲಿ ನೋಡಿದರೆ, ದ್ರೋಣನು ಬಿಳಿಯಬಟ್ಟೆಯನ್ನೂ, ಕರ್ಣನು ಹಳದಿಯದನ್ನೂ, ದುರ್ಯೋಧನನು ನೀಲಿಯದನ್ನೂ, ಬೃಹನ್ನಳೆಯು ಕೆಂಪುಬಟ್ಟೆಯನ್ನೂ, ಭೀಮಸೇನನು ಕಪ್ಪುಬಟ್ಟೆಯನ್ನೂ, ಗೋಗ್ರಹಣಪರ್ವ ಕಾಲದಲ್ಲಿ ಉಪಯೋಗಿಸಿದಂತೆ ಕಾಣುತ್ತದೆ.

# ಪಾತ್ರಗಳು.

ದ್ರೋಣ

ಭೀಷ್ಮ

ದುರ್ಯೋಧನ

ಕರ್ಣ

ಶಕುನಿ

ಜಯಸೇನ

ವಿರಾಟೇಶ್ವರ

ಭಗವಾನ್

ಬೃಹನ್ನಳಾ

ಭೀಮಸೇನ

ಅಭಿಮನ್ಯು

ಉತ್ತರ

ಗುರುಗಳು, ಇಬ್ಬರು ಶಿಷ್ಯರು, ಎಂಟುಮಂದಿ ಗೊಲ್ಲ ಗೊಲ್ಲತಿಯರು, ಇಬ್ಬರು ಸೇವಕರು, ಇಬ್ಬರು ಸಾರಥಿಗಳು, ಪ್ರಹರಿ, ದೂತ, ಕಂಚುಕಿ, ಭೀಷ್ಮಕ, ಸಹದೇವ, ಭೂರಿಶ್ರವ

ಸ್ಥಾನ ಹಸ್ತಿನಾವತಿ, ವಿರಾಟನಗರ ಮತ್ತು ಶಿಬಿರ

ಮಹಾಭಾರತ ಕಾಲ

# ಪಂಚರಾತ್ರ

## ಒಂದನೆಯ ದೃಶ್ಯ

[ಯಜ್ಞಮಂಟಪದ ಬಳಿಯಲ್ಲಿ. ಮೂವರು ಬ್ರಾಹ್ಮಣರು ಪ್ರವೇಶಿಸುವರು. ಒಬ್ಬರು ವೃದ್ಧರಾದ ಗುರುಗಳು, ಇನ್ನಿಬ್ಬರು ಶಿಷ್ಯರು. ಶಿಷ್ಯರಿನ್ನೂ ಚಿಕ್ಕವರು—ವಟುಗಳು, ಸುಮಾರು ಹದಿನಾರು ಹದಿನೆಂಟು ವರ್ಷದವರೆಂದು ಹೇಳಬಹುದು. ಗುರುಗಳು ಒಂದು ಕೈಯಲ್ಲಿ ಊರುಗೋಲನ್ನು ಹಿಡಿದಿರುವರು. ಶಿಷ್ಯರು ಯಜ್ಞಸಮಾರಂಭದಲ್ಲಿ ದೊರೆತ ವಸ್ತುಗಳನ್ನು ಗಂಟುಕಟ್ಟಿ ಹೊತ್ತುಕೊಂಡಿರುವರು ಮೂವರೂ ಮಾತನಾಡುತ್ತ ಪ್ರವೇಶಿಸುವರು.]

ಮೊದಲನೆಯ ಶಿಷ್ಯ—ಗುರುಗಳೇ! ಕುರುರಾಜಯಜ್ಞವೈಭವವನ್ನು ಎಷ್ಟೆಂದು ಹೇಳೋಣ!

ಗುರು—ಬ್ರಾಹ್ಮಣರ ಉಚ್ಛಿಷ್ಟಾನ್ನವು ದಿಕ್ಕು ದಿಕ್ಕಿನಲ್ಲಿಯೂ ಜಾಲಿಯ ಹೂಗೊಂಚಲಿನಂತೆ ಬಿದ್ದಿದೆ! ಹೋಮ ಧೂಮದಿಂದ ಇಲ್ಲಿರುವ ಗಿಡ ಮರ ಬಳ್ಳಿಗಳ ಹೂಗಳ ವಾಸನೆಯೂ ನಾಶವಾಗಿದೆ. ಇದರಿಂದಲೇ ಕುರುರಾಜನ ಯಜ್ಞವೈಭವವನ್ನು ತಿಳಿಯಬಹುದಲ್ಲವೆ? ಅಲ್ಲದೆ, ಕ್ರೂರಮೃಗಗಳಾದ ಹುಲಿಗಳೂ ಸಿಂಹಗಳೂ ಹುಲ್ಲೆಗಳಂತಿವೆ. ನೃಪಪುಂಗವನಾದ ಕುರುರಾಜನು ದೀಕ್ಷೆಯನ್ನು ಹೊಂದಿರುವುದು ಸಮಸ್ತ ಲೋಕವೇ ದೀಕ್ಷಿತವಾಗಿರುವಂತೆ ತೋರುತ್ತಿದೆ!

ಮೊದಲ ಶಿಷ್ಯ—ಹೌದು, ಗುರುಗಳೇ! ದೇವಶ್ರೇಷ್ಠನಾದ ಅಗ್ನಿಯು ಹವಿಸ್ಸುಗಳಿಂದ ತೃಪ್ತಿಗೊಂಡನು. ಬ್ರಾಹ್ಮಣರು ದ್ರವ್ಯಗಳಿಂದ

ತೃಪ್ತಿಗೊಂಡರು. ಪಕ್ಷಿಗಳೂ, ಗೋವುಗಳೂ, ಮನುಷ್ಯರೂ ಎಲ್ಲರೂ ತೃಪ್ತಿಗೊಂಡರು. ಹೀಗೆ ಈ ಲೋಕವೇ ಸಂತೋಷ ದಿಂದ ದುರ್ಯೋಧನನ ಸದ್ಗುಣಗಳನ್ನು ಕೊಂಡಾಡುತ್ತಿದೆ. ಇಂತಹ ಜಗವು ಸ್ವರ್ಗಸಮಾನವಾಗಿರುವುದರಲ್ಲಿ ಆಶ್ಚರ್ಯ ವೇನು ?

ಎರಡನೆಯ ಶಿಷ್ಯ—(ನೇಪಥ್ಯವನ್ನು ತೋರಿಸುತ್ತ) ಇಲ್ಲಿ ನೋಡಿ! ಅನುದಿನವೂ ವೇದಾಧ್ಯಯನಾದಿ ಕಾರ್ಯನಿರತರಾಗಿರುವುದರಿಂದ ಈ ಭೂಸು ರೋತ್ತಮರನ್ನು ರಾಜಾಧಿರಾಜರೂ ನಮಸ್ಕರಿಸಿರುವರು. ಇವರು ವಾರ್ಧಕ್ಯದಲ್ಲಿಯೂ ನಿಯಮ ಪರಾಯಣರಾಗಿರುವರು. ಶಕ್ತಿ ಗುಂದಿದ ಈ ವೃದ್ಧರು ಒಂದು ಕೈಯಲ್ಲಿ ಕೋಲನ್ನೂ ಇನ್ನೊಂದು ಕೈಯಲ್ಲಿ ಶಿಷ್ಯರ ಭುಜವನ್ನೂ ಹಿಡಿದುಕೊಂಡು ಹೋಗುತ್ತಿರು ವುದು—ನನಗೆ ಏನನ್ನೋ ಜ್ಞಾಪಕಕ್ಕೆ ತರುತ್ತಿದೆ.

ಗುರು—ಏನನ್ನು ?

ಎರಡನೆ ಶಿಷ್ಯ—ನೀವು ಕೋಪಿಸಿಕೊಳ್ಳದಿದ್ದರೆ ಹೇಳುವೆನು.

ಗುರು—ಹೇಳು ನೋಡೋಣ.

ಎರಡನೆ ಶಿಷ್ಯ—ನನಗೆ—ಅದು ಮುದಿಯಾನೆಗಳನ್ನು ನೆನಪಿಗೆ ತರುತ್ತದೆ

(ಎಲ್ಲರೂ ನಗುವರು)

ಮೊದಲ ಶಿಷ್ಯ—ಏನು ಉಪಮಾನ! ನೀನು ಕವಿಚಕ್ರವರ್ತಿಯೇ ಸರಿ!

ಗುರು—(ನೇಪಥ್ಯವನ್ನು ತೋರಿಸಿ) ಆ ಯೂಪಸ್ತಂಭವನ್ನು ನೋಡಿ ದಿರೋ? ವಸುಂಧರೆಯು ಕನಕಭುಜದಂತೆ ಪ್ರಕಾಶಮಾನ ವಾಗಿ ತೋರುತ್ತಿದೆ—ಛಿ! ಛಿ! ಆ ಬ್ರಹ್ಮಚಾರಿಗಳು ಎಷ್ಟು ಚಪಲರಾಗಿರುವರು! ಅವಭೃತಸ್ನಾನವು ಇನ್ನೂ ಮುಗಿದಿಲ್ಲ; ಈಗಾಗಲೇ ಅಗ್ನಿಪುರುಷನನ್ನು ಶಾಂತಗೊಳಿಸುತ್ತಿರುವರು— ಅಲ್ಲಿ ನೋಡಿ, ಆ ಚೈತ್ಯಾಗ್ನಿಯು ಲೌಕಿಕಾಗ್ನಿಯನ್ನು ಬಳಿಸಾ ರಲು ಕೂಡ ಬಿಡುವುದಿಲ್ಲ.

ಎರಡನೆ ಶಿಷ್ಯ—ಬ್ರಾಹ್ಮಣೋತ್ತಮನು ವೃಷಲನನ್ನು ತನ್ನ ಪಾರ್ಶ್ವದಲ್ಲಿ ಬರಗೊಡುವುದಿಲ್ಲವಲ್ಲ, ಹಾಗೆ!

ಮೊದಲ ಶಿಷ್ಯ—ಅಯ್ಯಾ, ಕವಿಚಕ್ರವರ್ತಿ! ಹಾಗೆಯೋ?—ಸರಿ. ವೇದಿಕೆಯ ಮಣ್ಣನ್ನು ನೋಡಿದೆಯೋ? ಹಸಿಯ ದರ್ಭೆಯಿಂದ ಪರಿವೃತವಾಗಿರುವುದರಿಂದ ಸ್ವಲ್ಪ ಮಾತ್ರ ಒಣಗಿರುವುದು. ಅದನ್ನೂ ಯಾವುದಕ್ಕಾದರೂ ಹೋಲಿಸು!—ಅಲ್ಲಿ ನೋಡು! ಪ್ರಫುಲ್ಲಕಮಲಗಳಿಂದ ತುಂಬಿದ ಸರೋವರವನ್ನು ಗಜರಾಜನು ಪ್ರವೇಶಿಸುವಂತೆ ಈ ಹೋಮಧೂಮವು ಯಜ್ಞಶಾಲೆಯನ್ನು ಬಿಟ್ಟು ಪ್ರಾಗ್ವಂಶಕ್ಕೆ ಹೋಗುತ್ತಿದೆ ಅಲ್ಲಿರುವ ಆ ಬ್ರಾಹ್ಮಣರು ವೈದಿಕಾಗ್ನಿಯನ್ನು ಲೌಕಿಕಾಗ್ನಿಯಿಂದ ಬೇರ್ಪಡಿಸುತ್ತಿರುವರು.

ಗುರು—ಧರ್ಮಬಾಹಿರನನ್ನು ಸಂಸರ್ಗದೋಷಕ್ಕೆ ಹೆದರಿ ನಂಟರಿಷ್ಟರು ಬಳಿ ಸೇರಿಸುವರೆ?

ಎರಡನೆ ಶಿಷ್ಯ—ಮಗುವನ್ನು ಕಳೆದುಕೊಂಡ ತಾಯಿಯು ಅತ್ತು, ಅತ್ತು, ಕಣ್ಣೀರನ್ನು ಸುರಿಸಿಯೂ ಶೋಕತಾಪವನ್ನು ಹೆಚ್ಚಿಸಿಕೊಳ್ಳುವಂತೆ........................

(ಎಂದು, ಮೊದಲನೆಯ ಶಿಷ್ಯನ ಮುಖವನ್ನು ನೋಡುವನು)

ಮೊದಲ ಶಿಷ್ಯ—ಹೇಳು, ಹೇಳು

ಎರಡನೆ ಶಿಷ್ಯ—.....................ತಣ್ಣೀರು ಚಿಮುಕಿಸಿದರೂ, ಮರದ ಸೌಟಿನಲ್ಲಿರುವ ತುಪ್ಪವು ಉಕ್ಕಿ, ಉಕ್ಕಿ ಉರಿಯುತ್ತಿರುವುದು.

ಗುರು—ಅದು ನಿಜ ಚಕ್ರವರ್ತಿಯು ಉಪಯೋಗಿಸುತ್ತಿದ್ದ ಆ ಧರ್ಮಶಕಟ ಎಂಬ ಸೌಟನ್ನೇ ಸುಟ್ಟ ಬೆಂಕಿಯು ಅಲ್ಲಿರುವ ಹಸಿಯ ದರ್ಭೆಗಳ ಮಧ್ಯದಲ್ಲಿ ಸಿಕ್ಕಿಕೊಂಡು ಕುಗ್ಗಿ ಹೋಗಿರುವುದು. ಈಗಲಾದರೋ ಗಾಳಿಯಿಂದ ಬೀಸೆಪಟ್ಟು, ಜ್ವಾಲೆಯು ಸೂರ್ಯನಂತೆ ಚಕ್ರಾಕಾರವಾಗಿ ತಿರುಗುತ್ತಿದೆ.

ಮೊದಲ ಶಿಷ್ಯ—(ನೇಪಥ್ಯವನ್ನು ನೋಡಿ) ಅಯ್ಯೋ! ಅಯ್ಯೋ! ಅಲ್ಲಿರುವ ಹುತ್ತವನ್ನು ನೋಡಿ! ಜ್ವಾಲೆಗೆ ಹೆದರಿ ಆ ಹುತ್ತದ ಬುಡದಲ್ಲಿರುವ ರಂಧ್ರದಿಂದ ಒಂದೇಸಲ ಐದು ಹಾವುಗಳು ಹೊರಬಿದ್ದಿವೆ! ಮರಣಸನ್ನಿಹಿತದೇಹದಿಂದ ಹೊರಬೀಳುವ ಪಂಚಪ್ರಾಣಗಳಂತೆ ಕಾಣುವುದಿಲ್ಲವೆ?

ಎರಡನೆ ಶಿಷ್ಯ—ಪ್ರಾಣಗಳೂ ಹೋದವಲ್ಲಪ್ಪಾ! ಸುಡುತ್ತಿರುವ ಆ ಮರದ ಪೊಟರೆಗಳಿಂದ ಪಕ್ಷಿಗಳು ಹಾರಿಯೇ ಹೋದವಲ್ಲ! ಒಂದು ಒಣಗಿದ ಮರದಿಂದ, ಪುಷ್ಪಿತ ವೃಕ್ಷಗಳನ್ನೊಳಗೊಂಡ ಈ ಅರಣ್ಯವೇ ನಾಶವಾಗುತ್ತಿದೆಯಲ್ಲ, ಗುರುಗಳೇ!

ಗುರು—ದುಷ್ಟನೊಬ್ಬನಿಂದ ಒಂದು ವಂಶವೇ ನಾಶವಾಗುವುದಿಲ್ಲವೆ?

ಮೊದಲ ಶಿಷ್ಯ—ಸುಡುತ್ತಿರುವ ಆ ಬಿದಿರುಗಳ ತೂಗಾಟವು ಮಾನವಸಂಪತ್ತಿನ ಮೇಲುಕೀಳನ್ನು ಸೂಚಿಸುತ್ತಿದೆಯಲ್ಲವೆ?

ಎರಡನೆ ಶಿಷ್ಯ—ಚೆನ್ನಾಗಿ ಹೇಳಿದೆ, ಅದು ನಿಜ. (ನೇಪಥ್ಯವನ್ನು ತೋರಿಸಿ) ಇಲ್ಲಿ ನೋಡು! ಒಣಗಿದಬಳ್ಳಿಯ ಬಿಗಿತದಿ ಸಿಕ್ಕಿದ ಆ ವೃಕ್ಷವು ಸಧ್ಯದಲ್ಲಿಯೇ ದಹಿಸಿಹೋಗುವುದು.

ಮೊದಲ ಶಿಷ್ಯ—ಅದಕ್ಕೂ ಏನಾದರೊಂದು ಉಪಮಾನವನ್ನು ಹೇಳು. ಅಥವಾ ಭಂಡಾರವೆಲ್ಲವೂ ಬರಿದಾಯಿತೋ?

ಎರಡನೆ ಶಿಷ್ಯ—(ದರ್ಪದಿಂದ) ದುಷ್ಟಸ್ತ್ರೀಸಂಸರ್ಗದಿಂದ ನರನು ಹಾಳಾಗುವಂತೆ!

ಗುರು—ಇಲ್ಲಿ ನೋಡಿ! ಗಿಡಮರಬಳ್ಳಿಗಳನ್ನು, ತೃಪ್ತಿಯಾಗುವಂತೆ ತಿಂದು ಈಗ ಅಗ್ನಿಪುರುಷನು ದಾಹವನ್ನಡಗಿಸಿಕೊಳ್ಳಲು ಮೆದೆ ಹುಲ್ಲಿನ ಮಾರ್ಗವಾಗಿ ನದಿಗಿಳಿಯುತ್ತಿರುವನು.

ಮೊದಲ ಶಿಷ್ಯ—ಅಗ್ನಿದೇವನು ಹುಲ್ಲುಮಡಿಯನ್ನುಟ್ಟು ಮರದಿಂದ ಮರಕ್ಕೆ ದಾಟುತ್ತಾ ನದಿಯ ಕಡೆಗೆ ಹಾರುತ್ತಿರುವನು, ಗುರುಗಳೇ! ಬೆಂಕಿಯ ಶಾಖದಿಂದ ಬಾಳೆಯ ಗೊನೆಗಳು ಬೆಂದು

ಕೆಳಕ್ಕೆ ಬೀಳುತ್ತಿವೆ. ಬರುವಾಗ ದಾರಿಯಲ್ಲಿ ಒಂದು ತಾಳೆಯ ಮರವು ಬೇರು ಸುಟ್ಟು, ಪರಮೇಶ್ವರನ ಪರಶುವಿನಂತೆ ನೆಲಕ್ಕುರುಳಿತು

ಎರಡನೆ ಶಿಷ್ಯ—ಓಹೋ! ಇವನ ಉಪಮಾನವನ್ನು ನೋಡಿ, ಗುರುಗಳೇ! ತಾಳೆಯ ಮರವು ಆ ಪರಶಿವನ ಪರಶುವಂತೆ!

ಮೊದಲ ಶಿಷ್ಯ—ಅಯ್ಯಾ ಕವಿಚಕ್ರವರ್ತಿ! ಆ ತಾಳೆಯಮರದಲ್ಲಿ ಜೇನುಗೂಡು ಇದ್ದುದರಿಂದ ಅದು ಪರಶುವಿನಂತೆ ಕಂಡಿತು, ತಿಳಿಯಿತೆ?

ಎರಡನೆ ಶಿಷ್ಯ—ಸರಿ, ಸರಿ. ಬಹಳ ಶ್ಲಾಘ್ಯವಾದ ಉಪಮಾನ! (ನೇಪಥ್ಯವನ್ನು ತೋರಿಸುತ್ತ) ಅಬ್ಬಬ್ಬ! ಈಗಲೀಗ, ಸಿಟ್ಟುಗೊಂಡಿದ್ದ ಸತ್ಪುರುಷನಂತೆ ಭಗವಾನ್ ಹುತಾಶನನು ಶಾಂತನಾದನು! ಐಶ್ವರ್ಯವೆಲ್ಲವನ್ನೂ ಕಳೆದುಕೊಂಡವನ ದಾನಶಕ್ತಿಯು ಬರುತ ಬರುತ ಕುಗ್ಗುವಂತೆ, ಸಮಿತ್ತುಗಳಿಲ್ಲದ ಈ ಯಜ್ಞಪುರುಷನೂ ಕುಗ್ಗಿದನು.

ಗುರು—ನೋಡಿ! ಮದ್ಯಪಾನರತನಾದವನು ತನ್ನ ವಸನಗಳನ್ನೇ ಅಡವಿಟ್ಟು ಕುಡಿಯುವಂತೆ, ಬೆಂಕಿಯು ಸ್ರುಕ್ಕು, ಭಾಂಡ, ಅರಣಿ, ದರ್ಭೆ ಇವುಗಳನ್ನೇ ಸುಟ್ಟಿರುವುದು.

ಷ್ಯ—ಗುರುಗಳೇ! ನಾವಿಲ್ಲಿಗೆ ಬರುವ ಮೊದಲು, ಕುರುಕುಲ ಸಾರ್ವಭೌಮನಾದ ದುರ್ಯೋಧನನು ಭೀಷ್ಮ ದ್ರೋಣರೊಡನೆ, ಸಕಲ ರಾಜರಿಂದ ಪರಿವೃತನಾಗಿ ಆಸ್ಥಾನಕ್ಕೆ ಹೋಗುತ್ತಿದ್ದನು. ಬುದ್ಧಿಶಾಲಿಗಳಾದ ಪುರಜನರು, "ಹೀಗೆಯೇ ಯಜ್ಞಗಳನ್ನು ಮಾಡಿಸು. ಮಹೀವಲಯವನ್ನೆಲ್ಲಾ ಗೆಲ್ಲು. ರೋಷವನ್ನು ಬಿಟ್ಟು ಸ್ವಜನರಲ್ಲಿ ದಯೆಯುಳ್ಳವನಾಗಿರು. ವೀರಪುರುಷರಾದ ಪಾಂಡವರನ್ನು ಪರಿಗ್ರಹಿಸು" ಎಂದು ಮೃದುಮಧುರ ವಚನಗಳಿಂದ ಪಾಂಡವರಿಗಾಗಿ ಬಿನ್ನೈಸುತ್ತಿದ್ದರು. ಬನ್ನಿ, ಗುರುಗಳೇ! ನಾವೂ ಆಸ್ಥಾನಕ್ಕೆ ಹೋಗೋಣ.

ಮೊದಲ ಶಿಷ್ಯ—ಆದಿರಲಿ, ಅಲ್ಲಿ ನೋಡಿ ಗುರುಗಳೇ! ಹುತಾಶನನಿಗೆ ತುತ್ತಾದ ವೃಕ್ಷಗಳಿಗಾಗಿ ನದಿಯ ದಡದ ಬಿದಿರುಮೆಳೆಗಳು ತರ್ಪಣವನ್ನು ಕೊಡುವುದಕ್ಕೋ ಎಂಬಂತೆ ಗಾಳಿಯಲ್ಲಿ ಒಂದೊಂದು ಸಲ ನೀರನ್ನು ಸೋಂಕುತ್ತಿವೆ

ಗುರು—ಇನ್ನೇನು ತಾನೆ ಮಾಡಬಲ್ಲವು?—ಹುಂ. ನಾವೂ ಸಂಧ್ಯಾವಂದನಾದಿ ಕರ್ಮಗಳನ್ನು ಮಾಡಲು ಹೋಗೋಣ, ನಡೆಯಿರಿ.

—ಮೂವರೂ ಹೋಗುವರು—

ತೆರೆಯು ಬೀಳುವುದು

# ಎರಡನೆಯ ದೃಶ್ಯ

[ಯಜ್ಞಶಾಲೆಯ ಬಳಿಯಲ್ಲಿ ಒಂದು ಆಸ್ಥಾನ ಮಂದಿರ. ಭೀಷ್ಮಕ, ಭೂರಿಶ್ರವ, ಅಭಿಮನ್ಯು, ಸಹದೇವ ಮತ್ತು ಇನ್ನೂ ಕೆಲವು ರಾಜರುಗಳೂ ಕುಳಿತಿರುವರು. ಆಸ್ಥಾನಮಧ್ಯದಲ್ಲಿ ಒಂದು ಪೀಠವೂ ಎಡಬಲದ ಸಾಲಿನಲ್ಲಿ ಒಂದೆರಡು ಪೀಠಗಳೂ ಬರಿದಾಗಿರುವುವು. ದ್ವಾರಪ್ರದೇಶಗಳಲ್ಲಿ ಒಬ್ಬಿಬ್ಬರು ಸೇವಕರು ನಿಂತಿರುವರು. ಭೀಷ್ಮ ಮತ್ತು ದ್ರೋಣ ಇವರು ರಂಗಸ್ಥಳದ ಮುಂಭಾಗದಲ್ಲಿ ನಿಂತು ಮಾತನಾಡುತ್ತಿರುವರು. ಭೀಷ್ಮನು ಆಜಾನುಬಾಹುವಾದ ವೃದ್ಧವೀರ. ನರೆತ ಗಡ್ಡಮೀಸೆಗಳಿವೆ. ರಾಜಯೋಗ್ಯವಾದ ಉಡಿಗೆ ತೊಡಿಗೆಗಳು, ಆದರೆ ಕಿರೀಟವಿಲ್ಲ. ದ್ರೋಣನು ತೇಜಸ್ವಿಯಾದ ಬ್ರಾಹ್ಮಣ. ಗಡ್ಡಮೀಸೆಗಳಿವೆ. ತಲೆಯಮೇಲೆ ಕೂದಲನ್ನು ಜಟಾಮುಕುಟದಂತೆ ಕಟ್ಟಿರುವನು. ಅಲ್ಲಿರುವ ರಾಜರುಗಳೂ ರಾಜಯೋಗ್ಯವಸ್ತ್ರಾಭರಣಭೂಷಿತರಾಗಿರುವರು. ಅಭಿಷಿಕ್ತರಾಜರು ಮಾತ್ರ ಕಿರೀಟವನ್ನು ಧರಿಸಿರುವರು. ಉಳಿದವರು ಯಥಾಯೋಗ್ಯವಾದ ಶಿರೋವೇಷ್ಟಿಯನ್ನು ಧರಿಸಿರುವರು. ಕ್ಷತ್ರಿಯರೆಲ್ಲರೂ ಸಾಧಾರಣವಾಗಿ ಒರೆಯುಳ್ಳ ಕತ್ತಿಯನ್ನು ಸೊಂಟದಲ್ಲಿ ಕಟ್ಟಿಕೊಂಡಿರುವರು. ನಡುವಿಗೆ ಶೆರಗುಬಿಟ್ಟ ಅಂಗವಸ್ತ್ರವನ್ನು ಬಿಗಿದಿರುವರು. ಸೇವಕರು ದಂಡಧಾರಿಗಳಾಗಿ ಸನ್ನಿವೇಶಯೋಗ್ಯವಾದ ಉಡುಪನ್ನು ಹಾಕಿಕೊಂಡಿರುವರು. ಸಭೆಯಲ್ಲಿ ಕೆಲ ಬ್ರಾಹ್ಮಣರೂ ಇರುವರು.]

ದ್ರೋಣ—ಭೀಷ್ಮ ! ದುರ್ಯೋಧನನು ಧರ್ಮವನ್ನು ಅವಲಂಬಿಸಿದುದರಿಂದ ನಾನು ಅನುಗ್ರಹೀತನಾದೆ. ಏಕೆಂದರೆ ಶಿಷ್ಯನ ದೋಷಕ್ಕೆ, ಬಂಧುಮಿತ್ರರನ್ನು ಬಿಟ್ಟು ಗುರುವನ್ನೇ ಕಾರಣವಾಗಿ ಮಾಡುವುದು ಸಾಮಾನ್ಯವು. ಚಿಕ್ಕಂದಿನಲ್ಲಿಯೇ ಮಗನನ್ನು ಗುರುವಿಗೆ ಒಪ್ಪಿಸುವುದರಿಂದ ಹೆತ್ತವರಿಗೂ ಆ ದೋಷವಿಲ್ಲ.

ಭೀಷ್ಮ—(ನೇಪಥ್ಯವನ್ನು ನೋಡಿ) ಆದೋ ನೋಡಿ, ದುರ್ಯೋಧನನು ಬರುತ್ತಿರುವನು. (ಆ ಕಡೆಯೇ ನೋಡುತ್ತ) ಕದನಪ್ರಿಯನಾದ

ಇವನು, ವಿಜಯೋನ್ಮತ್ತನಾಗಿ, ಐಶ್ವರ್ಯದೊಡನೆ ಏಳಿಗೆಯನ್ನೂ ಅಪಯಶಸ್ಸನ್ನೂ ಸಂಪಾದಿಸಿದನು; ಆದರೆ ಈ ಪುಣ್ಯಪ್ರದವಾದ ಯಜ್ಞಕಾರ್ಯವನ್ನು ಕೈಕೊಂಡುದುದರಿಂದ ಈತನೇ ಈಗ ಅತಿ ಸೌಮ್ಯನಾಗಿಯೂ ಪುಣ್ಯಶಾಲಿಯಾಗಿಯೂ ತೋರುವನಲ್ಲವೆ?

— ದುರ್ಯೋಧನ, ಕರ್ಣ, ಶಕುನಿ ಇವರು ಬರುವರು —

(ದುರ್ಯೋಧನನು ರಾಜಯೋಗ್ಯವಾದ ವಸ್ತ್ರವನ್ನು ಉಟ್ಟು, ಉತ್ತರೀಯವನ್ನು ಉಪವೀತವಾಗಿ ಹೊದ್ದಿರುವನು. ತಲೆಯ ಮೇಲೆ ರಾಜಮುಕುಟ. ಕರ್ಣನು ಅಭಿಷಿಕ್ತರಾಜ, ಸೊಂಟದಲ್ಲಿ ಒರೆಯಿರುವ ಕತ್ತಿ. ಶಕುನಿಯು ಎತ್ತರವಾದ ತೆಳ್ಳನೆಯ ಮನುಷ್ಯ. ಚಾಣಾಕ್ಷನಾದವನ ಮುಖ. ಮೂವರೂ ಮಾತನಾಡುತ್ತ ಬರುವರು)

ದುರ್ಯೋಧನ—ಮಿತ್ರಾ, ಅತಿಶ್ರದ್ಧೆಯಿಂದ ನಾನು ಮಾಡಿರುವ ಈ ಶುಭಕಾರ್ಯವು ಗುರುಜನರಿಗೆ ಸಂತೋಷವನ್ನುಂಟುಮಾಡಿರುವಂತೆ ತೋರುತ್ತದೆ. ಲೋಕವೆಲ್ಲವೂ ನನ್ನನ್ನು ವಿಶ್ವಾಸಾರ್ಹನೆಂದು ತಿಳಿದು ಆದರಿಸುತ್ತದೆ. ಅಪಕೀರ್ತಿಯಲ್ಲವೂ ನಾಶವಾಗಿ ಸುಗುಣಸಂಪತ್ತಿಯನ್ನು ಹೊಂದಿರುವೆನು.—ಸ್ವರ್ಗವು ಸತ್ತ ಬಳಿಕೆನ್ನುವ ಮಾತು ಸುಳ್ಳು, ಅಂಗರಾಜ; ಅದು ಖಂಡಿತವಾಗಿಯೂ ಪರೋಕ್ಷವಾದುದಲ್ಲ. ಈಗಾಗಲೇ ಈ ನಮ್ಮ ಭೂಮಿಯಲ್ಲಿಯೇ ಆ ಸ್ವರ್ಗ ಸುಖವು ತಲೆದೋರುತ್ತದೆಯಲ್ಲವೆ?

ಕರ್ಣ—ಗಾಂಧಾರೀಮಾತಾ, ನ್ಯಾಯರೀತಿಯಿಂದ ಸಂಪಾದಿಸಿದ ಹಣವನ್ನು ಯೋಗ್ಯಮಾರ್ಗದಲ್ಲಿ ವಿನಿಯೋಗಿಸಿರುವೆಯಾದ್ದರಿಂದ ನೀನು ಕೃತಕೃತ್ಯನು. ನೋಡು! ಕ್ಷತ್ರಿಯರ ವೃದ್ಧಿಯೆಲ್ಲವೂ ಬಾಣಾಧೀನವಾಗಿರುವುದು. ಹೀಗೆ ಗಳಿಸಿದ ಹಣವನ್ನು ಪುತ್ರರಿಗಾಗಿ ಶೇಖರಿಸಿಡುವವನು ಖಂಡಿತವಾಗಿಯೂ ವಂಚಿತನಾಗುವನು. ಭೂಸುರೋತ್ತಮರಿಗೆ ಸಕಲ ಐಶ್ವರ್ಯಗಳನ್ನು ಕೊಟ್ಟು ಮಕ್ಕಳಿಗೆ ಬಿಲ್ಲನ್ನು ಮಾತ್ರ ಕೊಡಬೇಕು.

ಶಕುನಿ—ಪವಿತ್ರಳಾದ ಜಾಹ್ನವಿಯ ಮಡಿಲಿನಿಂದ ಬಂದ ಅಂಗರಾಜನು ಶ್ಲಾಘ್ಯವಾದುದನ್ನೇ ಹೇಳಿದನು.

ಕರ್ಣ—ಇಕ್ಷ್ವಾಕು, ಅಂಬರೀಷಾದಿ ಸಾರ್ವಭೌಮರು ಸಕಲೈಶ್ವರ್ಯ ಗಳನ್ನೂ ಹೊಂದಿದ್ದರು. ಅವರೀಗ ನಷ್ಟಶರೀರಿಗಳಾಗಿದ್ದರೂ ತಾವು ಮಾಡಿದ ಯಜ್ಞಯಾಗಾದಿ ಕಾರ್ಯಗಳಿಂದ ಎಂದೆಂದಿಗೂ ಯಶಃಕಾಯರಲ್ಲವೆ ?

ಭೀಷ್ಮ—ಗಾಂಧಾರೀತನಯ, ಈ ಯಜ್ಞಸಮಾಪ್ತಿಯು ಆಗಿರುವಂತೆಯೇ ನಿನ್ನ ಇಷ್ಟಾರ್ಥಗಳೆಲ್ಲವೂ ಕೈಗೂಳ್ಳಲಿ.

ದುರ್ಯೋಧನ—ಅನುಗೃಹೀತನಾದೆ. (ದ್ರೋಣನನ್ನು ನೋಡಿ) ಆಚಾರ್ಯ ! ಅಭಿವಾದನಮಾಡುವೆನು.

ದ್ರೋಣ—ವತ್ಸ, ಇದೇನಿದು ? ಇದು ಅಕ್ರಮವಲ್ಲವೆ ?

ದುರ್ಯೋಧನ—ಹಾಗಾದರೆ ಕ್ರಮವೇನು, ಆಚಾರ್ಯ ?

ದ್ರೋಣ—ಇದೇನು, ಹೀಗೆ ಕೇಳುವೆ ? (ಭೀಷ್ಮನನ್ನು ತೋರಿಸುತ್ತ) ಈ ಮಹಾಮಹಿಮನು ಕಾರಣಾಂತರಗಳಿಂದ ಮನುಷ್ಯಜನ್ಮಗ್ರಹಣ ಮಾಡಿದ ದೈವಪುರುಷನು. ಈ ಭೀಷ್ಮನೆದುರಿನಲ್ಲಿ ಮೊದಲನೆಯ ಅಭಿವಂದನೆಯು ಬೇರೆಯವರಿಗುಂಟೆ ?

ಭೀಷ್ಮ—ಬೇಡ, ಬೇಡ—ಹಾಗೆನ್ನಬೇಡಿ ಆಚಾರ್ಯರೆ! ನಾನು ಅನೇಕ ಕಾರಣಗಳಿಂದ ನಿಮಗೆ ನಿಕೃಷ್ಟನು. ಮಾತೃಗರ್ಭದಲ್ಲಿ ಹುಟ್ಟಿದವನು ನಾನು; ತಾವಾದರೋ ಸ್ವಯಂಜಾತರು. ನನಗೆ ಆಯುಧವೇ ವೃತ್ತಿ; ತಮಗಾದರೋ ಶಸ್ತ್ರನ್ಯಾಸವೇ ಸ್ವಾಭಾವಿಕ. ತಾವಾದರೋ ಬ್ರಾಹ್ಮಣರು; ನಾನು ಎಷ್ಟಾದರೂ ಕ್ಷತ್ರಿಯವಂಶಜನು. ತಾವು ಗುರುಗಳು; ನಾನು ತಮ್ಮ ಶಿಷ್ಯರಲ್ಲೊಬ್ಬನು.

ದ್ರೋಣ—ಮಹಾತ್ಮರು ತಮ್ಮನ್ನು ತಾವೇ ಎಂದಿಗೂ ಹೊಗಳಿಕೊಳ್ಳುವುದಿಲ್ಲ. ಆಗಲಿ, ವತ್ಸ ! ನನ್ನನ್ನೇ ನಮಸ್ಕರಿಸು.

ದುರ್ಯೋಧನ—ಗುರುವರ್ಯ, ಅಭಿವಂದಿಸುವೆನು. (ಎಂದು ಮೊಣಕಾಲೂರಿ ನಮಸ್ಕರಿಸುವನು. ದ್ರೋಣನು ದುರ್ಯೋಧನನ ತಲೆಯಮೇಲೆ ಕೈಯಿಡುವನು )

ದ್ರೋಣ—ಬಾ, ಬಾ, ವತ್ಸ ! ನಿನಗೆ ಎಂದಿಗೂ ಇಂತಹ ಅವಭೃತಸ್ನಾನಗಳಿಂದ ಮಾತ್ರ ಬಳಲಿಕೆಯುಂಟಾಗಲಿ.

ದುರ್ಯೋಧನ—(ಎದ್ದು ನಿಂತು) ಅನುಗೃಹೀತನಾದೆ. ತಾತನೆ ! ಅಭಿವಂದಿಸುವೆನು. (ಎಂದು ಭೀಷ್ಮನಿಗೆ ಮೊಣಕಾಲೂರಿ ನಮಸ್ಕರಿಸುವನು.)

ಭೀಷ್ಮ—(ಕೈಹಿಡಿದೆತ್ತಿ) ಮಗನೆ, ಬಾ ! ಇಂದಿನಂತೆಯೇ ನಿನಗೆ ಯಾವಾಗಲೂ ಶಾಂತಿಯಿರಲಿ.

ದುರ್ಯೋಧನ—ಪರಮಾನುಗ್ರಹ. (ಶಕುನಿಯನ್ನು ನೋಡಿ) ಮಾತುಲ ! ವಂದಿಸುವೆನು. (ಕೈಮುಗಿಯುವನು)

ಶಕುನಿ—ಹೀಗೆಯೇ ಐಶ್ವರ್ಯವನ್ನು ವಿನಿಯೋಗಿಸಿ, ಸಮಸ್ತ ಯಾಗಗಳನ್ನೂ ಮಾಡಿ, ಜರಾಸಂಧನಂತೆ ರಾಜಸೂಯಯಾಗವನ್ನು ಕೈಕೊಂಡು ಸಕಲ ರಾಜರನ್ನೂ ಜಯಿಸುವನಾಗು.

ದ್ರೋಣ—(ತನಗೆ ತಾನೇ) ಓಹೋ ! ಆಶೀರ್ವಚನದಲ್ಲಿಯೂ ಶಕುನಿಯು ಉದ್ಯೋಗವನ್ನು ಸೂಚಿಸುತ್ತಿರುವನು ! ಆಹಾ ! ಈ ಕ್ಷತ್ರಿಯ ಕುಮಾರನು ವಿರೋಧಪ್ರಿಯನೇ ಆಗಿರುವನು.

ದುರ್ಯೋಧನ—ಕರ್ಣ, ಪ್ರಿಯಮಿತ್ರ ! ಗುರುಹಿರಿಯರನ್ನು ನಮಸ್ಕರಿಸಿರುವೆನು ; ಇನ್ನು ನಿನ್ನ ಸ್ನೇಹವನ್ನು ಸವಿಯುವೆನು. (ಎಂದು ಕರ್ಣನ ಭುಜದ ಮೇಲೆ ಕೈಯಿಡುವನು.)

ಕರ್ಣ—ಗಾಂಧಾರೀಮಾತಾ, ಯಜ್ಞವ್ರತದಿಂದ ಕೃಶನಾದ ನಿನ್ನ ಸ್ನೇಹಾಲಿಂಗನ ಬಯಕೆಯು ಔದಾರ್ಯಸೂಚಕವಾಗಿದೆ. ನೀನೇ ಇಷ್ಟಪಡದಿದ್ದಲ್ಲಿ, ನಿನ್ನ ಧೀರವಚನಗಳನ್ನು ಕೇಳಿ, ನಿನ್ನನ್ನು ರಾಜರ್ಷಿಯೆಂದು ಭಾವಿಸಿ, ಬಳಿಸಾರಲಂಜುತ್ತಿದ್ದೆನು.

**ದುರ್ಯೋಧನ**—ಮಿತ್ರ, ನಿನ್ನ ಸ್ನೇಹವೆಂದಿಗೂ ಕುಂದದಿರಲಿ.

**ದ್ರೋಣ**—ಪುತ್ರಾ, ದುರ್ಯೋಧನ, ಮಹೇಂದ್ರನ ಪ್ರಿಯಸಖನಾದ ಭೀಷ್ಮಕರಾಜನು, ಇದೋ ನಿನಗೆ ಜಯವನ್ನು ಕೋರಲು ಬಂದಿರುವನು.

(ದುರ್ಯೋಧನನು ಅತ್ತಕಡೆಗೆ ತಿರುಗುವನು. ಭೀಷ್ಮಕನು ಕೈಮುಗಿಯುವನು.)

**ದುರ್ಯೋಧನ**—(ಕೈ ಮುಗಿದು) ಆರ್ಯ! ನಿಮಗೆ ಸುಖಾಗಮನವು.

**ಭೀಷ್ಮ**—ವತ್ಸ, ದುರ್ಯೋಧನ! ದಕ್ಷಿಣಾಪಥಕ್ಕೆ ಅಗಳ್ತಿಯಂತಿರುವ ಈ ಭೂರಿಶ್ರವನೃಪಾಲನು ನಿನಗೆ ಜಯವನ್ನು ಬಯಸುತ್ತಿರುವನು.

(ದುರ್ಯೋಧನನು ಆ ಕಡೆ ತಿರುಗಲು ಭೂರಿಶ್ರವನು ಕೈಮುಗಿಯುವನು)

**ದುರ್ಯೋಧನ**—(ಕೈಮುಗಿದು) ಆರ್ಯ! ನಿಮಗೆ ಸ್ವಾಗತವು.

**ದ್ರೋಣ**—(ಅಭಿಮನ್ಯುವಿನ ಭುಜದಮೇಲೆ ಕೈಯಿಟ್ಟು, ಒಂದು ಹೆಜ್ಜೆ ಇಬ್ಬರೂ ಮುಂದೆ ಬಂದು) ಪುತ್ರಾ, ದುರ್ಯೋಧನ! ನಿನ್ನ ಈ ಯಜ್ಞಸಮಾರಂಭವು ವಿಜೃಂಭಣೆಯಿಂದ ಬೆಳಗಲೆಂದು ಅನುಮೋದಿಸಿ ವಾಸುದೇವ ಬಲರಾಮರು, ಅಭಿಮನ್ಯುವನ್ನು ಪ್ರತಿನಿಧಿಯನ್ನಾಗಿ ಕಳಿಸಿರುವರು. ಇದೋ, ಸೌಭದ್ರನು ನಿನ್ನನ್ನು ಗೌರವದಿಂದ ಅಭಿವಂದಿಸುತ್ತಿರುವನು. (ಅಭಿಮನ್ಯುವು ಮೊಣಕಾಲೂರಿ ನಮಸ್ಕರಿಸುವನು. ದುರ್ಯೋಧನನು ಆತನನ್ನು ಆಶೀರ್ವದಿಸುವಷ್ಟರಲ್ಲಿ—)

**ಶಕುನಿ**—(ಸಹದೇವನನ್ನು ಮುಂದಕ್ಕೆ ಕರೆತಂದು) ದುರ್ಯೋಧನ! ಜರಾಸಂಧಪುತ್ರನಾದ ಈ ಸಹದೇವನು ನಿನ್ನನ್ನು ನಮಸ್ಕರಿಸುತ್ತಿರುವನು. (ಸಹದೇವನು ಮೊಣಕಾಲೂರಿ ನಮಸ್ಕರಿಸುವನು ದುರ್ಯೋಧನನು ಆ ಕಡೆಗೆ ತಿರುಗುವನು ಅಭಿಮನ್ಯುವು ದರ್ಪ ಮತ್ತು ಕ್ರೋಧಸೂಚಕ ದೃಷ್ಟಿಯಿಂದ ಶಕುನಿಯನ್ನು ನೋಡುತ್ತ ಮೇಲೆದ್ದು ತನ್ನ ಸ್ಥಳದಲ್ಲಿ ಕುಳಿತುಕೊಳ್ಳುವನು, ದ್ರೋಣನು ನೊಂದವನಂತೆ ತೋರುವನು.)

**ದುರ್ಯೋಧನ**—(ಸಹದೇವನ ಬಳಿ ಬಂದು) ವತ್ಸ, ಇಲ್ಲಿ ಬಾ. ನಿನ್ನ ತಂದೆಯಂತೆ ನೀನೂ ಪರಾಕ್ರಮಶಾಲಿಯಾಗು.

ಭೀಷ್ಮಕ—ಈ ಸರ್ವರಾಜಮಂಡಲವು ನಿನಗೆ ಜಯವನ್ನು ಕೋರುತ್ತಿರುವುದು.

ದುರ್ಯೋಧನ—(ಶಿರಬಾಗಿ ಕೈಮುಗಿದು) ಅನುಗೃಹೀತನಾದೆ. (ಸುತ್ತಲೂ ನೋಡಿ) ಇದು ಸರ್ವರಾಜಮಂಡಲವಾದರೆ (ಶಕುನಿಯನ್ನು ನೋಡಿ) ವಿರಾಟೇಶ್ವರನೇಕೆ ಬಂದಿಲ್ಲ?

ಶಕುನಿ—ನಾನು ದೂತನನ್ನು ಕಳುಹಿಸಿರುವೆ. ನಡುದಾರಿಯಲ್ಲಿ ಬರುತ್ತಿರಬಹುದು.

ದುರ್ಯೋಧನ—(ದ್ರೋಣನಿಗೆ ಕೈಮುಗಿದು) ಆಚಾರ್ಯದೇವ! ಧರ್ಮವನ್ನೂ ಧನುರ್ವಿದ್ಯೆಯನ್ನೂ ಉಪದೇಶಿಸಿದ ಗುರುವರ್ಯ! ದಕ್ಷಿಣೆಯನ್ನು ಸ್ವೀಕರಿಸಿ ನನ್ನನು ಆಶೀರ್ವದಿಸಬೇಕು.

ದ್ರೋಣ—ಏನು? ದಕ್ಷಿಣೆಯೆ? ಇರಲಿರಲಿ. ಕಾಲಾನಂತರದಲ್ಲಿ ನಾನೇ ಬೇಡಿ ತೆಗೆದುಕೊಳ್ಳುವೆನು.

ದುರ್ಯೋಧನ—ಏನೇನು? ಗುರುವರ್ಯರಾದ ತಾವು ಬೇಡುವುದೆ?

ಭೀಷ್ಮ—ಅಯ್ಯಾ, ಇದರಿಂದೇನುಪ್ರಯೋಜನ? ನೋಡು, ಬಾಲ್ಯದಲ್ಲಿಯೇ ನಿನ್ನ ತಂದೆಯು ನಿನ್ನನ್ನು ಈತನಿಗೆ ವಶಮಾಡಿದನು. ಕ್ರಮೇಣ ನೀನೂ ಖ್ಯಾತಿವಂತನಾಗಿ ಚಕ್ರವರ್ತಿಯಾದೆ. ಯಾಗಗಳನ್ನು ಮಾಡಿ ಸೋಮಪಾನಮಾಡಿದೆ. ಆದರೇನು? ಕ್ಷತ್ರಿಯಾಚಾರ್ಯನಾದ ಈ ಬ್ರಾಹ್ಮಣೋತ್ತಮನು ದರಿದ್ರನೆಂದ ಮೇಲೆ ನಿನ್ನ ಆ ದ್ರವ್ಯವೇತಕ್ಕೆ?—ಅದರಿಂದೇನು ಫಲ? ಅದರದೇನು ವಿಶೇಷ?

ದುರ್ಯೋಧನ—ಪೂಜ್ಯರೆ! ತಾವೇನನ್ನು ಅಪೇಕ್ಷಿಸುವಿರಿ? ಹೇಳಬೇಕು, ನಾನು ನಡೆಯಿಸಿಕೊಡುವೆನು.

ದ್ರೋಣ—ಪುತ್ರಾ, ದುರ್ಯೋಧನ! ಕ್ರಮೇಣ ಹೇಳುವೆನು.

ದುರ್ಯೋಧನ—ಆರ್ಯ! ಇದೇಕಿಂತು ಅನುಮಾನಿಸುವಿರಿ? ತಾವು ನನಗೆ ಉಪದೇಶಮಾಡಿದ ಗುರುಗಳು—ಪ್ರಾಣಾಧಿಕ್ಯರು!

ನಾನೂ ಸಾಹಸಬಲದಿಂದ ಶೂರರಲ್ಲಿ ಗಣನೆಯನ್ನು ಪಡೆದಿರುವೆನು. ತಮ್ಮ ಇಷ್ಟಾರ್ಥವೇನೆಂಬುದನ್ನು ಹೇಳಿ. ನನ್ನ ಕೈಯಲ್ಲಿ ಗದಾದಂಡವಿರುವವರೆಗೂ ತಾವು ಕೇಳಿದ ಸಮಸ್ತವೂ ತಮ್ಮದೇ ಅಲ್ಲವೆ?

**ದ್ರೋಣ**—(ಕಣ್ಣೀರು ಹಾಕುತ್ತಾ) ಪುತ್ರಾ! ಹೇಳಲು ಇಷ್ಟಪಡುವೆನಪ್ಪಾ; ಆದರೆ ಪರಿತಾಪದಿಂದ ಉಕ್ಕುತ್ತಿರುವ ಕಣ್ಣೀರಿನ ವೇಗವು ನನ್ನನ್ನು ಬಾಧಿಸುತ್ತಿರುವುದು. (ವಸ್ತ್ರದಿಂದ ಕಣ್ಣುಗಳನ್ನು ಮುಚ್ಚಿಕೊಳ್ಳುವನು.)

**ಭೀಷ್ಮ**—ಪೌತ್ರ, ದುರ್ಯೋಧನ! ನಿನ್ನ ಪರಿಶ್ರಮವೆಲ್ಲವೂ ವಿಫಲವಾಯಿತೆ?

**ದುರ್ಯೋಧನ**—(ಪರಿತಾಪದಿಂದ) ಯಾರಲ್ಲಿ?

**ಸೇವಕ**—(ನಮಸ್ಕರಿಸಿ) ಮಹಾರಾಜನೆ, ಏನಪ್ಪಣೆ?

**ದುರ್ಯೋಧನ**—ಶುದ್ಧೋದಕವನ್ನು ತೆಗೆದುಕೊಂಡು ಬಾ.

**ಸೇವಕ**—ಅಪ್ಪಣೆ.

—ಅವನು ಹೋಗುವನು—

**ಕರ್ಣ**—(ದುರ್ಯೋಧನನನ್ನು ಉದ್ದೇಶಿಸಿ) ಆಹಾ! ಇದೇನು, ಆಚಾರ್ಯರು ಕಣ್ಣೀರು ಸುರಿಸುತ್ತಿರುವರು?

—ಸೇವಕನು ನೀರಿನ ಗಿಂಡಿಯನ್ನು ತೆಗೆದುಕೊಂಡು ಬರುವನು—

**ಸೇವಕ**—ಜಯವಾಗಲಿ, ಮಹಾರಾಜನಿಗೆ! ಇದೋ ಶುದ್ಧೋದಕವು.

**ದುರ್ಯೋಧನ**—ಎಲ್ಲಿ, ಕೊಡು. (ಗಿಂಡಿಯನ್ನು ತೆಗೆದುಕೊಂಡು) ಆಚಾರ್ಯರೆ, ಕಣ್ಣೀರಿನಿಂದ ಮಲಿನವಾದ ಮುಖವನ್ನು ದಯೆಗೈದು ಇನ್ನು ಶುದ್ಧಿಮಾಡಬೇಕು.

**ದ್ರೋಣ**—ಇರಲಿರಲಿ. ನನ್ನ ಇಷ್ಟಾರ್ಥಸಿದ್ಧಿಯೇ ಮುಖೋದಕವಾಗಲಿ.

**ದುರ್ಯೋಧನ**—ಅಯ್ಯೋ! ಮೊದಲಿನಂತೆಯೇ ನಾನು ವಚನದ್ರೋಹಿಯೆಂದೂ, ಕೊಡುವೆನೆಂದುದನು ಕೊಡಲಾರೆನೆಂದೂ ತಾವು

ತಿಳಿಯಬಾರದು. ನೂರಾರು ಬಾಣಗಳ ಘರ್ಷಣದಿಂದ ಕಠಿಣವಾದ ತಮ ಹಸ್ತವನ್ನು ನೀಡಬೇಕು. ಇಗೋ ಈ ನೀರಿನಿಂದ ತಮ್ಮ ಇಷ್ಟಾರ್ಥವನ್ನು ಧಾರೆಯೆರೆಯುವೆನು. (ಎಂದು ನೀರನ್ನು ಧಾರೆಯೆರೆಯುವನು. ದ್ರೋಣನು ತೆಗೆದುಕೊಳ್ಳುವನು. ನೀರಿನ ಗಿಂಡಿಯನ್ನು ಸೇವಕನು ತೆಗೆದುಕೊಂಡುಹೋಗುವನು.)

ದ್ರೋಣ—(ಸಂತೋಷವನ್ನು ಸೂಚಿಸುತ್ತ) ಈಗಲೀಗ ನನ್ನ ಹೃದಯದಲ್ಲಿ ವಿಶ್ವಾಸವು ಮೂಡುತ್ತಿರುವುದು. ಮಗನೆ, ಕೇಳು. ನಿರಾಶ್ರಯರಾಗಿ ಹನ್ನೆರಡುವರ್ಷಗಳಿಂದಲೂ ಕಾಡುಮೇಡುಗಳಲ್ಲಿ ಅಲೆಯುತ್ತಿರುವ ಆ ಪಾಂಡವರೊಡನೆ ರಾಜ್ಯವನ್ನು ವಿಭಾಗಿಸಿಕೊ. ಇದೇ ನಾನು ನಿನ್ನಲ್ಲಿ ಬೇಡುವ ಭಿಕ್ಷೆ, ಕೇಳುವ ದಕ್ಷಿಣೆ.

ಶಕುನಿ—(ಉದ್ವೇಗದಿಂದ ಅಡ್ಡ ಬಂದು) ಕೂಡದು, ಕೂಡದು! ಗುರುವೆಂದು ನಿನ್ನಲ್ಲಿ ವಿಶ್ವಾಸವಿಟ್ಟಿರುವ ದುರ್ಯೋಧನನಿಗೆ, ಯಜ್ಞದ ನೆಪವನ್ನು ಮಾಡಿಕೊಂಡು, ಈ ಧರ್ಮವಂಚನೆಯನ್ನು ಮಾಡುವುದು ಆಚಾರ್ಯನಾದ ನಿನಗೆ ಒಪ್ಪುವುದೋ?

ದ್ರೋಣ—(ಕ್ರೋಧದಿಂದ) ಏನು, ಏನು! ಧರ್ಮವಂಚನೆಯೆ? ಎಲವೋ! ಶಕುನಿ, ನಿನ್ನ ಗಾಂಧಾರಗರ್ವವನ್ನು ಇಲ್ಲಿ ತೋರಬೇಡ! ನಿನ್ನಂತೆಯೇ ಸಮಸ್ತ ಲೋಕವೂ ಅಯೋಗ್ಯವೆಂದು ತಿಳಿದೆಯಾ? ಪಿತ್ರಾರ್ಜಿತವಾದ ರಾಜ್ಯವನ್ನು ಸಹೋದರರೊಡನೆ ವಿಭಾಗಿಸಿಕೊಳ್ಳೆಂದರೆ ಅದು ವಂಚನೆಯೆ? ಅವರು ಕೇಳಿದಾಗ ಕೊಡುವುದಕ್ಕಿಂತಲೂ ಅವರೇ ಬಲಾತ್ಕಾರದಿಂದ ತೆಗೆದುಕೊಳ್ಳುವುದು ಉತ್ತಮವಾದುದೆ?

ಕರ್ಣ—ಏನು! ಬಲಾತ್ಕಾರದಿಂದಲೆ?

ಭೀಷ್ಮ—ಪೌತ್ರ, ದುರ್ಯೋಧನ, ನಾವು ಈಗ ಯೋಚಿಸಬೇಕಾಗಿರುವುದು ಅವಭೃತಸ್ನಾನದ ವಿಚಾರವಾಗಿಯಲ್ಲವೆ? ಮಿತ್ರಮುಖ,

ಶತ್ರುವಾಗಿರುವ ಈ ಶಕುನಿಯ ಮಾತನ್ನು ಕೇಳಬೇಡ. ವತ್ಸ, ಇಲ್ಲಿ ಕೇಳು. ಪಾಂಚಾಲರಾಜಗುವರಿಯೊಡನೆ ಪಾಂಡವರು ಕಾಡುಮೇಡುಗಳ ಧೂಳಿಯಲ್ಲಿ ಅಲೆಯುತ್ತಿರುವುದೂ, ಅವರಿಗೆ ನೀನು ಪ್ರತಿಕೂಲನಾಗಿರುವುದೂ, ನಿನಗೆ ಅವರು ವಿರುದ್ಧರಾಗಿ ರುವುದೂ, ಇವೆಲ್ಲಕ್ಕೂ ಈ ಶಕುನಿಯ ಅಹಂಕಾರವೇ ಕಾರ ಣವು.

ದುರ್ಯೋಧನ—ಅದಿರಬಹುದು. ಆಚಾರ್ಯ, ಆದರೆ ತಮ್ಮಲ್ಲಿ ಒಂದು ಮಾತನ್ನು ಮಾತ್ರ ಕೇಳುವೆನು.

ದ್ರೋಣ—ಅದೇನು ಹೇಳು.

ದುರ್ಯೋಧನ—ಆ ಪಾಂಡವರು ಬಲಾತ್ಕಾರ ಸಮರ್ಥರಾಗಿದ್ದರೆ, ಹಿಂದೆ ಸಭಾಮಧ್ಯದಲ್ಲಿ ರಾಜ್ಯವನ್ನೂ ಮಾನವನ್ನೂ ಅವರಿಂದ ನಾವು ಕಸಿದುಕೊಂಡೆವಲ್ಲಾ, ಆಗ ಅವರ ರೋಷವು ಎಲ್ಲಿಹೋಗಿತ್ತು ?

ದ್ರೋಣ—ಈ ವಿಷಯದಲ್ಲಿ ಧರ್ಮಚ್ಛಲದಿಂದ ಜೂಜಾಡಿ ವಂಚಿತನಾ ಗಿರುವ ಆ ಯುಧಿಷ್ಠಿರನನ್ನು ಕೇಳಬೇಕು. ಆ ಸಮಯದಲ್ಲಿ ಕೆರಳಿದ ಕೇಸರಿಯಂತಿದ್ದ ಭೀಮಸೇನನನ್ನು ಅವನಲ್ಲವೆ ತಡೆ ದುದು ?

ಶಕುನಿ—(ಕೃತಕಭಯವನ್ನು ನಟಿಸುತ್ತ) ತಡೆಯದೆ ಇದ್ದಿದ್ದರೆ ?

ದ್ರೋಣ—(ಶಕುನಿಯನ್ನು ನೋಡದೆಯೆ) ತಡೆಯದೆ ಇ-ದ್ದಿ-ದ್ದ-ರೆ ! ಸಭಾಂಗ ಣದಲ್ಲಿದ್ದ ಆ ಭೀಮಸ್ತಂಭಗಳೇ ಭೀಮನ ಗದೆಯಾಗುತ್ತಿದ್ದವು ! ಅಲ್ಲದೆ, ಈಗ (ದುರ್ಯೋಧನನನ್ನು ನೋಡುತ್ತಲೂ, ಶಕುನಿಯ ಕಡೆಗೆ ಕೈತೋರಿಸುತ್ತಲೂ) ಹೀಗೆ ಆಕ್ಷೇಪಿಸುತ್ತಿರುವ ಈ—ಈ ಶಕು ನಿಯ ಸೊಲ್ಲೂ ಕೇಳಿಬರುತ್ತಿರಲಿಲ್ಲ !

(ಶಕುನಿಯು ಕ್ರೋಧಯುಕ್ತವಾದ ದೃಷ್ಟಿಯಿಂದ ದ್ರೋಣನನ್ನು ನೋಡು ವನು.)

**ಭೀಷ್ಮ**—ಯಾವುದೋ ಮಾತಿನಿಂದ ಎಲ್ಲಿಗೋ ಬಂದಿರಿ. ಆಚಾರ್ಯ ದೇವ! ನಮಗೆ ಗುರುತರವಾಗಿರುವುದು ನಮ್ಮ ಕಾರ್ಯಸಾಧನೆ ಯಲ್ಲದೆ ಈ ಕಲಹವಲ್ಲ.

**ದ್ರೋಣ**—ಅದೇತಕ್ಕೆ ಅವರೆದುರಿಗೆ ಹಲ್ಲುಗಿರಿಯಬೇಕು? ಕಲಹವೇ ಆಗುವುದಾದರೆ ಆಗಲಿ.

**ಭೀಷ್ಮ**—ಆಚಾರ್ಯದೇವ, ಶಾಂತರಾಗಿ. ಪೌತ್ರಾ, ಕೇಳು. ಬಲಹೀ ನರೂ, ದುಃಖಿಗಳೂ, ನಿರಾಶ್ರಯರೂ ಆಗಿರುವ ಆ ಪಾಂಡವರು ಅಹಂಕಾರವನ್ನು ಬಿಟ್ಟು, ದಯೆಗಾಗಿ ನಿನ್ನನ್ನು ಬೇಡುತ್ತಿರು ರುವರು. ನೀನು ಎಷ್ಟಾದರೂ ಅವರೆಲ್ಲರಿಗೂ ಹಿರಿಯನು, ಅವರ ವಿಶ್ವಾಸಕ್ಕೆ ಪಾತ್ರನಾಗಿರುವೆ. ನೀನೀಗ ಅವರನ್ನು ನಿನ್ನ ಕುಟುಂಬವರ್ಗದಲ್ಲಿ ಸೇರಿಸಿಕೊಳ್ಳುವೆಯಾ ಅಥವಾ ಅವರು ಆ ಅರಣ್ಯದ ಮೃಗಗಳೊಂದಿಗೆ ಅಲ್ಲಿಯೇ ಇರುವುದೆ?

**ಶಕುನಿ**—ಅಲ್ಲಿಯೇ—ಅಲ್ಲಿಯೇ ಇರಲಿ.

**ಕರ್ಣ**—(ದ್ರೋಣನನ್ನು ಪಕ್ಕಕ್ಕೆ ಕರೆದು) ಗುರುದೇವ! ತವಕಪಡದಿರಿ. ದುರ್ಯೋಧನನ ಸ್ವಭಾವವನ್ನು ತಾವು ಕಂಡಿರುವಿರಿ. ಎಷ್ಟೇ ಯೋಗ್ಯವಾದುದಾದರೂ ರುಚಿಸದಿರುವ ಸಲಹೆಯನ್ನು ಅವನು ಅನುಮೋದಿಸುವುದಿಲ್ಲ. ಅಲ್ಲದೆ, ತನಗಿಂತಲೂ ಇತರರು ಯೋಗ್ಯರೆಂದಲ್ಲಿ ಅವನು ಸಹಿಸನು. ಈಗ ಯಜ್ಞಕಾರ್ಯವು ಇನ್ನೂ ಉಳಿದಿರುವುದರಿಂದ ಶಿಷ್ಯನನ್ನು ರಕ್ಷಿಸಬೇಕು. ಅನೇಕ ದೋಷಗಳುಳ್ಳ ಈ ಆನೆಯನ್ನು ಬಹಳ ಎಚ್ಚರಿಕೆಯಿಂದ ವಶ ಪಡಿಸಿಕೊಳ್ಳಬೇಕು.

**ದ್ರೋಣ**—ಅಪ್ಪಾ, ಕರ್ಣ! ಬ್ರಾಹ್ಮಣತೇಜಸ್ಸು ನಿಂದೆಯನ್ನು ಸಹಿ ಸದಪ್ಪಾ. ಸಕಾಲದಲ್ಲಿ ನೀನು ಜ್ಞಾಪಿಸಿದೆ. ನಿನ್ನ ಸಲಹೆಯಂ ತೆಯೇ ನಡೆಯುವೆನು. ವತ್ಸ, ದುರ್ಯೋಧನ ನಾನು ಯಾರು?

ದುರ್ಯೋಧನ—(ಮುಗುಳ್ನಗೆಯಿಂದ) ಇದೇನು, ಗುರುದೇವ, ಹೀಗೆ ಕೇಳು ವಿರಿ ? ತಾವು ನನಗೆ ಪರಮಪೂಜ್ಯರಾದ ಆಚಾರ್ಯರು.

ದ್ರೋಣ—ಹಾಗಾದರೆ ನಿನ್ನ ಮೇಲೆ ನನಗೆ ಸ್ವಲ್ಪವಾದರೂ ಅಧಿಕಾರ ವಿರುವುದಷ್ಟೆ ?

ದುರ್ಯೋಧನ—ಇದೇನಿದು, ಆಚಾರ್ಯರೇ ? ನನ್ನೊಬ್ಬನ ಮೇಲೆ ಮಾತ್ರ ಅಧಿಕಾರವಲ್ಲ; ತಾವು ನನ್ನ ಕುಲಕ್ಕೇ ಪ್ರಭುಗಳು.

ಭೀಷ್ಮ—(ಕರ್ಣನೊಡನೆ) ಆಹಾ ! ಈಗಲೀಗ ಆಚಾರ್ಯನು ಸರಿಯಾದ ಮಾರ್ಗವನ್ನು ಹಿಡಿದನು. ದುರ್ವಿನೀತರಿಗೆ ಅವರಂತೆ ಸ್ವಲ್ಪ ಬಿಡುವುದೇ ಯುಕ್ತವು.

ದ್ರೋಣ—(ದುರ್ಯೋಧನನಿಗೆ) ಇದೀಗ ಯುಕ್ತವಾದ ಮಾತು. ನಾನು ನಿನ್ನನ್ನು ಮೋಸಗೊಳಿಸಿದ್ದಲ್ಲಿ ಅದು ನಿನ್ನ ದೋಷದಿಂದೇನೂ ಅಲ್ಲ. ಈಗ ನಾನು ತೊಂದರೆಕೊಟ್ಟಲ್ಲಿ ಅದರಿಂದ ನಿನಗೆ ಲಾಭ ವೇನಾದರೂ ಬರಬಹುದು. ದೊಡ್ಡ ಮನೆತನದಲ್ಲಿ ಮನಸ್ತಾಪ ವುಂಟಾದರೆ ಧರ್ಮಾಧಿಕಾರಿಗಳ ಮಾತಲ್ಲವೆ ಶಾಂತಿಯನ್ನು ಸ್ಥಾಪಿಸುವುದು ?

ದುರ್ಯೋಧನ—ಆದುದರಿಂದಲೇ, ಈ ವಿಷಯದಲ್ಲಿ ಯೋಗ್ಯವಾದ ಅಭಿ ಪ್ರಾಯವನ್ನು ಕೇಳಬೇಕೆಂದಿರುವೆನು.

ದ್ರೋಣ—ಯಾರನ್ನು ಕೇಳಬೇಕೆಂದಿರುವೆ ?—ಭೀಷ್ಮನನ್ನೆ, ಕರ್ಣನನ್ನೆ, ಕೃಪನನ್ನೆ ಯಾರನ್ನು ? ಸಿಂಧುರಾಜನಾದ ಜಯದ್ರಥನನ್ನೆ ? ಅಥವಾ ಅಶ್ವತ್ಥಾಮನನ್ನೆ, ವಿದುರನನ್ನೆ ? ಅವರಲ್ಲದಿದ್ದರೆ ನಿನ್ನ ಮಾತಾಪಿತೃಗಳನ್ನೆ ? ಯಾರನ್ನು ಕೇಳಬೇಕೆಂದಿರುವೆ, ವತ್ಸ, ಹೇಳು ?

ದುರ್ಯೋಧನ—ಇವರು ಯಾರನ್ನೂ ಅಲ್ಲ ; ನನ್ನ ಮಾವನನ್ನು ಕೇಳ ಬೇಕೆಂದಿರುವೆನು.

ದ್ರೋಣ—(ತನಗೆ ತಾನೆ) ಆಹಾ! ಶಕುನಿಯನ್ನೆ? ನಮ್ಮ ಕಾರ್ಯವು ಕೆಟ್ಟಿತು.

ದುರ್ಯೋಧನ—ಮಾತುಲ, ಇಲ್ಲಿ ಬಾ. ಮಿತ್ರ, ಕರ್ಣ ನೀನೂ ಇಲ್ಲಿ ಬಾ.

ಶಕುನಿ—ಇಗೋ ಬಂದೆ. (ಹೊರಡಲುದ್ಯುಕ್ತನಾಗುವನು. ಅಷ್ಟರಲ್ಲಿ ದ್ರೋಣನು ಅವನನ್ನು ಉದ್ದೇಶಿಸಿ ಮಾತನಾಡುವನು. ದುರ್ಯೋಧನನೂ ಕರ್ಣನೂ ಒಂದು ಪಕ್ಕಕ್ಕೆ ಸರಿಯುವರು).

ದ್ರೋಣ—ವತ್ಸ, ಗಾಂಧಾರರಾಜ! ವೃದ್ಧರಾದ ನಮಗೆ ಅತಿ ಜಾಗ್ರತೆಯಾಗಿ ಸಿಟ್ಟುಬರುವುದು. ಚಪಲತೆಯಿಂದ ನಾನಾಡಿದ ಮಾತುಗಳನ್ನು ಕ್ಷಮಿಸಿಬಿಡು. ಆ ಕಠಿನೋಕ್ತಿಗಳ ಶಮನಾರ್ಥವಾಗಿ ಆಲಿಂಗಿಸುವೆನು, ಬಾ. (ಎಂದು ಕೈ ಚಾಚುವನು)

ಶಕುನಿ—ಇರಲಿ, ಇರಲಿ. ತಾವು ಕುಳಿತುಕೊಳ್ಳಿ, ಬಂದೆ. (ತನಗೆ ತಾನೆ) ಆಹಾ! ಈ ಆಚಾರ್ಯನು ಎಂತಹ ಮೋಸಗಾರನು! ತನ್ನ ಕಾರ್ಯಸಾಧನೆಗಾಗಿ ಎಷ್ಟು ಚಮತ್ಕಾರವಾಗಿ ಮಾತನಾಡುತ್ತಿರುವನು!

(ದ್ರೋಣನು ಖಿನ್ನನಾಗಿ ತನ್ನ ಪೀಠದ ಬಳಿಗೆ ಹೋಗುವನು.)

ಭೀಷ್ಮ—(ತನಗೆ ತಾನೆ) ತನ್ನ ಶಿಷ್ಯರಲ್ಲಿರುವ ವಾತ್ಸಲ್ಯಕ್ಕಾಗಿ, ಆಚಾರ್ಯನು ಶಕುನಿಯನ್ನೂ ಯಾಚಿಸುತ್ತಿರುವನು! ಅಷ್ಟಾದರೂ, ಆ ಶಕುನಿಯು ಮಾತ್ರ ತನ್ನ ವಕ್ರತೆಯನ್ನು ಬಿಡುವುದಿಲ್ಲ.

(ದುರ್ಯೋಧನನೂ, ಎಲ್ಲರೂ ಪೀಠಗಳಲ್ಲಿ ಕುಳಿತುಕೊಳ್ಳುವರು.)

ದುರ್ಯೋಧನ—ಮಾತುಲ! ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡುವುದರಲ್ಲಿ ನಿನ್ನ ಅಭಿಪ್ರಾಯವೇನು?

ಶಕುನಿ—ಅಭಿಪ್ರಾಯವೇನು! ಕೊಡಕೂಡದೆಂಬುದೇ ನಿಶ್ಚಯ.

ದುರ್ಯೋಧನ—ಕೊಡಬಹುದೆಂದೇಕೆ ತೀರ್ಮಾನಿಸಬಾರದು, ಮಾತುಲ?

ಶಕುನಿ—ರಾಜ್ಯವನ್ನು ಕೊಡುವುದೇ ಯುಕ್ತವಾದರೆ ನಮ್ಮನ್ನೇಕೆ ಕೇಳಬೇಕು? ರಾಜ್ಯಾರ್ಧವನ್ನೇ ಏಕೆ, ಎಲ್ಲವನ್ನೂ ಕೊಟ್ಟುಬಿಡು!

ದುರ್ಯೋಧನ—ಮಿತ್ರ, ಅಂಗರಾಜ! ನೀನು ಏತಕ್ಕೆ ಮೌನದಿಂದಿರುವೆ?

ಕರ್ಣ—(ಎದ್ದು ನಿಂತು) ನಾನು ಏನು ಹೇಳಲಿ? ಭ್ರಾತೃಸ್ನೇಹವು ಶ್ಲಾಘ್ಯವೆಂಬುದನ್ನು, ಅದನ್ನು ಸವಿದು ಪರಿಪಾಲಿಸಿದ ಶ್ರೀರಾಮನ ಚರಿತೆಯಿಂದಲೇ ನಾವು ತಿಳಿಯುವುದಿಲ್ಲವೆ? ಅಂತಹ ಭ್ರಾತೃತ್ವವನ್ನು ನಾನು ನಿಷೇಧಿಸುವುದಿಲ್ಲ. ಆದರೆ ಕ್ಷಮಿಸುವುದೂ ಕ್ಷಮಿಸದಿರುವುದೂ ನಿನಗೆ ಸೇರಿದುದು. ಯುದ್ಧಪ್ರಸಕ್ತಿ ಬಂದಲ್ಲಿ ನಿನ್ನ ನೆರವಿಗೆ ಬರುವುದು ನನ್ನ ಕರ್ತವ್ಯ. (ಕುಳಿತು ಕೊಳ್ಳುವನು)

ದುರ್ಯೋಧನ—(ಸ್ವಲ್ಪ ಯೋಚಿಸಿ) ಮಾತುಲ! ಬಲಶಾಲಿಗಳಾದ ಶತ್ರುಗಳಿಂದ ತುಂಬಿಯೂ, ಜೀವನವು ಕಷ್ಟಸಾಧ್ಯವಾಗಿಯೂ ಇರುವ ಯಾವುದಾದರೂ ಪ್ರಾಂತ್ಯವನ್ನು ಕಂಡಿದ್ದರೆ ಹೇಳು. ಪಾಂಡವರು ಅಲ್ಲಿ ವಾಸಮಾಡಲಿ.

ಶಕುನಿ—ನಿಧಾನಿಸು, ಕೌರವರಾಜಾ! ಅಂತಹ ಪ್ರಾಂತ್ಯವಾದರೂ ಭೂಮಿಯಮೇಲಿರುವುದುಂಟೆ? ಪಾರ್ಥನಿದ್ದಲ್ಲಿ ಅವನಿಗಿಂತಲೂ ಬಲಶಾಲಿಗಳಾದ ಶತ್ರುಗಳಿರುವರೆ? ಧರ್ಮನಂದನನು ಕಾಲಿಟ್ಟ ಮೇಲೆ ಎಂತಹ ಬೆಂಗಾಡಾದರೂ ಫಲಭರಿತವಾಗುವುದಿಲ್ಲವೆ?

ದುರ್ಯೋಧನ—ಆದರೆ, ಈಗ ನಾನು ಗುರುವಿನ ಅಂಗೈಯಲ್ಲಿ ಧಾರೆಯೆರೆದಿರುವೆನಲ್ಲಾ? ಪೃಥಿವಿಯಲ್ಲಿರುವತನಕ ನನ್ನನ್ನು ಋಣಿಯನ್ನಾಗಿ ಮಾಡಿರುವ ಆ ಪ್ರಮಾಣವಚನವನ್ನು ಈ ಹಿರಿಯರೆಲ್ಲರೂ ಕೇಳಿರುವರು. ಇದು ನಿನಗೆ ಯುಕ್ತವಲ್ಲವೆಂದು ತೋರಿದರೂ ನಾನು ವಂಚಕನೆನಿಸಿಕೊಳ್ಳಲಾರೆ. ಆದುದರಿಂದ ಈ ಪ್ರಮಾಣವನ್ನು ಪೂರ್ಣಮಾಡಲು ನಿಶ್ಚಯಿಸಿರುವೆನು.

ಶಕುನಿ—ನೀನು ವಚನದ್ರೋಹಿಯಾಗಬಾರದೆಂದಷ್ಟೆ?

ದುರ್ಯೋಧನ—ಹೌದು, ನಾನು ಅನೃತವಾಡಲಾರೆ.

ಶಕುನಿ—ಹಾಗಾದರೆ ಸ್ವಲ್ಪ ನಿಧಾನಿಸು. (ದ್ರೋಣನ ಕಡೆಗೆ ಹೋಗಿ) ಆಚಾರ್ಯ! ಕುರುರಾಜನು ತಮ್ಮಲ್ಲಿ ಬಿನ್ನೈಸಲು ಕಾದಿರುವನು.

ದ್ರೋಣ—ಗಾಂಧಾರರಾಜ! ಅದೇನು ನೀನೇ ಹೇಳು.

ಶಕುನಿ—ಐದುರಾತ್ರಿಯೊಳಗಾಗಿ ಪಾಂಡವರ ಸುದ್ದಿಯು ತಿಳಿದುಬಂದಲ್ಲಿ ಅವರಿಗೆ ಈತನು ಅರ್ಧರಾಜ್ಯವನ್ನು ಕೊಡಲೊಪ್ಪಿರುವನು. ಆದುದರಿಂದ ನೀವು ಅವರನ್ನು ಕರೆತರಬಹುದು.

(ಎಂದು ತನ್ನ ಪೀಠಕ್ಕೆ ಬರುವನು)

ದ್ರೋಣ—(ಕ್ರೋಧ ಮತ್ತು ನಿಕೃಷ್ಟಭಾವದಿಂದ ನೋಡುತ್ತ) ಅದೇನು ಮಾತನ್ನು ಹೇಳುವೆ? ನನ್ನನ್ನು ವಂಚಿಸಬೇಕೆಂದು ಈ ರೀತಿ ಹೇಳುವೆಯಾ? ಹನ್ನೆರಡು ವರ್ಷಗಳಿಂದಲೂ ಯಾರ ಕಣ್ಣಿಗೂ ಬೀಳದಿರುವ ಆ ಪಾಂಡವರನ್ನು ನಾನು ಪಂಚರಾತ್ರಗಳಲ್ಲಿ ಕರೆತರುವುದೆ? ಅದೇತಕ್ಕೆ ಹೀಗೆ ಮುಚ್ಚುಮರೆ ಮಾಡುವಿರಿ? ದಾನವನ್ನು ಕೊಡುವುದಿಲ್ಲವೆಂದೇಕೆ ಸ್ಪಷ್ಟವಾಗಿ ಹೇಳಬಾರದು?

ಭೀಷ್ಮ—ಪೌತ್ರ, ದುರ್ಯೋಧನ! ಧರ್ಮಕಾರ್ಯದಲ್ಲಿ ವಂಚನೆ ಬೇಡವಪ್ಪಾ! ಈ ಕಾರ್ಯದಿಂದ ನಾನೂ ಸಂಪ್ರೀತನಾಗುವೆನು. ನೋಡು! ಪಾಂಡವರು ಒಂದು ವರ್ಷದಲ್ಲಿಯಾಗಲಿ ಅಥವಾ ಇನ್ನೂ ನೂರುವರ್ಷದಲ್ಲಿಯಾಗಲಿ ಬರಲಿ ಅವರಿಗೆ ಸಲ್ಲುವ ರಾಜ್ಯವನ್ನು ವಿಭಾಗಿಸಿ ಕೊಟ್ಟುಬಿಡು. ಎಲೈ ಕುರುವೀರಾ! ನಿನ್ನ ಪ್ರತಿಜ್ಞೆಯನ್ನು ಮಾತ್ರ ಪಾಲಿಸದಿರಬೇಡ. ಕುರುವಂಶಜರು ಯಾವಾಗಲೂ ಪ್ರತಿಜ್ಞಾಪರಾಯಣರೆಂಬುದನ್ನು ಮರೆಯದಿರು.

ದುರ್ಯೋಧನ—ಸರಿ, ಸರಿ. ನಾನೂ ಹಾಗೆಯೇ ನಿಶ್ಚಯಿಸಿರುವನು, ತಾತ!

ದ್ರೋಣ—(ಮುಂದೆಬಂದು, ತನಗೆ ತಾನೆ) ಈ ನನ್ನ ಮನೋರಥವು ಬೇಗ ಪೂರ್ಣವಾಗಬೇಕೆಂದು ಮನಸ್ಸು ತವಕಪಡುತ್ತಿರುವುದು. ಹಿಂದೆ, ಕ್ಷಣಮಾತ್ರದಲ್ಲಿ ಲಂಕೆಗೆ ಹಾರಿ, ಸೀತಾವೃತ್ತಾಂತವನು ತಂದ ಕಪಿವೀರನ ವೇಗವು ನನಗೂ ಇರಬಾರದೆ?.......

ಆದರೆ ಈ ವಿಶಾಲವಾದ ಪೃಥಿವಿಯಲ್ಲಿ ಪಾಂಡವರ ಸುದ್ದಿಯನ್ನೆಲ್ಲಿಂದ ತರಲಿ?

—ಸೇವಕನು ಬರುವನು—

ಸೇವಕ—ಮಹಾರಾಜನಿಗೆ ಜಯವಾಗಲಿ! ವಿರಾಟನಗರಿಗೆ ಹೋಗಿದ್ದ ದೂತನು ಬಂದಿರುವನು.

ದುರ್ಯೋಧನ—ಬೇಗ ಬರಮಾಡು.

ಸೇವಕ—ಅಪ್ಪಣೆ.

—ಅವನು ಹೋಗುವನು—

—ವಿರಾಟನಗರಿಯ ದೂತನು ಬರುವನು—

ದೂತ—(ನಮಸ್ಕರಿಸಿ) ಮಹಾರಾಜನಿಗೆ ಜಯವಾಗಲಿ.

ಶಕುನಿ—ವಿರಾಟೇಶ್ವರನು ಬಂದಿರುವನೆ?

ದೂತ— ವ್ಯಸನದಲ್ಲಿದ್ದುದರಿಂದ ಬರಲಿಲ್ಲವಂತೆ.

ದುರ್ಯೋಧನ—ವಿರಾಟೇಶ್ವರನಿಗೆ ವ್ಯಸನವೆ?

ದೂತ—ಮಹಾಪ್ರಭೂ! ಅವಧರಿಸಬೇಕು. ವಿರಾಟೇಶ್ವರನಿಗೆ ಆಪ್ತ ಬಾಂಧವರಾಗಿ ಕೀಚಕನೂ ಉಪಕೀಚಕರೂ ನೂರುಮಂದಿ ಇದ್ದರು. ಯಾವನೋ ರಾತ್ರಿವೇಳೆಯಲ್ಲಿ, ಅವರೆಲ್ಲರನ್ನೂ ಬರಿಯಬಾಹುಗಳಿಂದಲೇ ಸಂಹರಿಸಿರುವನಂತೆ. ಅವರ ಶರೀರದಲ್ಲಿ ಶಸ್ತ್ರದಿಂದುಂಟಾದ ಗಾಯವು ಒಂದಾದರೂ ಇರಲಿಲ್ಲವಂತೆ.

ದುರ್ಯೋಧನ—ಏನು ಶಸ್ತ್ರವಿಲ್ಲದೆಯೇ ಹತರಾದರೆ?

(ಸಭೆಯಲ್ಲಿ ಎಲ್ಲರೂ ಮಾತನಾಡಲು ಸ್ವಲ್ಪ ಗಲಭೆಯಾಗುವುದು ಈ ಸಮಯದಲ್ಲಿ ಭೀಷ್ಮನು ಕುಳಿತ ಸ್ಥಳದಿಂದ ಎದ್ದು ಮುಂದೆ ಬರುವನು.)

ಭೀಷ್ಮ—(ತನಗೆತಾನೆ) ಇದೇನು! ಶಸ್ತ್ರಗಳಾವುವನ್ನೂ ಉಪಯೋಗಿಸಿಲ್ಲವಂತೆ! ಬಾಹುಗಳಿಂದಲೇ ಹೊಡೆಯಪಟ್ಟು ಮೃತರಾಗಿರುವರಂತೆ! (ಯೋಚಿಸಿ, ಬಗೆಹರಿಯಲು, ದ್ರೋಣನನ್ನು ಕುರಿತು) ಆಚಾರ್ಯರೆ, ಆ ಪಂಚರಾತ್ರದ ಗಡುವಿಗೆ ಒಪ್ಪಿಕೊಳ್ಳಿ.

ದ್ರೋಣ—ಅದರಿಂದೇನು ಪ್ರಯೋಜನ?

ಭೀಷ್ಮ—(ಇನ್ನೂ ಹತ್ತಿರಕ್ಕೆ ಬಂದು ತಗ್ಗಿದ ದನಿಯಲ್ಲಿ) ಇದು ಬಾಹುಬಲಶಾಲಿಯಾದ ಭೀಮಸೇನನಲೀಲೆ. ಇಲ್ಲಿರುವ ಈ ನೂರುಮಂದಿ ಭ್ರಾತೃಗಳ ಮೇಲಿರುವ ರೋಷವನ್ನು ಆ ನೂರುಮಂದಿಯ ಮೇಲೆ ತೀರಿಸಿರುವನು.

ದ್ರೋಣ—(ಇನ್ನೂ ಅನುಮಾನಿಸುತ್ತ) ಇದು ಹೀಗೆಂದು ನೀನು ಹೇಗೆಬಲ್ಲೆ ?

ಭೀಷ್ಮ—ಅದೇಕೆ ಪಂಡಿತರೆ! ನದಿಯ ದಡದಲ್ಲಿ ಚಿಕ್ಕ ಕರುಗಳು ಎಳೆಯ ಕೊಂಬುಗಳಿಂದ ಅಗೆದಿದ್ದರೆ, ದೊಡ್ಡ ಗೂಳಿಗಳಿಗೆ ಅವುಗಳ ಗುರುತಾಗುವುದಿಲ್ಲವೆ ?

ದ್ರೋಣ—ದೊಡ್ಡ ಗೂಳಿಗಳೆ? (ಕ್ಷಣಕಾಲ ಯೋಚಿಸಿ) ಓಹೋ! ತಿಳಿಯಿತು. ಹಾಗಾದರೆ, ನಮ್ಮ ಕಾರ್ಯವು ಕೈಗೂಡಿದಂತೆಯೇ ಸರಿ. (ದುರ್ಯೋಧನನನ್ನು ಕುರಿತು ಉತ್ಸಾಹದಿಂದ) ವತ್ಸ, ದುರ್ಯೋಧನ! ನೀನು ಆಗ ಹೇಳಿದ ಐದುದಿನಗಳ ಗಡುವಿಗೆ ನಾನು ಒಪ್ಪಿಕೊಂಡಿದ್ದೇನೆ.

ದುರ್ಯೋಧನ—(ಮುಗುಳ್ನಗೆಯಿಂದ ಶಕುನಿಯನ್ನು ನೋಡುತ್ತ) ಓಹೋ! ಆಗಬಹುದು.

ದ್ರೋಣ—(ಸಭೆಯನ್ನು ಉದ್ದೇಶಿಸಿ) ಯಜ್ಞಸಮಾರಂಭಕ್ಕೆ ದಯೆಮಾಡಿರುವ ರಾಜರುಗಳಿರಾ! ಕಿವಿಗೊಟ್ಟು ಕೇಳಿ. ಕುರುರಾಜನಾದ ದುರ್ಯೋಧನನು—ಅಲ್ಲ, ಅವನೊಬ್ಬನೇ ಅಲ್ಲ—ಮಾತುಲನಾದ ಶಕುನಿಯೊಡನೆ ನಿಷ್ಕರ್ಷೆಮಾಡಿ, ಇಂದಿನಿಂದ ಐದು ದಿನದಲ್ಲಿ ಪಾಂಡವರ ಸುದ್ದಿಯನ್ನು ತಂದಲ್ಲಿ, ಅವರಿಗೆ ಅರ್ಧರಾಜ್ಯವನ್ನು ಕೊಡುವೆನೆಂದು ಪ್ರತಿಜ್ಞೆ ಮಾಡಿರುವನು. ಅಲ್ಲವೆ, ವತ್ಸ?

ದುರ್ಯೋಧನ—ಹೌದು, ಹೌದು. ಅದೇ ನನ್ನ ಪ್ರತಿಜ್ಞೆ.

ದ್ರೋಣ—ಬೇಕಾದರೆ, ಇನ್ನೂ ಎರಡು ಮೂರು ಸಲ ಯೋಚಿಸಿ ನೋಡು.

ಶಕುನಿ—ಹುಂ! ಈಗೇಕೆ! ಸಮಯ ಬರಲಿ.

ದ್ರೋಣ—ಗಾಂಗೇಯ, ನೀನು ಏನು ಹೇಳುವೆ?

ಭೀಷ್ಮ—(ತನಗೆ ತಾನೆ) ಆಚಾರ್ಯನ ಹರ್ಷವು ಎಲ್ಲಿ ಮೀರಿದರೆ ಕಷ್ಟ. ಈಗ ವಂಚಿತನಾಗಿರುವ ದುರ್ಯೋಧನನು ಇದರ ಸುಳುವನ್ನು ತಿಳಿದು ಎಲ್ಲಿ ಆಚಾರ್ಯನನ್ನೇ ವಂಚಿಸುವನೋ ಎಂದು ಸಂಶಯ ವಾಗುತ್ತಿದೆ

ದುರ್ಯೋಧನ—ತಾತ, ಏನನ್ನೋ ಬಹಳವಾಗಿ ಯೋಚಿಸುವಂತಿದೆ! ಈ ವಿಷಯದಲ್ಲಿ ನಿನ್ನ ಬಗೆಯೇನು?

ಭೀಷ್ಮ—ಪೌತ್ರ, ದುರ್ಯೋಧನ! ನನಗೆ ಈ ವಿಷಯದಲ್ಲಿ ಯೋಚನೆ ಯಿಲ್ಲವಪ್ಪ. ನನಗೂ ನಮ್ಮ ವಂಶಕ್ಕೂ ಆದ ಅಪಮಾನವನ್ನು ಕುರಿತು ಯೋಚಿಸುತ್ತಿರುವೆನು.

ದುರ್ಯೋಧನ—ತಾತ! ಇದೇನು ಹೇಳುವಿರಿ? ನಿಮಗೆ—ನಿಮ್ಮ ವಂಶಕ್ಕೆ—ಅಪಮಾನವೆ?

ಭೀಷ್ಮ—ವಿರಾಟೇಶ್ವರನಿಗೂ ನನಗೂ ಮೊದಲಿಂದಲೂ ಇದ್ದ ವೈರವನ್ನು ಈ ಸಮಯದಲ್ಲಿ ಆತನು ಪ್ರಕಟಪಡಿಸಿದನು. ನಮಗೆಲ್ಲ ಅಪ ಮಾನಮಾಡುವ ಉದ್ದೇಶದಿಂದಲೇ ಈ ಯಜ್ಞಸಮಾರಂಭಕ್ಕೆ ಆತನು ಬರಲಿಲ್ಲ. ಉಳಿದ ಕಾರಣಗಳೆಲ್ಲ ಬರಿಯ ನೆಪಗಳು. ಆದ್ದರಿಂದ, ಮಾನಧನರಾದ ನಮಗೆ ಹಗೆಮುಗುಚುವುದೇ ಧರ್ಮ. ಅವನ ಆ ಗೋಧನವನ್ನು ಹಿಡಿದು ತಂದರೆ ಆಗ ಅವನಿಗೆ ಬುದ್ಧಿ ಬರುವುದು.

(ಈ ನಿರ್ಣಯವನ್ನು ಕೇಳಿ ಎಲ್ಲರೂ ಆಶ್ಚರ್ಯದಿಂದ ತಮ್ಮತಮ್ಮಲ್ಲಿ ಮಾತಾ ಡಲು ಪ್ರಾರಂಭಿಸುವರು. ದುರ್ಯೋಧನನು ಕರ್ಣ ಶಕುನಿಯರ ಅಭಿ ಪ್ರಾಯಗಳನ್ನು ಕೇಳುತ್ತಿರುವನು.)

ದ್ರೋಣ—(ಭೀಷ್ಮನನ್ನು ರಂಗಸ್ಥಳದ ಮುಂಭಾಗಕ್ಕೆ ಕರೆತಂದು) ಗಾಂಗೇಯ! ವಿರಾಟೇಶ್ವರನು ನಮ್ಮ ಪ್ರಿಯಶಿಷ್ಯರಲ್ಲೊಬ್ಬನು; ಆತನ

ಗೋಧನವನ್ನು ಸೂರೆಗೊಳ್ಳಬೇಕೆಂಬ ಈ ನಿನ್ನ ಸಲಹೆಯ ಅರ್ಥವೇನು ?

ಭೀಷ್ಮ—(ದ್ರೋಣನಿಗೆ) ಅದೇನು ಬ್ರಾಹ್ಮಣಸರಳತೆ ನಿಮ್ಮದು ! ರಥ ಧ್ವನಿಯನ್ನು ಕೇಳಿ, ಗೋಪ್ಯರಾಗಿರುವ ಪಾಂಡವರು ರೋಷ ದಿಂದ ಮೇಲೆದ್ದು, ವಿರಾಟೇಶ್ವರನಲ್ಲಿರುವ ಕೃತಜ್ಞತೆಗಾದರೂ ಯುದ್ಧಮಾಡಲು ಬಂದೇ ಬರುವರು. ಆದ್ದರಿಂದ ಗೋಗ್ರಹಣ ದಿಂದಲೇ ನಮ್ಮ ಕಾರ್ಯವು ಆಗಬೇಕಾಗಿದೆ.

—ಸೇವಕನು ಬರುವನು—

ಸೇವಕ—ಮಹಾರಾಜನಿಗೆ ಜಯವಾಗಲಿ! ಚತುರಂಗಬಲವು ನಗರ ಪ್ರವೇಶಕ್ಕಾಗಿ ಸಿದ್ಧವಾಗಿದೆ.

ದುರ್ಯೋಧನ—ಹಾಗಾದರೆ, ಆದೇ ಸೇನೆಯೇ ವಿರಾಟನಗರಿಗೆ ದಾಳಿ ಯಿಟ್ಟು ಗೋಗ್ರಹಣಮಾಡಲಿ ! (ಕರ್ಣನನ್ನು ಕುರಿತು) ಯಜ್ಞ ಕಾಲದಲ್ಲಿ ಶಾಂತವಾಗಿದ್ದ ಗದೆಯನ್ನು ಪುನಃ ಇಷ್ಟು ಶೀಘ್ರ ದಲ್ಲಿಯೇ ಹಿಡಿಯುವಂತಾಯಿತು. (ದ್ರೋಣ ಭೀಷ್ಮರನ್ನು ನೋಡಿ) ಆಚಾರ್ಯ ! ಯುದ್ಧೋನ್ಮುಖನಾಗಿರುವ ನನ್ನನ್ನು ಆಶೀರ್ವದಿ ಸಬೇಕು. ತಾತ ! ಅನುಜ್ಞೆಯನ್ನು ದಯಪಾಲಿಸು.

ದ್ರೋಣ—ವತ್ಸ, ದುರ್ಯೋಧನ ! ರಣರಂಗದಲ್ಲಿ ನಿನ್ನ ಪರಾಕ್ರಮವನ್ನು ನೋಡಲು ನಾವಿಬ್ಬರು ಮುದುಕರು ಆಸೆಪಡುವೆವು. ಆದ್ದ ರಿಂದ ನಾವೂ ಸೇನೆಯ ಜೊತೆಯಲ್ಲಿ ಬರುವೆವು.

(ಭೀಷ್ಮನೂ ಸಮ್ಮತಿಯನ್ನು ಸೂಚಿಸುವನು.)

ದುರ್ಯೋಧನ—ನಿಮ್ಮಿಷ್ಟದಂತೆಯೇ ಆಗಲಿ.

ದ್ರೋಣ—ಗಾಂಧಾರರಾಜ ! ಈ ಗೋಗ್ರಹಣದಲ್ಲಿ ನಿನ್ನದೇ ಪ್ರಥಮ ರಥವಾಗಿರಲಿ.

ಶಕುನಿ—ಆಗಬಹುದು ! ಅದು ಯೋಗ್ಯವಾದ ಸಲಹೆಯೇ ಆಗಿದೆ.

(ತೆರೆಯು ಬೀಳುವುದು.)

# ಎರಡನೆಯ ಅಂಕ.

## ಒಂದನೆಯ ದೃಶ್ಯ

[ವಿರಾಟನಗರಿಯ ಹೊರಭಾಗದ ಬಯಲುಪ್ರದೇಶ. ಮುದಕನಾದ ಒಬ್ಬ ಗೊಲ್ಲನು ನಿಂತಿರುವನು. ಹೊದ್ದಿರುವದು ಕರಿಯ ಕಂಬಳಿ. ಕೈಯ್ಯಲ್ಲಿ ಕೋಲು. ಕೆಂಪುವಸ್ತ್ರವನ್ನು ತಲೆಗೆ ಸುತ್ತಿರುವನು. ಉಟ್ಟಿರುವುದು ಗಿಡ್ಡ ಪಂಚೆ. ಗೊಲ್ಲನು ನೇಋತ್ಯದಕಡೆಗೆ ದೃಷ್ಟಿಸಿ ನೋಡುತ್ತಿರುವನು.]

—ಯುವಕಗೊಲ್ಲನೊಬ್ಬನು ಬರುವನು—

ಯುವಕ ಗೊಲ್ಲ—ಇದೇನ್ಲಾ ! ಮಾವ ! ಇಂಗೆ ನಿಂತೀದಿ ?

ಮುದಿ ಗೊಲ್ಲ—ಲೋ ! ಗೂಳೀಗೊರವ ! ಅಲ್ಲಿ ನೋಡ್ಲಾ. ಏಸ್‌ಹೊತ್ತಿನಿಂದ ಆ ಕಾಗೆ ಆಕಾಸ ನೋಡ್ತಾ, ಮರಾನ ಕುಕ್ಕುತಾ, ಕ್ರಾ ಕ್ರಾ (ಕಾಗೆಯ ಕೂಗನ್ನು ಅನುಕರಿಸುವನು.) ಎಂತ ಬಡಕೋಳ್ತೈತೆ.

ಗೂಳಿಗೊರವ—ಬಿಡ್‌ಕಣ್ ಮಾವಾ ! ಅದೇನ್ ಮಾಡಾತು. ಅಲ್ಲಾರ್‍ಗೂ ಯೇಳಿವ್ನಿ. ಇವತ್ತೆಲ್ಲಾರೂ, ಎಂಗಸ್ರೂ, ಮಕ್ಳೂ, ಉಡ್ಗರೂ, ಉಡ್ಗೀರೂ, ಅಲ್ಲಾರೂ ಸಿಂಗಾರಮಾಡ್ಕೊಂಡು, ಊಮುಡ್ಕೊಂಡು, ಹಸಕರಕ್ಕೆಲ್ಲಾ ಮೈತೊಳೆದು, ಊಕಟ್ಟಿ, ಅಲಂಕಾರಮಾಡ್ಬೇಕು. ಇವತ್ತಿಣ ಮಧ್ಯಾಣ್ಣ ಹಸ ಕರಾನ ನಡ್ಸಿಕೊಂಡು, ಊರು ಕೇರ್‍ಯಾಗೆ, ಮೆರವಣಿಗೆ ಹೋಗಬೇಕು. ಅಂತ ಅಲ್ಲಾರ್‍ಗೂ ಯೇಳಿವ್ನಿ, ಮಾವಾ.

ಮು. ಗೊಲ್ಲ—ಅಲ್ಲಾರು ಸಿಂಗಾರ ಮಾಡ್ಕೊಂಡಿರ್‍ಬೇಕು. ಮಾರಾಜ್ರು ವಡ್ಡಂತೀಲಿ ಬ್ರಾಂಬರಿಗೆ ಗೋದಾನ ಕೊಡ್ತಾರೆ. ಮತ್ತೆ ಅದ್ಕೇ

ಹಸಾನ ಊರು ಮುಂದಿನ ತಾವದ ಹಟ್ಟಗೆ ತಂದಿರೋದು. (ಮತ್ತೆ ಕಾಗೆಯು ಕೂಗುವುದು). ಅಯ್ಯೋ! ಇದ್ಯಾಕ್ಲಾ ಇಂಗೆ ಒಡ್ಕೊಳ್ತೈತೆ! ಇನ್ನೇನು ಬಂತಪ್ಪಾ ಗ್ರಾಚಾರ! ಅಯ್ಯೊ! ದೇವ್ರೇ! ನಮ್ಮಪ್ಪಾ (ಮೇಲೆ ನೋಡುತ್ತಾ ಕೈಮುಗಿದು) ನಮ್ಮ ಹಸ ಕರ ಎಲ್ಲಾ ಚಂದಾಗಿರಲಪ್ಪಾ. ನಮ್ಮ ಐಕ್ಳೂ, ಯೆಂಡ್ರೂ ಚಂದಾಗಿರಲಪ್ಪಾ. ಈ ಕಾಲ ಏನು ಬಂದಿಯ್ತೋ? ನೀನೇ ಕಾಪಾಡಪ್ಪಾ! ಎಲ್ಲಾ ಚಂದಾಗಾದ್ರೆ ಒಂದು ಕರ ಒಂದ ಹಸ ನಿಂಗೆ ಬಿಡ್ತೀನಿ ದೇವ್ರೆ!

**ಗೂಳಿಗೊರವ**—ಅದೇನು ಮಾಡಾತು, ಬಿಡ್ ಮಾವಾ? ಇವತ್ತು ಊರೂರೇ ಸೊಗಸಿಕ್ವ್ಯಾಗಿದೆ. ನೀಯಾಕ್ ಆಳ್ತಿ!

**ಮು. ಗೊಲ್ಲ**—ಏನೋ! ದೇವ್ರು ಹ್ಯಾಗ್ಮಾಡ್ತಾನೋ! ಹೋಗ್ಲಿ ಬಿಡು. ಅಲ್ಲಾರ್ನೂ ಕೂಗ್ಲಾ.

**ಗೂಳಿಗೊರವ**—ಲೇ! ಮುದ್ರಂಗೀ, ಬೆಣ್ಣೆಚನ್ನಿ, ಹರಟೆಮಲ್ಲಿ! ಇಲ್ಲಿ ಬನ್ನಿ. ಲೋ! ಕೆಂಬಸ್ವ, ತಿಪ್ಪೆಲಕ್ಕ, ಹಸಿನ್ ಕೂಸು! ಬನ್ರೋ.

[ಮುದ್ರಂಗಿ, ಬೆಣ್ಣೆಚನ್ನಿ, ಹರಟೆಮಲ್ಲಿ ಮತ್ತು ಕೆಂಬಸ್ವ, ತಿಪ್ಪೆಲಕ್ಕ, ಹಸಿನ ಕೂಸು ಇವರು ಬರುವರು. ಹೆಂಗಸರೆಲ್ಲರೂ ಗೊಲ್ಲತಿಯರಂತೆ ಸೀರೆ ಯುಟ್ಟಿರುವರು. ಗ್ರಾಮ್ಯಕ್ಕೆ ತಕ್ಕಂತೆ ಅಲಂಕಾರವಾಡಿಕೊಂಡು ಹೂ ಮುಡಿದುಕೊಂಡಿರುವರು. ಗಂಡಸರು ಮುದಿಗೊಲ್ಲನಂತೆಯೇ ವಸ್ತ್ರಗೆ ಳನ್ನು ಉಟ್ಟಿರುವರು. ಅವರೂ ಸಹ ಹೂ ಮುಡಿದಿರುವರು.]

**ಎಲ್ಲರೂ**—ಮಾವಾ! ಕೈಮುಗಿದಿ.

**ಮು. ಗೊಲ್ಲ**—ಏನ್ರಲ್ಲ! ಎಲ್ಲಾ ಸಿಂಗಾರಮಾಡ್ಕೊಂದೀರಾ? ಇವತ್ತು ಬಲ್ ಸೊಗಸಾಗಿರಬೇಕು ಲೇ! ಬೆಣ್ಣೆಚನ್ನಿ! ಇನ್ನೂ ಓಸು ಸೊಗಸುಮಾಡಕಿಲ್ವಾ? ಏ! ಲಕ್ಕ! ನೀ ಹೇಳಾಕಿಲ್ವ.

**ಲಕ್ಕ**—ಬಿಡ್! ಮಾವ! ಆ ಎಣ್ಣು ಅಂಗೆ ಇದ್ರೇ ಚನ್ನ!

ಮು. ಗೊಲ್ಲ—ಸೈ, ಬಿಡಪ್ಪ. ಏ! ಐಕ್ಳಾ! ಇಲ್ಲಿ ನೋಡಿ! ಮರಾಜ್ರ ಅಪ್ಪಣೆ ಆಗೈತೆ. ಇವತ್ತೆಲ್ಲಾರೂ ಮರ್ಯಾದವಾಗೆ ಸಂತೋಸಾಗಿ ಇರಬೇಕು ಅಂತ. ಆದಕೆ ವಸಿ ಪದ ಹೇಳ್ಕೊಂಡು ಕುಣ್ತಾ ಹಾಕ್ರೋ.

ಗೋಳಿಗೊರವ—ಹೂ, ಕಣ್ ಮಾವ! ಲೋ! ಲಕ್ಕ! ನೀನೂ—ಏ ರಂಗೀ, ನೀವಿಬ್ಬರೂ ಪದ ಹೇಳಿ. ಏ! ಮಗ! ಹಸಿನ್ ಕೂಸು! ನೀ ಹಟ್ಟೀತಾವ ಹೋಗಿ ಬಾರ್ಲ!

— ಹಸೀನ ಕೂಸು ಹೋಗುವನು —

(ಲಕ್ಕ, ರಂಗೀ ಇಬ್ಬರೂ ಪದ ಹೇಳುವರು. ಪಲ್ಲವಿಯನ್ನು ಎಲ್ಲರೂ ಹೇಳುವರು. ಪದಗಳನ್ನು ಇವರು ಇಬ್ಬರು ಮಾತ್ರ ಹೇಳುವರು.)

ಗಜಮುಖ ಲಂಬೋದರನಿಗೆ ಸರಣು |
ಮೆರೆವ ಏಕಾದಂತ ಇಘ್ನೇಸ ಸರಣು ||ಪ||

ಹಸಕರ ಹಟ್ಟೀನ ಕಾಯೋ ಮಾರಾಯ |
ಬೆಲ್ಲಾನ ಕೊಟ್ಟೇನು ತೆಂಘೀಣಕಾಯ || ೧

ಎಲ್ಲಾರ ತಂದೆ ನಮ್ಮ ಮರಾಜ್ರ |
ಸಂತೋಸ ನೂರ್ಕಾಲ ಹರಿಯಾಲೋ ದ್ಯಾವ್ರ || ೨

ನಾಳೆ ಹುಣ್ಣೀಮೆ ಬೆಳ್ದಿಂಗಳ್ ರಾತ್ರೆ |
ಹೊಳೆಯೂಟ, ನಮ್ಮಪ್ಪ ಮುಖಂಡನ್ ಜಾತ್ರೆ || ೩

ಕರ್ಸೀರೆ ಕರ್ಮಾಣಿ ಕಟ್ಯಾಳೆ ಮಲ್ಲಿ |
ಅವಳ್ಗಿಂತ ಸೊಗಸಾಗಿ ಚನ್ನವ್ವ ಇಲ್ಲಿ || ೪

ನಮ್ಗೆಲ್ಲ ಜನ್ರೂ ನಮ್ಗೆಲ್ಲ ಐಕ್ಳೂ |
ನೂರ್ಕಾಲ ಬದ್‌ಕ್ಲೀ ನೂರ್ಕಾಲ ಬಾಳ್ಲೀ || ೫

ಗಜಮುಖ...............................

(ಎಲ್ಲರೂ ವೃತ್ತಾಕಾರವಾಗಿ ಕುಣಿಯುವರು. ವಿಶೇಷವಾಗಿ ಧೂಳು ಏಳುವುದು.)

ಗೊರವ—ಏ! ಮಾವ! ಏಸ್ ಧೂಳ್ ಎಬ್ಬಿಸಿದೆಯೋ?

ಮು. ಗೊಲ್ಲ—ಏನ್ಲಾ? ನಾ ಧೂಳು ಎಬ್ಬಿಸಿದನಾ? ಪಕ್ಸಿ ಆರಿದಾಂಗೆ ಆರೋನು ನಾನು. ನಾ ಧೂಳು ಎಬ್ಬಿಸಿದನಾ,—ನಾನು?

ಕೆಂಬಸ್ವ—ಮುಂಜಾನೆ ತಿಂಗಳ ಬೆಳಕನ್ದಾಂಗೆ, ಬಿಸಿಲ್ನ್ನೆಲ್ಲಾ ಮುಚ್ಚಿ ಬಿಟ್ಟಿಯಲ್ಲೊ! ನೀನ್ ಏಳಿಸಿರು ಧೂಳಾಗೆ ಕಣ್ಣೊ ಕಾಣಿಸು ಲ್ಲವಪ್ಪೊ!

—ಹಸೀನಕೂಸು ಓಡುತ್ತಾ ಬರುವನು—

ಹಸೀನಕೂಸು—(ಹೆದರಿಕೆಯನ್ನು ಸೂಚಿಸುತ್ತಾ)ಮಾವಾ ಮಾವಾ! ಅಯ್ಯಯ್ಯೊ! ನನ್ನ ಕರ ಹೊಯ್ತುಲ್ಲೊ—ನಾ ಸಾಕಿದ ಕರ! (ಅಳುವನು)

ಕೆಂಬಸ್ವ—ಏ! ಏನಾಯತ್ಲ! ಏನ್ಲಾ? (ಹಸೀನಕೂಸು ಅಳುತ್ತಲೇ ಇರುವನು.)

ಮು ಗೊಲ್ಲ—(ಮುಂದೆ ಬಂದು) ಏ! ಸುಮ್ಕಿರೊ! (ಕೂಸನ್ನು ನೋಡಿ)ಏನ್ಲಾ ಮಗ, ಏ ಕೂಸು? ಏನ್ಲಾ ಏನಾಯತ್ಲ?

ಹಸೀನಕೂಸು—ನಾ ಹಟ್ಟಿತಾವ ಹೋದೊ. ಹೋಗೋದ್ರವಳ್ಗ—ಒಂದು ಸಾವಿರಜನ ಕುದುರೆ ಹತ್ಕೊಂಡು ಹಸ, ಕರ, ಅಲ್ಲಾನೂ ಅಟ್ಕೊಂಡು ಹೋದ್ರು. ಕಳ್ರು—ಹಗಲಕಳ್ರು. (ಅಳುವನು.)

ಮು. ಗೊಲ್ಲ—ಅಯ್ಯೊ, ಶಿವನೇ! ಯಾರ್ಲ? ಯಾರ್ಲಮಗ ಹೋದೋರು?

ಹಸೀನಕೂಸು—(ಅಳುತ್ತಾ) ನಾ ಕಾಣೆ. ಕುದುರೆಕಟ್ಟಿಕೊಂಡು ಗಾಡೀಲಿ ಹೋದ್ರು.

ಗೂಳಿಗೊರವ—ಏ! ಮಂಕ! ಸುಮ್ಕಿರು. ನಾ ಹೋಗಿ ನೋಡ್ಕೊಂಡು ಬತ್ತೀನಿ. —ಹೋಗುವನು—

ಬೆಣ್ಣೆ ಚನ್ನಿ—(ಅಳುತ್ತಾ) ನಮ್ದೊಂಣು ಹಟ್ಟಿತಾವ ಇತ್ತಲ್ಲೊ! ಅಯ್ಯಯ್ಯೊ! ಶಿವನೇ!

ಮಲ್ಲಿ—(ಹೆದರಿಕೆಯಿಂದ) ಏನ್ಲಾ! ನಮ್ಮ ಮುದಿಎಮ್ಮೆ ಇತ್ತೆನೋ?

—ಗೂಳಿಗೊರವನು ಓಡುತ್ತಾ ಬರುವನು—

ಗೂಳಿಗೊರವ—ಓಡ್ರೀ! ಓಡ್ರಿ! ಭಾರಿ ಸೈನಾನೆ ಬಂದಿದೆ ಹೊಡೀತಾರೆ.
ಓಡ್ರೀ ಓಡ್ರೀ!

(ಎಲ್ಲರೂ ಓಡುವರು. ಮುದಿಗೊಲ್ಲನು ಓಡಲಾರದೆ ಹಿಂದೆ ನಿಲ್ಲುವನು.)

ಮು: ಗೊಲ್ಲ—ಏ! ಓಡಬ್ಯಾಡ್ರೋ. ನಿಲ್ರೋ. ಏ! ಗೂಳಿಗೊರವ!
ನಿಲ್ಲೋ. ಬಾರೋ.

(ಗೂಳಿಗೊರವ ಪುನಃ ಹಿಂದಕ್ಕೆ ಬಂದು ಮುದುಕನನ್ನು ಹಿಡಿದುಕೊಂಡು ರಂಗಸ್ಥಳವನ್ನು ಬಿಡಲುದ್ಯುಕ್ತನಾಗುವನು.)

ಗೂಳಿಗೊರವ—ಹಾಕ್ಲೆ, ಹೆಜ್ಜೇನ, ಮಾವ. ಹೂ! ಬೇಗ. ಏ ಪಕ್ಸಿ!
ಬಾರೆಲೋ, ಇಲ್ದಿದ್ರೆ ಪ್ರಾಣಕ್ಕೆ ಬಂದೀತು ಚಂಚಕಾರ!

—ಹೋಗುವರು—

ತೆರೆಯು ಬೀಳುವದು.

## ಎರಡನೆಯ ದೃಶ್ಯ.

[ವಿರಾಟ ನಗರಿಯ ರಾಜಾಸ್ಥಾನದ ಮುಂಭಾಗದ ರಾಜಮಾರ್ಗ. ಸೈನಿಕನೊಬ್ಬನು ತ್ವರೆಯಿಂದ ಪ್ರವೇಶಿಸುವನು. ಗಂಡುಗಚ್ಚೆಯನ್ನು ಹಾಕಿ, ಕವಚವನ್ನು ತೊಟ್ಟಿರುವನು. ತಲೆಯ ಮೇಲೆ ಶಿರಸ್ತ್ರಾಣ.]

ಸೈನಿಕ—(ರಂಗಸ್ಥಳದ ಪಕ್ಕದ ತೆರೆಯ ಕಡೆ ನೋಡಿ) ಯಾರಲ್ಲಿ? ಹೋ! ಯಾರಲ್ಲಿ? ಬೇಗ ಬನ್ನಿ. ಹೋ! ಯಾರಲ್ಲಿ?

— ವೃದ್ಧ ಕಂಚುಕಿಯು ಬರುವನು —

ವೃ. ಕಂಚುಕಿ—ಯಾರದು, ಇಷ್ಟು ತ್ವರೆಯಿಂದ ಕೂಗುವೆ?

ಸೈನಿಕ—ಕ್ಷಮಿಸಬೇಕು. ನಾನು ಜಯಸೇನ. ಅವಸರದ ಸುದ್ದಿಯನ್ನು ತಿಳಿಸಲು ಬಂದೆ.

ವೃ. ಕಂಚುಕಿ—ಏನದು ಜಯಸೇನ?

ಜಯಸೇನ—ಊರಬಾಗಿಲ ಮುಂದೆ ಗೋವೃಂದವೆಲ್ಲವೂ ಇದ್ದಿತಷ್ಟೆ. ಧೃತರಾಷ್ಟ್ರನೃಪಾಲನ ಮಕ್ಕಳು, ಹೇಡಿಗಳಂತೆ ಕಳ್ಳತನದಿಂದ ಗೋವುಗಳನ್ನು ಅಪಹರಿಸುತ್ತಿರುವರು. ಈ ಸಂಗತಿಯು ಮಹಾರಾಜನಿಗೆ ತಿಳಿಯಬೇಕು.

ವೃ. ಕಂಚುಕಿ—(ಆಶ್ಚರ್ಯದಿಂದ) ಹಾ! ಧೃತರಾಷ್ಟ್ರನ ಮಕ್ಕಳೆ?

ಜಯಸೇನ—ಕರುಗಳು ದಿಕ್ಕಾಪಾಲಾಗಿ ಓಡುತ್ತಿವೆ! ಗೋವುಗಳು ಹೆದರಿಕೆಯಿಂದ ವಿಕಾರವಾಗಿ ಕೂಗುತ್ತಿವೆ! ಗೂಳಿಗಳು ಭಯದಿಂದ ಓಡಾಡುತ್ತಿವೆ! ಎಲ್ಲೆಲ್ಲೂ ಆ ಮೂಕಪ್ರಾಣಿಗಳ ಆರ್ತನಾದ!

ವೃ. ಕಂಚುಕಿ—(ಸಂಶಯದಿಂದ) ಧೃತರಾಷ್ಟ್ರನ ಮಕ್ಕಳು ಹೀಗೆ ಮಾಡಿದರೆ?

ಜಯಸೇನ—ಹೌದು!

ವೃ. ಕಂಚುಕಿ—ಒಡಹುಟ್ಟಿದವರಲ್ಲಿಯೇ ದ್ರೋಹವನ್ನೆಸಗಿದ ಕೌರವರಿಗೆ ಇದೊಂದು ಹೆಚ್ಚೆ? ಲೋಹಕವಚಗಳನ್ನೂ ಮುಂದೋಳರಕ್ಷೆಗಳನ್ನೂ ತೊಟ್ಟು, ಭುಜಕೀರ್ತಿಗಳನ್ನು ಧರಿಸಿ, ಸುಸಜ್ಜಿತರಥಗಳಲ್ಲಿ ಯುದ್ಧಕ್ಕೆ ಬಂದವರು ನಮ್ಮ ಅರಸನ ಮೇಲಿನ ದ್ವೇಷವನ್ನು ಆ ಬಡಜಂತುಗಳ ಮೇಲೆ ತೀರಿಸಿಕೊಂಡರೆ?—ಜಯಸೇನ, ಮಹಾರಾಜರು ವರ್ಧಂತಿಸಂಬಂಧವಾದ ಶಾಂತಿಕರ್ಮದಲ್ಲಿ ತೊಡಗಿರುವುದರಿಂದ ಈಗ ಈ ಸಮಾಚಾರವನ್ನು ಹೇಳುವುದು ಲೌಕಿಕವಲ್ಲ. ಆದ್ದರಿಂದ ಕಾಲವರಿತು ನಾನು ಹೇಳುವೆನು.

ಜಯಸೇನ—ಆದರೆ ಈ ವಿಷಯವನ್ನು ಈಗಲೇ ತಿಳಿಸದಿದ್ದಲ್ಲಿ ಏನು ಪ್ರಯೋಜನ? ಆರ್ಯ, ಈಗಲೇ ತಿಳಿಸಬೇಕು.

ವೃ. ಕಂಚುಕಿ—ಆಗಲಿ, ತಿಳಿಸುತ್ತೇನೆ.

—ಇಬ್ಬರೂ ಒಟ್ಟಿಗೆ ಹೋಗುವರು—

ತೆರೆಯು ಬೀಳುವುದು.

## ಮೂರನೆಯ ದೃಶ್ಯ

[ಅರಮನೆಯಲ್ಲಿ ಒಂದು ಕೋಣೆ. ಐದಾರು ಪೀಠಗಳನ್ನು ಹಾಕಿರುವರು. ರಾಜಗೃಹಯೋಗ್ಯವಾದ ಅಲಂಕಾರ. ಮಧ್ಯದ ಪೀಠದಲ್ಲಿ ತಲೆಬಗ್ಗಿಸಿಕೊಂಡು ಚಿಂತಾಕ್ರಾಂತನಾಗಿ ವಿರಾಟೇಶ್ವರನು ಕುಳಿತಿರುವನು. ವಿರಾಟೇಶ್ವರನು ದೃಢಕಾಯ. ಮೀಸೆ ಗಡ್ಡಗಳಿವೆ. ತಲೆಯ ಕೂದಲನ್ನು ಉದ್ದವಾಗಿ ಬಿಟ್ಟಿರುವನು. ತಲೆಯ ಮೇಲೆ ಕಿರೀಟ.

ರಾಜ—(ಕ್ಷಣಕಾಲ ಕಳೆದು, ನಿಟ್ಟುಸಿರುಬಿಟ್ಟು, ಕತ್ತೆತ್ತಿ) ಇದೇನು ಅನ್ಯಾಯ! ನನ್ನ ಗೋಧನವೆಲ್ಲವೂ ಅವರ ವಶವಾಯಿತಂತೆ! ರಥಧ್ವನಿಯಿಂದ ದನಕರುಗಳೆಲ್ಲವೂ ಭಯಾಕ್ರಾಂತವಾಗಿವೆಯೆಂತೆ! ಕಂಗಾಲಾಗಿ ಓಡುತ್ತಿರುವ ಆ ಬಡಪ್ರಾಣಿಗಳನ್ನು ಬಾರ್ಚಾವಟಿಗಳಿಂದ ಹೊಡೆದಟ್ಟಿಕೊಂಡು ಹೋಗುತ್ತಿರುವರಂತೆ! ಈ ಸಮಯದಲ್ಲಿ ನಾನು ರುಚಿರುಚಿಯಾದ ಭೋಜನವನ್ನೂ, ಚಂದನಾದಿ ಪರಿಮಳದ್ರವ್ಯಗಳನ್ನೂ, ಅಂದಚಂದದ ಉಡಿಗೆ ತೊಡಿಗೆಗಳನ್ನೂ ಅನುಭವಿಸುತ್ತಿದ್ದೇನೆ! (ಪೀಠದಿಂದೆದ್ದು, ವ್ಯಸನಾಕ್ರಾಂತನಂತೆ ಅತ್ತಿತ್ತ ಓಡಾಡಿ) ಜಯಸೇನ! ಜಯಸೇನ!

ಜಯಸೇನ—ಮಹಾರಾಜನಿಗೆ ಜಯವಾಗಲಿ!

ರಾಜ—ಸಾಕು! ಸಾಕು! ಕೌರವರು ನಿನ್ನ ಮಹಾರಾಜನಿಗೆ ಜಯವನ್ನೇನೂ ಉಳಿಸಿಲ್ಲ! ನನ್ನ ಕ್ಷಾತ್ರತೇಜವು ಮಣ್ಣುಪಾಲಾಯಿತು! ಯುದ್ಧರಂಗದ ಸಮಾಚಾರವನ್ನು ವಿಶದವಾಗಿ ತಿಳಿಸು.

ಜಯಸೇನ—ಅಪ್ರಿಯವಾರ್ತೆಯನ್ನು ವಿಶದವಾಗಿ ಹೇಗೆ ಹೇಳಲಿ? ಸಹಸ್ರಾರು ರಥಗಳಿಂದ ದಟ್ಟವಾಗೆದ್ದ ಧೂಳು ಹಸುಗಳ ಮೈಮೇಲೆ ಕುಳಿತು ಎಲ್ಲಕ್ಕೂ ಒಂದೇ ಬಣ್ಣವನ್ನು ಕೊಟ್ಟಿತು.

ಆದರೂ ಆ ಕಟುಕರ ಚಾವಟಿಯ ಹೊಡೆತದಿಂದ ಮೈಮೇಲೆ ನೀಲಿಗೆರೆ ಬರೆದಂತೆ ಕಾಣುತ್ತಿತ್ತು.

ರಾಜ—ಹುಂ! ನನ್ನ ಧನುಸ್ಸನ್ನು ತೆಗೆದುಕೊಂಡು ಬಾ. ರಥವನ್ನು ಬೇಗನೆ ಸಿದ್ಧಗೊಳಿಸುವಂತೆ ಹೇಳು. ಯಾರಿಗೆ ಇಷ್ಟವೋ ಅವರು ನನ್ನೊಡನೆ ಬರಲಿ. ಶತ್ರುಗಳನ್ನು ಬೆನ್ನಟ್ಟಿ ಗೋವುಗಳಿಗಾಗಿ ಕಾದುವುದು ನಿಷ್ಫಲವಾಗಲಾರದು. ಅವುಗಳಿಗಾಗಿ ಮರಣವುಂಟಾದರೆ ಸ್ವರ್ಗ; ಇಲ್ಲದೆ, ಅವುಗಳನ್ನು ಬಿಡಿಸಿಕೊಂಡು ಬಂದರೆ ಧರ್ಮಪಾಲನೆಯಾಗುವುದು.

ಜಯಸೇನ—ಮಹಾರಾಜನ ಅಪ್ಪಣೆಯಂತೆ.

— ಹೋಗುವನು —

ರಾಜ—ನನ್ನ ಮೇಲೆ ದುರ್ಯೋಧನನಿಗೆ ಇಷ್ಟು ಕೋಪ ಬಂದಿರುವುದು ಆಶ್ಚರ್ಯ! ಕಾರಣವೇನಿರಬಹುದು? ಯಜ್ಞಕ್ಕೆ ನಾನು ಹೋಗಲಿಲ್ಲವೆಂದೆ? ಹೋಗುವುದಾದರೂ ಹೇಗೆ? ಕೀಚಕವಧೆಯಿಂದ ನನ್ನ ಮನಸ್ಸು ವಿಶೇಷವಾಗಿ ಕಳವಳಗೊಂಡಿದ್ದಿತು— ಅಥವಾ, ಅಂತರ್ಯದಲ್ಲಿ ನಾನು ಪಾಂಡವಪಕ್ಷಪಾತಿಯೆಂತಲೆ? —ಹುಂ! ಹೇಗಾದರೂ ನಾನು ಯುದ್ಧಮಾಡಿಯೇ ತೀರಬೇಕು!—ನಮ್ಮ ಆಸ್ಥಾನದಲ್ಲಿರುವ ಭಗವಾನನು ಬಹುಕಾಲ ಹಸ್ತಿನಾಪುರದಲ್ಲಿದ್ದುದರಿಂದ ದುರ್ಯೋಧನನ ಸ್ವಭಾವವನ್ನು ಚೆನ್ನಾಗಿ ತಿಳಿದಿರಬೇಕು. ಆದರೆ, ಒಂದು ವೇಳೆ ನಾನು ಕೇಳಿದರೂ ಈತನು ದುರ್ಯೋಧನನ ದೋಷಗಳನ್ನು ಹೇಳುವನೋ ಇಲ್ಲವೊ?—ಆದರೂ ಕಾರ್ಯಪರನು ಒಂದಲ್ಲ, ಹತ್ತುಸಲವಾದರೂ ಕೇಳಲೇಬೇಕು.—ಯಾರಲ್ಲಿ?

— ಕಂಚುಕಿಯು ಬರುವನು —

ಕಂಚುಕಿ—ಮಹಾರಾಜನೆ, ಏನಪ್ಪಣೆ?

ರಾಜ—ಭಗವಾನನನ್ನು ಬರಹೇಳು.

ಕಂಚುಕಿ—ಅಪ್ಪಣೆ.

— ಅವನು ಹೋಗುವನು —

(ರಾಜನು ಪೀಠದಲ್ಲಿ ಕುಳಿತು ಯೋಚಿಸುತ್ತಿರುವನು).

— ಭಗವಾನನು ರಂಗಸ್ಥಳದ ಮುಂಭಾಗದಲ್ಲಿ ಬರುವನು —

[ಭಗವಾನನು ಬ್ರಾಹ್ಮಣವೇಷಧಾರಿಯು]

ಭಗವಾನ್—(ತನಗೆ ತಾನೆ) ಇದೇನಿದು! ಯುದ್ಧಕ್ಕಾಗಿ ಆನೆಗಳನ್ನು ಸಿದ್ಧಪಡಿಸುತ್ತಿರುವರು! ಕವಚತೊಟ್ಟ ರಾವುತರು; ಬಿಲ್ಲುಬಾಣದ ಯೋಧರು; ನಡುಕಟ್ಟು ಬಿಗಿವ ಸೈನಿಕರು! ಇದೆಲ್ಲವನ್ನೂ ನೋಡಿದರೆ ಎಂದೂ ಇಲ್ಲದ ತವಕವುಂಟಾಗುತ್ತಿದೆ. ನಾನಾದರೂ ಮನಸ್ಸನ್ನು ಬಿಗಿಹಿಡಿಯಬಲ್ಲೆ; ಈ ಯುದ್ಧದ ಸಜ್ಜನ್ನು ಕಂಡು ನನ್ನ ತಮ್ಮಂದಿರು ಹೊರಬಿದ್ದರೆ ಕಷ್ಟ. (ರಾಜನನ್ನು ನೋಡಿ) ರಾಜನೆ ನೀನು—

ರಾಜ—ಭಗವನ್, ನಮಸ್ಕರಿಸುವೆನು.

ಭಗವಾನ್—ನಿನಗೆ ಮಂಗಳವಾಗಲಿ—

ರಾಜ—ಪೂಜ್ಯನೆ, ಈ ಪೀಠದಲ್ಲಿ ಕುಳಿತುಕೊ.

ಭಗವಾನ್—(ಕುಳಿತು) ರಾಜೇಂದ್ರ, ನಾನು ಈಗ ಕಾಣುತ್ತಿರುವ ಈ ಉದ್ಯೋಗಕ್ಕೆ ಕಾರಣವೇನು? ಚಕ್ರವರ್ತಿ! ನೀನು ಅತೃಪ್ತನೆ?—ಅಥವಾ, ಗರ್ವಿಗಳ ದರ್ಪಹರಣಕ್ಕೊ; ಆರ್ತಸಂರಕ್ಷಣೆಗೋ?—ಯಾವುದಕ್ಕೆ ಈ ಉದ್ಯಮ?

ರಾಜ—ಭಗವನ್, ಗೋಗ್ರಹಣದಿಂದ ನಾನು ಅಪಮಾನಿತನಾಗಿರುವೆ.

ಭಗವಾನ್—ಹಾ! ಇದಕ್ಕೆ ಕಾರಣರು ಯಾರು?

ರಾಜ—ಧೃತರಾಷ್ಟ್ರತನಯರು

ಭಗವಾನ್—(ಮುಂದೆ ಬಂದು, ತನಗೆ ತಾನೆ) ಅಯ್ಯೋ! ಕಷ್ಟ. ಕಲಹಪ್ರಿಯರಾದ ಆ ಕೌರವರು ಮಾಡಿರುವ ಈ ಅಪರಾಧವು, ಕುರುವಂಶಜನಾದುದರಿಂದ ನಾನು ಮಾಡಿದಂತೆಯೇ ಭಾಸವಾಗುವುದು.

ರಾಜ—ಭಗವನ್, ಇದೇನು ಇಷ್ಟು ಯೋಚಿಸುತ್ತಿರುವೆ?

ಭಗವಾನ್—(ಬಂದು ಕುಳಿತು) ಇನ್ನೇನೂ ಇಲ್ಲ; ಆ ಕೌರವರಿಗಾಗಿ ಯೋಚನೆ—

ರಾಜ—ಇಂದುಮೊದಲು ಮುಂದೆಂದಿಗೂ ಅವರ ಸೊಕ್ಕಡಗಿತು! ಯುಧಿಷ್ಠಿರನು ಬೇಕಾದರೆ ಕ್ಷಮಿಸಬಹುದು; ನಾನು ಕ್ಷಮಿಸುವನಲ್ಲ!

ಭಗವಾನ್—ಅದು ಸರಿಯೆ. (ಸ್ವಲ್ಪ ನಕ್ಕು) ದ್ರೌಪದಿಯ ಮಾನಭಂಗಕ್ಕೆ ಕಾರಣರಾಗಿ, ರಾಜ್ಯಭ್ರಷ್ಟರಾಗಿ, ನೆಲದಮೇಲೆ ಸೊಪ್ಪುಹಾಸಿಕೊಂಡು ಮಲಗಿ, ವೇಷವನ್ನು ಮರೆಮಾಚಿಕೊಂಡು ಅಜ್ಞಾತವಾಸದಲ್ಲಿರುವ ಆ ಪಾಂಡವರು ಅನುಭವಿಸಿದ ಕಷ್ಟವೆಲ್ಲವೂ ಈಗ ಫಲಿತವಾಯಿತು. ಆ ಯುಧಿಷ್ಠಿರನ ಕ್ಷಮಾಗುಣವು ನಾಣ್ಣುಡಿಯಾಗಿದೆ

— ಜಯಸೇನನು ಬರುವನು —

ಜಯಸೇನ—ಮಹಾರಾಜನಿಗೆ ಜಯವಾಗಲಿ.

ರಾಜ—ದುರ್ಯೋಧನನೀಗ ಎಲ್ಲಿದ್ದಾನೆ?

ಜಯಸೇನ—ದುರ್ಯೋಧನನು ಒಬ್ಬನೇ ಅಲ್ಲವಂತೆ. ಪೃಥಿವಿಯ ಅರಸರೆಲ್ಲರೂ ಬಂದಿರುವರಂತೆ! ದ್ರೋಣ, ಭೀಷ್ಮ, ಜಯದ್ರಥ, ಶಲ್ಯ, ಕರ್ಣ, ಶಕುನಿ, ಕೃಪ ಇವರೆಲ್ಲರೂ ಬಂದಿರುವರಂತೆ!

ರಾಜ—(ಜಗ್ಗನೆದ್ದು ಕೈಮುಗಿದುಕೊಂಡು) ಏನು! ಪೂಜ್ಯನಾದ ಗಂಗಾಪುತ್ರನೂ ಬಂದಿರುವನೆ?

ಭಗವಾನ್—(ತನಗೆ ತಾನೆ) ಸಾಧು! ಅಪಮಾನಿತನಾದರೂ ರಾಜನು ಮರ್ಯಾದೆಯನ್ನು ಮಿರಲಿಲ್ಲ—ಆದರೆ, ಕುರುಕುಲಗುರುವೂ, ಆರ್ಯನೂ ಏತಕ್ಕೆ ಬಂದಿರಬಹುದು? ನಮ್ಮ ಪ್ರತಿಜ್ಞೆಯು ಪೂರ್ಣವಾಗಿರುವುದನ್ನು ಜ್ಞಾಪಿಸುವುದಕ್ಕಿರಬಹುದೆ?

ರಾಜ—(ಸೇವಕನನ್ನು ನೋಡಿ) ನನ್ನ ಸಾರಥಿಯನ್ನು ಬರಹೇಳು

ಜಯಸೇನ—ಅಪ್ಪಣೆ.

— ಅವನು ಹೋಗುವನು —

— ಸಾರಥಿಯು ಬರುವನು —

ಸಾರಥಿ—ಆಯುಷ್ಮಂತನಿಗೆ ಜಯವಾಗಲಿ! ನಾನಿಲ್ಲಿಯೇ ಇದ್ದೆನು.

ರಾಜ—ನನ್ನ ರಥವನ್ನು ಬೇಗನೆ ಸಿದ್ಧಪಡಿಸು. ಶ್ಲಾಘ್ಯನಾದ ಅತಿಥಿಯು ರಣಸತ್ಕಾರಕ್ಕಾಗಿ ಬಂದಿರುವನು. (ಯುಧಿಷ್ಠಿರನನ್ನು ನೋಡಿ) ಭೀಷ್ಮನನ್ನು ಗೆಲ್ಲಲು ಸಾಧ್ಯವಿಲ್ಲ. ಆದರೂ ಆತನೊಲ್ಮೆಯ ಬಾಣಗಳನೆಲ್ಲ ಕಳುಹುತ್ತೇನೆ.

ಸಾರಥಿ—ಮಹಾರಾಜನ ಅಪ್ಪಣೆಯಂತೆ.—ಆದರೆ, ಆಯುಷ್ಮಂತನೆ! ನಿನ್ನ ಸಮರರಥವನ್ನು ಉತ್ತರಕುಮಾರನು ತೆಗೆದುಕೊಂಡು ಹೋಗಿರುವನು.

ರಾಜ—ಏನು! ಕುಮಾರನು ಹೊರಟಿರುವನೆ?

ಭಗವಾನ್—ಏನು! ಕುಮಾರನು ಹೊರಟಿರುವನೆ? ರಾಜೇಂದ್ರ, ಆತನನ್ನು ತಡೆದು ಹಿಂದಕ್ಕೆ ಕರೆಯಿಸು. ಆತನು ಯುದ್ಧದ ಗುಣದೋಷಗಳನ್ನರಿಯದೆ ಹುಡುಗಾಟಿಕೆಯಿಂದ ಹೊರಟಿರುವಂತೆ ತೋರುತ್ತಿದೆ. ಆದರೆ ರಣಾಗ್ನಿಯು ಸನ್ನಿಹಿತರಾದವರನ್ನು ದಹಿಸದೆಬಿಡುವುದಿಲ್ಲ—ಅಲ್ಲದೆ, ಆ ಧೃತರಾಷ್ಟ್ರಕುಮಾರರು ಸಿಕ್ಕಿದವರನ್ನು ಪರಿಹರಿಸುವರು. ನಾನು ಹೀಗೆ ಹೇಳುವುದು ನಿನಗೆ ಅಪಮಾನ ಮಾಡಬೇಕೆಂದಲ್ಲ.

ರಾಜ—ಪೂಜ್ಯನೆ! ನೀನು ಹೇಳುವುದು ನಿಜ. (ಸಾರಥಿಯಕಡೆ ನೋಡಿ) ಹಾಗಾದರೆ, ಬೇರೊಂದು ರಥವನ್ನು ಸಿದ್ಧಪಡಿಸು.

ಸಾರಥಿ—ಅಪ್ಪಣೆ.

ರಾಜ—ಇರಲಿ, ಕುಮಾರನ ರಥವನ್ನು ನಡೆಯಿಸಲು ನೀನೇಕೆ ಹೋಗಲಿಲ್ಲ? ಅವನೇ ನಿನ್ನನ್ನು ಬೇಡವೆಂದನೆ? ನೀನು ರಾಜಸಾರಥಿಯಲ್ಲವೆ?

ಸಾರಥಿ—ಆಯುಷ್ಮಂತನೆ, ಸಿಟ್ಟಾಗಬಾರದು. ರಥವನ್ನು ಸಿದ್ಧಪಡಿಸಿಕೊಂಡು ನಾನು ಬಳಿಯಲ್ಲಿಯೇ ನಿಂತಿದ್ದೆನು. ಆದರೆ ಕುಮಾ

ರನು—ಪರಿಹಾಸಕ್ಕೋ ಅಥವಾ ನಿಜವಾದ ಕುಶಲತೆಗೊ— ನನ್ನನ್ನು ಬಿಟ್ಟು ಆ ಬೃಹನ್ನಳೆಯನ್ನು ಸಾರಥಿಯಾಗಿ ನಿಯಮಿಸಿಕೊಂಡನು.

ಭಗವಾನ್—ಮಹಾರಾಜ, ನೀನಿನ್ನು ಧೈರ್ಯದಿಂದಿರು. ಬೃಹನ್ನಳೆಯು ಸಾರಥಿಯಾಗಿ ಹೋಗಿರುವ ಪಕ್ಷದಲ್ಲಿ, ರಥದ ಧೂಳಿಯಿಂದಲೇ ಅದು ಕಾಣಿಸದಂತಾಗಿ, ಚಕ್ರಧ್ವನಿಯಿಂದಲೇ ಶತ್ರುಗಳು ಭೀತರಾಗಿ, ಬಾಣಪ್ರಯೋಗಮಾಡದೆಯೇ ವತ್ಸನು ಜಯಶಾಲಿಯಾಗುವನು.

ರಾಜ—(ಸಾರಥಿಯನ್ನು ಕುರಿತು) ಹೇಗಾದರೂ ಇರಲಿ, ಇನ್ನೊಂದು ರಥವನ್ನು ಸಿದ್ಧಪಡಿಸು.

ಸಾರಥಿ—ಆಯುಷ್ಮಂತನ ಅಪ್ಪಣೆಯಂತೆ.

— ಅವನು ಹೋಗುವನು —

— ಸೇವಕನು ಅವಸರದಿಂದ ಏದುತ್ತ ಬರುವನು —

ಸೇವಕ—ಕುಮಾರನ ರಥವು ಮುರಿದುಬಿದ್ದಿತಂತೆ!

ರಾಜ—ಹಾ! ಏನು, ಏನು! ಮುರಿದುಹೋಯಿತೆ!

ಭಗವಾನ್—ಈ ಸಂದರ್ಭದಲ್ಲಿ ಮುರಿಯುವುದೆಂದರೇನು?

ಸೇವಕ—ಮಹಾರಾಜರು ಅವಧರಿಸಬೇಕು. ಯುದ್ಧ ವಿಶಾರದರಾದ ಅನೇಕ ರಾಜರು ರಥದ ದಾರಿಯನ್ನು ತಡೆದುಬಿಟ್ಟರು. ಆಗ ರಥವು ಇಕ್ಕಟ್ಟಿನಲ್ಲಿ ನುಗ್ಗುತ್ತಿರಲು, ಶ್ಮಶಾನದ ಮುಂಭಾಗದಲ್ಲಿ ಮುರಿದುಹೋಯಿತು.

ಭಗವಾನ್—(ತನಗೆ ತಾನೆ) ಆಹಾ! ಅಲ್ಲಿಯೇ ಗಾಂಡೀವವು ಇದ್ದುದು. (ರಾಜನನ್ನು ಕುರಿತು) ಮಹಾರಾಜ! ಶ್ಮಶಾನದ ಮುಂಭಾಗದಲ್ಲಿ ರಥವು ಮುರಿದುಹೋದುದರಲ್ಲಿ ಒಂದು ಅರ್ಥವಿರುವುದು. ಧೃತರಾಷ್ಟ್ರನ ಮಕ್ಕಳು ನಿಂತಿರುವ ಪ್ರದೇಶವು ಸಧ್ಯದಲ್ಲಿಯೇ ಶ್ಮಶಾನವಾಗುವುದು.

ರಾಜ—ಭಗವನ್, ಅಕಾಲದಲ್ಲಿ ನೀನು ಸ್ವಸ್ಥಚಿತ್ತದಿಂದ ಮಾತನಾಡುವುದುಚಿತವಲ್ಲ.

ಭಗವಾನ್—ಸಿಟ್ಟಾಗಬೇಡ. ಹಿಂದೆ ಯಾವಾಗಲಾದರೂ ನಾನು ಸುಳ್ಳು ಹೇಳಿರುವೆನೆ?

ರಾಜ—ಇಲ್ಲ. (ಸೇವಕನನ್ನು ನೋಡಿ) ಹೋಗು—ಮುಂದಿನ ಸಮಾಚಾರವನ್ನು ತಿಳಿದು ಬಾ.

ಸೇವಕ—ಮಹಾರಾಜನ ಅಪ್ಪಣೆಯಂತೆ.

— ಅವನು ಹೋಗುವನು —

ರಾಜ—ಭಗವನ್, ಕುಮಾರನು—

— ಜಯಸೇನನು ಅವಸರದಿಂದ ಬರುವನು —

ಜಯಸೇನ—ಮಹಾರಾಜನು ಕ್ಷಮಿಸಬೇಕು. ಕುಮಾರನು ಶ್ಮಶಾನದ ಬಳಿಯಲ್ಲಿ ಕ್ಷಣಮಾತ್ರ ವಿಶ್ರಮಿಸಿಕೊಂಡು—

ಭಗವಾನ್—ಮುಂದೆ ನುಗ್ಗಿದನೆ?

ರಾಜ—ಹಾಗಾದರೆ ರಥವು ಮುರಿಯಲಿಲ್ಲ?

ಜಯಸೇನ—ಇಲ್ಲ. ಕ್ಷಣಮಾತ್ರ ವಿಶ್ರಮಿಸಿಕೊಂಡು ಶತ್ರುಸೇನೆಯನ್ನು ಭೇದಿಸುತ್ತ ಮುಂದೆ ನುಗ್ಗಿದನು—

ರಾಜ—ಆಮೇಲೆ?

ಜಯಸೇನ—ಕುಮಾರನು ಶತ್ರುಗಳ ಸಮಸ್ತಸೇನೆಯನ್ನೂ ಸದೆಬಡಿದನು! ಆತನ ಬಾಣಾಘಾತದಿಂದ ಕರಿಯಾನೆಗಳು ಕೆಂಪಾದವು!

ಭಗವಾನ್—ಅದಿರಲಿ, ಮುಂದೇನು?

ಜಯಸೇನ—ಕುಮಾರನು ಶರವರ್ಷವನ್ನೇ ಕರೆದು ಶತ್ರುರಥವನ್ನು ಸ್ತಂಭಿಸಿದನು! ನಮ್ಮ ರಥದಿಂದ ಬಾಣಗಳ ನದಿಯೇ ಹರಿಯುತಿದೆಯಂತೆ!

ಭಗವಾನ್—(ತನಗೆ ತಾನೆ) ನನ್ನ ಮಾತುಗಳು ಸುಳ್ಳಾಗಲಿಲ್ಲ. ಈ ಶರವರ್ಷವೆಲ್ಲವೂ, ಅಗ್ನಿದೇವನು ಅಂದು ಅರ್ಜುನನಿಗೆ ಕೊಟ್ಟ ಅಕ್ಷಯತೂಣೀರದ ಮಹಿಮೆಯೇ ಆಗಿರಬೇಕು.

ರಾಜ—ಈಗ ಶತ್ರುಗಳ ಸಮಾಚಾರವೇನು?

ಜಯಸೇನ—ನಾನು ಅದನ್ನು ಪ್ರತ್ಯಕ್ಷವಾಗಿ ಕಂಡಿಲ್ಲ; ಕಂಡವರು ಹೇಳಿರುವರು. ಧನುಸ್ಸಿನ ಶಬ್ದವನ್ನು ಕೇಳಿದೊಡನೆಯೇ ದ್ರೋಣನು, "ಅದೇ ಇದು" ಎಂದು ಹಿಂತಿರುಗಿದನಂತೆ. ತನ್ನ ಧ್ವಜದಲ್ಲಿ ನೆಟ್ಟ ಬಾಣವೊಂದನ್ನು ಕಂಡು, ಭೀಷ್ಮನು "ಇನ್ನು ಸಾಕು" ಎಂದು ಕೈತಡೆದು ನಿಂತನಂತೆ. ಕರ್ಣನು ಶರಗಳಿಂದ ಭಗ್ನನಾಗಿರುವನಂತೆ. ಇನ್ನುಳಿದ ರಾಜರು "ಇದೇನಿರಬಹುದು" ಎಂದು ಭಯಾಕ್ರಾಂತರಾದರಂತೆ. ಈ ಸರ್ವವ್ಯಾಪಿಯಾಗಿರುವ ಭಯದಲ್ಲಿ ಕುಮಾರ ಅಭಿಮನ್ಯುವೊಬ್ಬನು ಮಾತ್ರ ಲಕ್ಷ್ಯಮಾಡದೆ ಯುದ್ಧಮಾಡುತ್ತಿರುವನಂತೆ.

ಭಗವಾನ್—(ಭಯದಿಂದಲೂ ಆಶ್ಚರ್ಯದಿಂದಲೂ) ಏನು ಅಭಿಮನ್ಯುವು ಬಂದಿರುವನೆ?—ಎಲೈ ರಾಜನೆ! ಎರಡು ವಂಶಗಳ ತೇಜಸ್ಸೇ ಮೂರ್ತಿಮತ್ತಾಗಿರುವ ಸೌಭದ್ರನು ಯುದ್ಧಮಾಡುತ್ತಿರುವುದಾದರೆ ಬೇರೊಬ್ಬ ಸಾರಥಿಯನ್ನು ಕಳುಹಿಸು! ಬೃಹನ್ನಳೆಯೂ ಅವನೆದುರಿನಲ್ಲಿ ಅನುಮಾನಿಸಬಹುದು.

ರಾಜ—ಇಲ್ಲ, ಇಲ್ಲ! ಹಾಗೆನ್ನಬೇಡ. ಯಾರ ಕವಚವನ್ನು ಭೇದಿಸಲು ಪರಶುರಾಮನಿಗೇ ಅಸಾಧ್ಯವಾಯಿತೋ ಅಂತಹ ಭೀಷ್ಮನನ್ನೂ, ಮಂತ್ರಾಯುಧಸಂಪನ್ನನಾದ ದ್ರೋಣನನ್ನೂ, ಕರ್ಣ, ಜಯದ್ರಥಾದಿ ಉಳಿದೆಲ್ಲ ರಾಜರನ್ನೂ ಹಿಂದಟ್ಟಿದ ಕುಮಾರನು, ಈ ಸೌಭದ್ರನನ್ನು ಹಿಂದಟ್ಟಲಾರನೋ? ಅಥವಾ, ಸೌಭದ್ರನ ತಂದೆಯು ಅರ್ಜುನನೆಂದು ಕುಮಾರನು ಹೆದರುವನೆಂದು

ತಿಳಿದೆಯಾ ?—ಅಲ್ಲದೆ, ಇಬ್ಬರೂ ಸಮಾನವಯಸ್ಕರಾದುದರಿಂದ ಸ್ನೇಹಿತರಾಗಿಯೇ ಹಿಂತಿರುಗಬಹುದು.

ಜಯಸೇನ—ಕುಮಾರನ ರಥವು ಸಾರಥ್ಯದಲ್ಲಿ ಯೋಗ್ಯವಾದ ಉಪದೇಶವನ್ನೇ ಕೊಡುವಂತಿದೆ! ಸಡಿಲಬಿಟ್ಟರೆ ಮುಂದೆ ನುಗ್ಗುವುದು; ಬಿಗಿಹಿಡಿದರೆ ಪಕ್ಕಕ್ಕೆ ತಿರುಗುವುದು. ತಾನಾಗಿ ಮೇಲೆ ಬೀಳುವುದಿಲ್ಲ; ಸಮಯಸಿಕ್ಕಿತೆಂದು ಶತ್ರುರಥವನ್ನು ಮುರಿಯುವುದಿಲ್ಲ. ಹತ್ತಿರ ಬಂದಂತಾಗಿ ನುಸುಳಿ ದೂರ ಹೋಗುವುದಂತೆ.

ರಾಜ—ಹೋಗು, ಹೆಚ್ಚಿನ ಸಮಾಚಾರವನ್ನು ತಿಳಿದು ಬಾ.

ಜಯಸೇನ—ಅಪ್ಪಣೆ, ಮಹಾಪ್ರಭು.

— ಅವನು ಹೋಗುವನು —

— ಸೇವಕನು ಅವಸರದಿಂದ ಬರುವನು —

ಸೇವಕ—ಮಹಾರಾಜನಿಗೆ ಜಯವಾಗಲಿ! ವಿರಾಟೇಶ್ವರನಿಗೆ ಮಂಗಳವಾಗಲಿ. ಮಹಾಪ್ರಭೂ, ಶುಭವಾರ್ತೆಯನ್ನು ತಂದಿರುವೆನು! ಗೋಗ್ರಹಣವು ಮುರಿಯಿತು; ಧೃತರಾಷ್ಟ್ರಕುಮಾರರು ಪಲಾಯನರಾದರು!

ಭಗವಾನ್—(ರಾಜನನ್ನು ಕುರಿತು) ನೀನು ಅದೃಷ್ಟಶಾಲಿ.

ರಾಜ—ಛೆ! ಛೆ! ತಾವು ಹಾಗೆ ಹೇಳಕೂಡದು; ಈ ವಿಜಯಕ್ಕೆ ತಾವು ಕಾರಣರು. (ಸೇವಕನನ್ನು ನೋಡಿ) ಈಗ ಕುಮಾರನೆಲ್ಲಿರುವನು?

ಸೇವಕ—ಯುದ್ಧದಲ್ಲಿ ತಾನು ಕಂಡ ಯೋದ್ಧರ ಸಾಹಸಗಳನ್ನು ಪುಸ್ತಕದಲ್ಲಿ ಗುರುತುಹಾಕಿಕೊಳ್ಳುತ್ತಿರುವನು.

ರಾಜ—(ಭಗವಾನನನ್ನು ನೋಡಿ) ಓಹೊ! ಕುಮಾರನು ಶ್ಲಾಘನೀಯವಾದುದನ್ನೇ ಮಾಡುತ್ತಿರುವನು. ಯೋದ್ಧನು ಹೊಡೆದಾಡಿ ಗಾಯಪಟ್ಟಿದ್ದರೂ, ಅನಂತರದಲ್ಲಿ ಆವನು ಹೊಂದತಕ್ಕ ಮರ್ಯಾದೆಯು ಆ ಬಾಧೆಯನ್ನು ನಿವಾರಿಸುವುದು. (ಸೇವಕನನ್ನು ನೋಡಿ)—ಸರಿ, ಬೃಹನ್ನಳೆಯೆಲ್ಲಿ?

ಸೇವಕ—ಈ ಸಂತೋಷಸಮಾಚಾರವನ್ನು ತಿಳಿಸಲು ಅಂತಃಪು
ಕಡೆಗೆ ಹೋಗಿರುವಂತಿದೆ.

ರಾಜ—ಬೃಹನ್ನಳೆಯನ್ನು ಬರಹೇಳು.

ಸೇವಕ—ಅಪ್ಪಣೆ.

—ಅವನು ಹೋಗುವನು—

ರಾಜ—ಭಗವನ್! ಕುಮಾರನನ್ನು ನೋಡಬೇಕೆಂದು ತವಕವುಂಟಾ ತ್ತಿದೆ. ಆದ್ದರಿಂದ ಕ್ಷಣಕಾಲ ಹೋಗಿಬರುವೆನು. ಬೃಹ ಳೆಯು ಇಲ್ಲಿಗೆ ಬರಬಹುದು; ನೀನು ಇಲ್ಲಿಯೇ ಇರುವನಾಗು.

—ರಾಜನು ಹೋಗುವನು—

—ಬೃಹನ್ನಳೆಯು ಬರುವನು—

[ಬೃಹನ್ನಳೆಯು ಎತ್ತರವಾದ ಆಳು, ಬಲಶಾಲಿ. ಗಂಡುಗಚ್ಚೆಯನ್ನು ಹ ರುವ ಪಂಚೆ. ಅಂಗವಸ್ತ್ರದಿಂದ ಸೊಂಟವನ್ನು ಬಿಗಿದಿರುವನು. ಕವಚವ ತೊಟ್ಟಿರುವನು ಸೀರೆಯ ಸೆರಗಿನಂತೆ ಒಂದು ವಸ್ತ್ರವನ್ನು ಹೊದ್ದಿರುವ ಕೂದಲನ್ನು ಉದ್ದವಾಗಿ ಬಿಟ್ಟಿರುವನು. ಕೈಗಳಲ್ಲಿ ಸ್ತ್ರೀಯ ಆಭರಣಗಳು.]

ಬೃಹನ್ನಳಾ— ಭಗವನ್! ಅಭಿವಂದಿಸುವೆನು.

ಭಗವಾನ್—ವತ್ಸ, ನಿನಗೆ ಮಂಗಳವಾಗಲಿ! ರಾಜನು ಸದ್ಯದಲ್ಲಿಯೆ ಬರುವನು.—ಯುದ್ಧವಾರ್ತೆಯನ್ನು ಹೇಳು.

ಬೃಹನ್ನಳಾ—ಗಾಂಡೀವವನ್ನು ಬಗ್ಗಿಸಿ ಹೆದೆಯೇರಿಸಲು ಕಷ್ಟವಾಯಿತ ಒಂದು ಕ್ಷಣಕಾಲ ಏನು ಮಾಡಲೂ ತೋಚಲಿಲ್ಲ. ಆಮೇ ಬಾಣಪ್ರಯೋಗ ಮಾಡುವಾಗಲೂ, ಭದ್ರಮುಷ್ಟಿಯಿಂದ ಬಾ ವನ್ನಲುಗದಂತೆ ನಿಲ್ಲಿಸುವಾಗಲೂ ಕೈ ನಡುಗಿದವು; ಮುಂದೆ ಳಲ್ಲಿ ಪಟುತ್ವವೇ ಇರಲಿಲ್ಲ. ಸ್ತ್ರೀವೇಷದಲ್ಲಿದ್ದು ಕಳೆದುಕೊಂ ಅಭ್ಯಾಸಬಲವು ಕ್ರಮೇಣ ಬಂದು ಸೇರಿತು.

ಭಗವಾನ್—ವತ್ಸ, ಗ್ರಹಚಾರಫಲವನ್ನು ಅನುಭವಿಸಿಯೇ ತೀರಬೇಕ ಮುಂದೇನಾಯಿತು?

ತಿಳಿದೆಯಾ ?—ಅಲ್ಲದೆ, ಇಬ್ಬರೂ ಸಮಾನವಯಸ್ಕರಾದುದರಿಂದ ಸ್ನೇಹಿತರಾಗಿಯೇ ಹಿಂತಿರುಗಬಹುದು.

ಜಯಸೇನ—ಕುಮಾರನ ರಥವು ಸಾರಥ್ಯದಲ್ಲಿ ಯೋಗ್ಯವಾದ ಉಪದೇಶವನ್ನೇ ಕೊಡುವಂತಿದೆ! ಸಡಿಲಬಿಟ್ಟರೆ ಮುಂದೆ ನುಗ್ಗುವುದು; ಬಿಗಿಹಿಡಿದರೆ ಪಕ್ಕಕ್ಕೆ ತಿರುಗುವುದು. ತಾನಾಗಿ ಮೇಲೆ ಬೀಳುವುದಿಲ್ಲ; ಸಮಯಸಿಕ್ಕಿತೆಂದು ಶತ್ರುರಥವನ್ನು ಮುರಿಯುವುದಿಲ್ಲ. ಹತ್ತಿರ ಬಂದಂತಾಗಿ ನುಸುಳಿ ದೂರ ಹೋಗುವುದಂತೆ.

ರಾಜ—ಹೋಗು, ಹೆಚ್ಚಿನ ಸಮಾಚಾರವನ್ನು ತಿಳಿದು ಬಾ.

ಜಯಸೇನ—ಅಪ್ಪಣೆ, ಮಹಾಪ್ರಭು.

— ಅವನು ಹೋಗುವನು —

— ಸೇವಕನು ಅವಸರದಿಂದ ಬರುವನು —

ಸೇವಕ—ಮಹಾರಾಜನಿಗೆ ಜಯವಾಗಲಿ! ವಿರಾಟೇಶ್ವರನಿಗೆ ಮಂಗಳವಾಗಲಿ. ಮಹಾಪ್ರಭೂ, ಶುಭವಾರ್ತೆಯನ್ನು ತಂದಿರುವೆನು! ಗೋಗ್ರಹಣವು ಮುರಿಯಿತು; ಧೃತರಾಷ್ಟ್ರಕುಮಾರರು ಪಲಾಯನರಾದರು!

ಭಗವಾನ್—(ರಾಜನನ್ನು ಕುರಿತು) ನೀನು ಅದೃಷ್ಟಶಾಲಿ.

ರಾಜ—ಛೆ! ಛೆ! ತಾವು ಹಾಗೆ ಹೇಳಕೂಡದು; ಈ ವಿಜಯಕ್ಕೆ ತಾವು ಕಾರಣರು. (ಸೇವಕನನ್ನು ನೋಡಿ) ಈಗ ಕುಮಾರನೆಲ್ಲಿರುವನು?

ಸೇವಕ—ಯುದ್ಧದಲ್ಲಿ ತಾನು ಕಂಡ ಯೋಧರ ಸಾಹಸಗಳನ್ನು ಪುಸ್ತಕದಲ್ಲಿ ಗುರುತುಹಾಕಿಕೊಳ್ಳುತ್ತಿರುವನು.

ರಾಜ—(ಭಗವಾನನನ್ನು ನೋಡಿ) ಓಹೊ! ಕುಮಾರನು ಶ್ಲಾಘನೀಯವಾದುದನ್ನೇ ಮಾಡುತ್ತಿರುವನು. ಯೋಧನು ಹೊಡೆದಾಡಿ ಗಾಯಪಟ್ಟಿದ್ದರೂ, ಅನಂತರದಲ್ಲಿ ಅವನು ಹೊಂದತಕ್ಕ ಮರ್ಯಾದೆಯು ಆ ಬಾಧೆಯನ್ನು ನಿವಾರಿಸುವುದು. (ಸೇವಕನನ್ನು ನೋಡಿ)—ಸರಿ, ಬೃಹನ್ನಳೆಯೆಲ್ಲಿ?

ಸೇವಕ—ಈ ಸಂತೋಷಸಮಾಚಾರವನ್ನು ತಿಳಿಸಲು ಅಂತಃಪುರದ ಕಡೆಗೆ ಹೋಗಿರುವಂತಿದೆ.

ರಾಜ—ಬೃಹನ್ನಳೆಯನ್ನು ಬರಹೇಳು.

ಸೇವಕ—ಅಪ್ಪಣೆ.

—ಅವನು ಹೋಗುವನು—

ರಾಜ—ಭಗವನ್! ಕುಮಾರನನ್ನು ನೋಡಬೇಕೆಂದು ತವಕವುಂಟಾಗುತ್ತಿದೆ ಆದ್ದರಿಂದ ಕ್ಷಣಕಾಲ ಹೋಗಿಬರುವೆನು. ಬೃಹನ್ನಳೆಯು ಇಲ್ಲಿಗೆ ಬರಬಹುದು; ನೀನು ಇಲ್ಲಿಯೇ ಇರುವನಾಗು.

—ರಾಜನು ಹೋಗುವನು—

—ಬೃಹನ್ನಳೆಯು ಬರುವನು—

[ಬೃಹನ್ನಳೆಯು ಎತ್ತರವಾದ ಆಳು, ಬಲಶಾಲಿ. ಗಂಡುಗಚ್ಚೆಯನ್ನು ಹಾಕಿರುವ ಪಂಚೆ. ಅಂಗವಸ್ತ್ರದಿಂದ ಸೊಂಟವನ್ನು ಬಿಗಿದಿರುವನು. ಕವಚವನ್ನು ತೊಟ್ಟಿರುವನು ಸೀರೆಯ ಸೆರಗಿನಂತೆ ಒಂದು ವಸ್ತ್ರವನ್ನು ಹೊದ್ದಿರುವನು. ಕೂದಲನ್ನು ಉದ್ದವಾಗಿ ಬಿಟ್ಟಿರುವನು. ಕೈಗಳಲ್ಲಿ ಸ್ತ್ರೀಯರ ಆಭರಣಗಳು.]

ಬೃಹನ್ನಳಾ— ಭಗವನ್! ಅಭಿವಂದಿಸುವೆನು.

ಭಗವಾನ್—ವತ್ಸ, ನಿನಗೆ ಮಂಗಳವಾಗಲಿ! ರಾಜನು ಸದ್ಯದಲ್ಲಿಯೇ ಬರುವನು.—ಯುದ್ಧವಾರ್ತೆಯನ್ನು ಹೇಳು.

ಬೃಹನ್ನಳಾ—ಗಾಂಡೀವವನ್ನು ಬಗ್ಗಿಸಿ ಹೆದೆಯೇರಿಸಲು ಕಷ್ಟವಾಯಿತು; ಒಂದು ಕ್ಷಣಕಾಲ ಏನು ಮಾಡಲೂ ತೋಚಲಿಲ್ಲ. ಆಮೇಲೆ ಬಾಣಪ್ರಯೋಗ ಮಾಡುವಾಗಲೂ, ಭದ್ರಮುಷ್ಟಿಯಿಂದ ಬಾಣವನ್ನಲುಗದಂತೆ ನಿಲ್ಲಿಸುವಾಗಲೂ ಕೈ ನಡುಗಿದವು; ಮುಂದೋಳಲ್ಲಿ ಪಟುತ್ವವೇ ಇರಲಿಲ್ಲ. ಸ್ತ್ರೀವೇಷದಲ್ಲಿದ್ದು ಕಳೆದುಕೊಂಡ ಅಭ್ಯಾಸಬಲವು ಕ್ರಮೇಣ ಬಂದು ಸೇರಿತು.

ಭಗವಾನ್—ವತ್ಸ, ಗ್ರಹಚಾರಫಲವನ್ನು ಅನುಭವಿಸಿಯೇ ತೀರಬೇಕಪ್ಪ! ಮುಂದೇನಾಯಿತು?

ಬೃಹನ್ನಳಾ—ನಾನು ಈ ಲಜ್ಜಾಸ್ಪದವಾದ ವೇಷದಲ್ಲಿಯೇ ನರೇಂದ್ರ ಮಂಡಲದೆದುರಿನಲ್ಲಿ ಬಿಲ್ಲು ಸೆಳೆಯಬೇಕಾಯಿತಲ್ಲ ಎಂದು ಯೋಚಿಸುತ್ತಿದ್ದೆ. ಆದರೆ ಕೂಡಲೇ ಬಾಣದ ಮಳೆಯು ಸುರಿಯಲು, ಧೂಳಿಯು ಎಲ್ಲವನ್ನೂ ಮುಚ್ಚಿ ಕವಿಯಿತು. ಆದುದರಿಂದ ಯಾರೂ ಗುರುತಿಸಿರಲಾರರು. ಭಗವನ್, ನಾನು ಗೋಗ್ರಹಣವನ್ನು ಮುರಿದೆನು; ರಾಜನಿಗೆ ವಿಜಯವನ್ನು ಪಡೆದೆನು. ಆದರೂ ನನ್ನ ಹೃದಯದಲ್ಲಿ ವಿಜಯಿಯ ಸಂತೋಷವಿಲ್ಲ. ಏನಾದರೇನು? ಯುದ್ಧಮುಖದಲ್ಲಿ ದುರ್ಯೋಧನನನ್ನು ಹಿಡಿದು, ಕೈಕಾಲು ಬಿಗಿದು ಈ ವಿರಾಟನಗರಿಗೆ ಎಳೆದುತರಲಿಲ್ಲವಲ್ಲಾ!

ಭಗವಾನ್—ಆದರೂ, ಈಗ ಪ್ರಿಯವಾರ್ತೆಗಳ ಸಂತೋಷದಲ್ಲಿ, ದುಡುಕಿ, ನಮ್ಮ ನಿಜರೂಪವನ್ನು ಹೊರಗೆಡಹಬಾರದು. ಆದರೆ, ಅದಕ್ಕೂ ಕಾಲವು ಸನ್ನಿಹಿತವಾಗಿದೆ.

— ರಾಜನು ಬರುವನು —

ರಾಜ—ಭಗವನ್! ಕುಮಾರನು ಯೋದ್ಧರನ್ನೆಲ್ಲಾ ಕಂಡು ಅವರಿಗೆ ತಕ್ಕ ಮನ್ನಣೆಯನ್ನು ಕೊಡಲು ಹೋಗಿರುವನಂತೆ.

ಬೃಹನ್ನಳಾ—ಒಡೆಯನೆ, ನಮಸ್ಕರಿಸುವೆನು.

ರಾಜ—(ಪೀಠದಲ್ಲಿ ಕುಳಿತುಕೊಂಡು) ರೂಪವೇ ಆಗಲಿ, ಕುಲವೇ ಆಗಲಿ ಕಾರಣವಲ್ಲ. ಮಹಾತ್ಮರಾಗಲಿ, ನೀಚರಾಗಲಿ ತಮ್ಮ ತಮ್ಮ ಕಾರ್ಯದಿಂದಲೇ ತಿಳಿದು ಬರುವರು. ಇದುವರೆಗೆ ಈ ರೂಪವನ್ನು ಎಲ್ಲರೂ ಹೀಯಾಳಿಸುತ್ತಿದ್ದರು; ಈಗ ಈ ರೂಪವೇ ವಿಶೇಷವಾದ ಗೌರವವನ್ನು ಸಂಪಾದಿಸಿಲ್ಲವೆ? ಬೃಹನ್ನಳಾ, ನಿನಗೆ ಹೆಚ್ಚು ಆಯಾಸವುಂಟಾಗಿರಬಹುದು. ಆದರೂ ಯುದ್ಧವಾರ್ತೆಯನ್ನು ವಿಶದವಾಗಿ ಕೇಳಲು ಆಸೆಯಾಗುತ್ತಿದೆ.

ಬೃಹನ್ನಳಾ—ಒಡೆಯನೆ ಕೇಳಬೇಕು—

— ಜಯಸೇನನು ಉತ್ಸಾಹದಿಂದ ಓಡಿಬರುವನು —

ಜಯಸೇನ—ಮಹಾರಾಜನಿಗೆ ಜಯವಾಗಲಿ !

ರಾಜ—ಅದೇನು ಇಷ್ಟು ಉತ್ಸಾಹ ? ಸಮಾಚಾರವೇನು ?

ಜಯಸೇನ—ನಂಬುವುದಕ್ಕೆ ಸಾಧ್ಯವಲ್ಲದ ಪ್ರಿಯವಾರ್ತೆ ! ಅಭಿಮನ್ಯುವು ಸೆರೆಸಿಕ್ಕಿದನು !

(ರಾಜ, ಭಗವಾನ್, ಬೃಹನ್ನಳಾ ಮೂವರೂ ಆಶ್ಚರ್ಯಚಕಿತರಾಗುವರು )

ಬೃಹನ್ನಳಾ—ಏನು, ಸೆರೆಸಿಕ್ಕಿದನೆ ? (ಭಗವಾನನನ್ನು ನೋಡಿ, ರಾಜನಿಗೆ ಕೇಳಿಸದಂತೆ) ಭಗವನ್, ಈ ರಾಜನ ಸೇನೆಯೆಲ್ಲವನ್ನೂ ತೂಗಿನೋಡಿರುವೆನು. ಇಂದೇ ಕುಮಾರನ ಸಮರಲೀಲೆಯನ್ನೂ ಕಂಡೆನು: ಆವನೊಡನೆ ಸರಿದೂಗುವ ಶೂರನೊಬ್ಬನೂ ಈ ಸೇನೆಯಲ್ಲಿರಲಿಲ್ಲ. ಕೀಚಕನೂ ಬದುಕಿಲ್ಲವಾಗಿ, ಆತನನ್ನು ಸೆರೆಹಿಡಿದವರು ಯಾರಿರಬಹುದು ?

ರಾಜ—ಬೃಹನ್ನಳಾ, ನೀನು ಈ ಸಮಾಚಾರವನ್ನು ಬಲ್ಲೆಯಾ ?

ಬೃಹನ್ನಳಾ—ಮಹಾರಾಜ, ಆತನನ್ನು ಜಯಿಸುವವರು ಯಾರೂ ಇದ್ದಂತೆ ತೋರಲಿಲ್ಲ. ಆತನು ಬಲಶಾಲಿಯಾಗಿಯೂ ಸುಶಿಕ್ಷಿತನಾಗಿಯೂ ತೋರಿದನು. ಅವನ ತಂದೆಯ ದುರದೃಷ್ಟದಿಂದಲೇನಾದರೂ ಇಂತಹ ಅಪಜಯವಾಗಿರಬಹುದು.

ರಾಜ—(ಜಯಸೇನನನ್ನು ಕುರಿತು) ಆತನನ್ನು ಹೇಗೆ ಸೆರೆಹಿಡಿದರು ?

ಜಯಸೇನ—ನಿರ್ಭೀತಿಯಿಂದ ಅವನ ರಥಕ್ಕೆ ನುಗ್ಗಿ ತನ್ನ ಕೈಗಳಿಂದಲೇ ಹಿಡಿದು ಕೆಳಕ್ಕಿಳಿಸಿದನು.

ರಾಜ—ಯಾರು, ಯಾರು ?

ಜಯಸೇನ—ಪಾಕಶಾಲೆಯ ಮುಖ್ಯಸ್ಥನನ್ನಾಗಿ, ಮಹಾಸ್ವಾಮಿಯವರು ನೇಮಿಸಿರುವ ಆ ಮನುಷ್ಯನು.

(ಬೃಹನ್ನಳೆಯೂ ಭಗವಾನನೂ ಅರ್ಥಗರ್ಭಿತದೃಷ್ಟಿಯಿಂದ ಒಬ್ಬರನ್ನೊಬ್ಬರು ನೋಡಿ, ಮುಗುಳ್ನಗೆಯನ್ನು ಸೂಚಿಸುವರು.)

ರಾಜ—ಆ ಅಭಿಮನ್ಯುವನ್ನು ಗೌರವದಿಂದ ಸತ್ಕರಿಸಿ ಕರೆತರಲಿ.

ಭಗವಾನ್—(ರಾಜನನ್ನು ಕುರಿತು) ಯಾದವಪಾಂಡವ ವಂಶಗಳ ನಾಥನೆನಿಸುವ ಆ ಅಭಿಮನ್ಯುವನ್ನು ನೀನು ಸತ್ಕರಿಸಿದಲ್ಲಿ, ಭೀತಿಯಿಂದ ಹೀಗೆ ಮಾಡಿದನೆಂದು ಲೋಕವು ಹೇಳಬಹುದು. ಆದುದರಿಂದ ನೀನು ಉದಾಸೀನನಾಗಿರುವುದೇ ಯುಕ್ತವು.

ರಾಜ—ಛೆ! ಛೆ! ಯಾದವೀಪುತ್ರನನ್ನು ತಿರಸ್ಕರಿಸುವುದೆ? ಎಂದಿಗೂ ಇಲ್ಲ! ಏಕೆಂದರೆ, ಇವನು ಯುಧಿಷ್ಠಿರ ಪುತ್ರನು; ಅಲ್ಲದೆ ನನ್ನ ಕುಮಾರನ ಸಮವಯಸ್ಕನಾದುದರಿಂದ ಸ್ನೇಹಿತನಾಗಬಹುದು. ದ್ರುಪದನಿಗೂ ನಮಗೂ ಸಂಬಂಧವಿರುವುದರಿಂದ ಈತನು ನನಗೆ ಮರಿಮಗನು. ಅದೂ ಅಲ್ಲದೆ ನಾನು ಇನ್ನೂ ಕನ್ಯಾಪಿತೃವಾಗಿಯೇ ಇರುವೆನು. ಆದುದರಿಂದ ಇವನು ಪೂಜಾರ್ಹನಾದ ಅತಿಥಿಯೇ ಆಗಿದ್ದಾನೆ. ಇಷ್ಟು ಅಲ್ಲದೆ, ಪಾಂಡವರು ನಮ್ಮ ಆಪ್ತವರ್ಗಕ್ಕೇ ಸೇರಿದವರಷ್ಟೆ!

ಭಗವಾನ್—ಅದು ನಿಜ. ಆದರೂ ಲೋಕವು ಏನನ್ನುವುದೊ?

ರಾಜ—ಆದಿರಲಿ. ಆತನನ್ನು ಕರೆತರುವವರು ಯಾರು? ಕುಮಾರನು ಕಾರ್ಯಾಂತರದಲ್ಲಿರುವನು.

ಭಗವಾನ್—ಬೃಹನ್ನಳೆಯು ಹೋಗಲಿ

(ಬೃಹನ್ನಳೆಯು ಸಂತೋಷಕೃತಜ್ಞತಾದೃಷ್ಟಿಯಿಂದ ಭಗವಾನನನ್ನು ನೋಡುವನು.)

ರಾಜ—ಬೃಹನ್ನಳಾ, ನೀನು ಅಭಿಮನ್ಯುವನ್ನು ಸತ್ಕರಿಸಿ ಕರೆದುಕೊಂಡು ಬಾ.

ಬೃಹನ್ನಳಾ— ರಾಜನ ಅಪ್ಪಣೆಯಂತೆ!

— ಅವನು ಹೋಗುವನು —

ರಾಜ—ಭಗವನ್, ಕುಮಾರನ ಅದ್ಭುತ ಸಾಹಸವನ್ನು ನೋಡಿದೆಯಾ? ಭೀಷ್ಮನಂತಹ ರಾಜರೇ ಬೆನ್ನುತೋರಿ ಓಡಿದರಂತೆ! ಸೌಭದ್ರನು ಬಂಧಿತನಾಗಿರುವನು. ಕುಮಾರನು ಇಂದು ಪೃಥಿವಿಯನ್ನೇ ಗೆದ್ದಂತಲ್ಲವೆ?

— ತೆರೆಯು ಬೀಳುವುದು —

# ನಾಲ್ಕನೆಯ ದೃಶ್ಯ.

[ಅರಮನೆಯ ಮುಂಭಾಗದ ರಾಜಮಾರ್ಗ. ೨ ನೆಯ ದೃಶ್ಯದಂತೆಯೆ]

— ಬೃಹನ್ನಳೆಯು ಒಂದು ಪಕ್ಕದಿಂದ ಬರುವನು —

ಬೃಹನ್ನಳಾ—ಆರ್ಯನು ಯೋಗ್ಯಸೂಚನೆಯನ್ನೇ ಕೊಟ್ಟನು. ನಾನೂ ಅದನ್ನೇ ಅಪೇಕ್ಷಿಸುತ್ತಿದ್ದೆನು. ಈಗ ನಾನು ಕುಮಾರನನ್ನು ಕಂಡು, ಆಲಿಂಗಿಸಿ, ಮುದ್ದಾಡಿ ಆನಂದಿಸಬಹುದು. ಅವರೆದು ರಿಗೆ ಅದು ಸಾಧ್ಯವಾಗುತ್ತಿರಲಿಲ್ಲ.

— ಭೀಮಸೇನನು ಇನ್ನೊಂದು ಪಕ್ಕದಿಂದ ಬರುವನು —

(ಇವನು ಕರಿಯ ವಸ್ತ್ರವನ್ನುಟ್ಟು ಇನ್ನೊಂದನ್ನು ಹೊದ್ದಿರುವನು ತಲೆಯ ಕೂದಲನ್ನು ಉದ್ದವಾಗಿ ಬಿಟ್ಟಿರುವನು.)

ಬೃಹನ್ನಳಾ—ಆರ್ಯ! ಇದೇನು, ಅವಸರದಲ್ಲಿ ಹೊರಟಿರುವೆ? ಕುಮಾರ ನೆಲ್ಲಿ?

ಭೀಮಸೇನ—ಅರ್ಜುನ! ಜತುಗೃಹವು ಸುಡುತ್ತಿದ್ದಾಗ ಜನನಿಯನ್ನೂ, ನಿಮ್ಮೆಲ್ಲರನ್ನೂ ನಾನು ಈ ಭುಜಗಳಲ್ಲಿ ಎತ್ತಿಕೊಂಡು ಬಂದೆನು. ಇಂದು ರಥದಿಂದ ಕುಮಾರನೊಬ್ಬನನ್ನು ಮಾತ್ರ ಎತ್ತಿಕೊಂಡು ಬಂದೆನು. ಇವೆರಡೂ ಸಮತೂಕವಾಗಿರುವಂತೆ ತೋರಿತು.

ಬೃಹನ್ನಳಾ—ಆರ್ಯ! ಯಾವ ಉದ್ದೇಶಕ್ಕಾಗಿ ಕುಮಾರನನ್ನು ಇಲ್ಲಿಗೆ ಕರೆತಂದೆ? ಅವನು ಪ್ರಥಮಯುದ್ಧದಲ್ಲಿಯೇ ಪರಾಜಿತನಾದನು. ಅದನ್ನು ಕೇಳಿ ಸುಭದ್ರೆಯು ಇನ್ನೆಷ್ಟು ಶೋಕಿಸುವಳೊ? ಕೃಷ್ಣನೂ ಕೇಳಿ ಸಿಟ್ಟಾಗದಿರನು. ನಾನು ಇನ್ನೇನು ಹೇಳಲಿ? ನಿನ್ನ ಬಾಹುಬಲವು ಯೋಗ್ಯರೀತಿಯಲ್ಲಿ ಪ್ರಕಟವಾಗಲಿಲ್ಲ.

(ಭೀಮನು ಈಮಾತನ್ನು ಕೇಳಿ ಬಹಳ ನೊಂದಂತೆ ತೋರುವನು.)

ಭೀಮ—(ನೊಂದ ದನಿಯಿಂದ) ಅರ್ಜುನ!

ಬೃಹನ್ನಳಾ—ಈಗಲಾದರೂ ಅವನ ತಂದೆಯು ಅರ್ಜುನನೆಂದು ನೆನಪಾಯಿತೆ?

ಭೀಮ—ವತ್ಸ, ಅವನು ಪರಾಜಿತನಾದುದರಿಂದ ಈ ದೋಷಗಳೆಲ್ಲವೂ ಬರುವುವೆಂದು ಬಲ್ಲೆನು. ಆದರೆ ಶತ್ರುಗಳ ಕೈಲಿ ಪುತ್ರನು ಸಿಕ್ಕಿರುವುದನ್ನು ನೋಡಿ ನಾನು ತಡೆಯಲಾರದೆ ಹೋದೆನಪ್ಪಾ! ಅಲ್ಲದೆ, ದುಃಖಮಗ್ನಳಾಗಿರುವ ದ್ರೌಪದಿಯು ಮಗನನ್ನು ಕಂಡು ಸ್ವಲ್ಪ ಸಮಾಧಾನ ಹೊಂದಲೆಂದು ಇಲ್ಲಿಗೆ ಕರೆತಂದನು.

ಬೃಹನ್ನಳಾ—ಆರ್ಯ, ಕ್ಷಮಿಸು. ದೂರದಿಂದಲೇ ಕುಮಾರನನ್ನು ನೋಡಿ ನಾನು ಸಂತೋಷಪಟ್ಟೆನು. ಆದರೆ ಪುತ್ರಸ್ನೇಹವನ್ನು ತಡೆಯಲಾರದೆ, ನೀನು ಅವನಿಗೆ ಆಲಿಂಗನವನ್ನು ಕೊಟ್ಟೆ.—ಅದಿರಲಿ, ಪುತ್ರನೊಡನೆ ಮಾತಾಡಬೇಕೆಂದು ಆಸೆಯಾಗುತ್ತಿದೆ ರಾಜನು ಅವನನ್ನು ಕರೆತರಲು ನನ್ನನ್ನೇ ಕಳುಹಿರುವನು. ನಡೆ. ಅವನಿರುವ ಬಳಿಗೆ ಹೋಗೋಣ.

— ಇಬ್ಬರೂ ಭೀಮನು ಬಂದ ಕಡೆಗೆ ಹೋಗುವರು —

ತೆರೆಯು ಏಳುವುದು.

# ಐದನೆಯ ದೃಶ್ಯ.

[ಅರಮನೆಯ ಇನ್ನೊಂದು ಕೊರಡಿ. ಬಾಗಿಲ ಬಳಿ ಆಲೋಚನಾಮಗ್ನನಾಗಿ ಅಭಿಮನ್ಯುವು ನಿಂತಿರುವನು. ಅಭಿಮನ್ಯುವು ಇನ್ನೂ ಯುವಕ. ಗಂಡು ಗಚ್ಚೆಯನ್ನು ಹಾಕಿ ನಡುವಿಗೆ ಅಂಗವಸ್ತ್ರವನ್ನು ಬಿಗಿದಿರುವನು. ಕವಚವನ್ನು ತೊಟ್ಟಿರುವನು. ಭುಜಕೀರ್ತಿ, ಗೋಧಾಂಗುಲಿಗಳನ್ನು ತೊಟ್ಟಿರುವನು. ರಣಗೂದಲನ್ನು ಕೆದರಿ ಬಿಟ್ಟಿರುವನು]

**ಅಭಿಮನ್ಯು**—ಆತನು ಯಾರಾಗಿರಬಹುದು? ವಿಶಾಲವಕ್ಷನಾಗಿ, ಬಲಶಾಲಿಯಾಗಿ, ಕಬ್ಬಿಣದ ಗದೆಗಳಂತಿದ್ದ ಬಾಹುಗಳುಳ್ಳ ಆ ಮಹಾನುಭಾವನು ಯಾರಿರಬಹುದು? ನನ್ನನ್ನು ಒಂದೇ ಕೈಯ್ಯಲ್ಲಿ ಎತ್ತಿಕೊಂಡು ಬಂದನು. ನನಗಿಂತ ಬಲಶಾಲಿಯಾಗಿದ್ದರೂ ಯಾವ ವಿಧವಾದ ಹಿಂಸೆಯನ್ನೂ ಮಾಡಲಿಲ್ಲ. (ನೋಡುತ್ತಿದ್ದವನು ಹಾಗೆಯೇ ಆಶ್ಚರ್ಯಸೂಚಕದೃಷ್ಟಿಯಿಂದ) ಓಹೋ! ಆ ಮಹಾನುಭಾವನು ಈ ಕಡೆಯೇ ಬರುತ್ತಿರುವನು. ಆತನ ಜೊತೆಯಲ್ಲಿ ಬರುತ್ತಿರುವ ಇನ್ನೊಬ್ಬನು ಯಾರಿರಬಹುದು? ತನಗೆ ಸ್ವಲ್ಪವೂ ಒಪ್ಪದಿರುವ ಹೆಂಗಸರ ತೊಡಿಗೆಗಳನ್ನು ತೊಟ್ಟಿರುವನು! ಗಂಡಾನೆಯು ಹೆಣ್ಣಾನೆಯ ಅಲಂಕಾರವನ್ನು ಹಾಕಿಕೊಂಡಂತಿದೆ! ವೇಷದಿಂದ ಲಘುವಾಗಿ ತೋರಿದರೂ ಮಹಾಪರಾಕ್ರಮಿಯಂತೆ ಕಾಣುವನು. ಉಮೆಯ ವೇಷವನ್ನು ಧರಿಸಿದ ಮಹೇಶ್ವರನಿರಬಹುದೆ? (ಎಂದು ಸ್ವಲ್ಪ ಹಿಂದಕ್ಕೆ ಸರಿಯುವನು)

— ಭೀಮ ಬೃಹನ್ನಳೆ ಇವರು ಬರುವರು —

**ಬೃಹನ್ನಳಾ**—(ಭೀಮನನ್ನು ಕುರಿತು) ಇವನೊಡನೆ ಮೊದಲು ಸ್ವಲ್ಪ ವಿನೋದವಾಗಿ ಮಾತಾಡಲು ಅಪೇಕ್ಷೆಯಾಗುತ್ತಿದೆ. ಆದುದರಿಂದ ನೀನು ಪ್ರಾರಂಭಿಸು.

ಭೀಮ—(ಮುಂದೆ ಬಂದು) ಅಭಿಮನ್ಯೂ—

ಅಭಿಮನ್ಯು—ಏನು ಏನು ! ನಾನು ನಿನಗೆ ಅಭಿಮನ್ಯುವೋ ?—ಹುಂ ! ಏನಯ್ಯಾ, ಉತ್ತಮರಾದ ಕ್ಷತ್ರಿಯರನ್ನು ನೀಚಜನರು ಹೆಸರು ಹಿಡಿದು ಕೂಗುವುದು ಈ ಊರಿನ ನಡತೆಯೋ ? ಅಥವಾ ಸೋತವನೆಂದು ಅಪಮಾನಮಾಡುವಿರೊ ?

ಬೃಹನ್ನಳಾ—ಅಭಿಮನ್ಯು ! ನಿನ್ನ ತಾಯಿಯು ಕ್ಷೇಮದಿಂದಿರುವಳೆ ?

ಅಭಿಮನ್ಯು—(ಕೋಪದಿಂದ) ಏನು, ನನ್ನ ಜನನಿಯೆ ? ಎಚ್ಚರಿಕೆಯಿಂದ ಮಾತನಾಡು. ನನ್ನ ಜನನಿಯ ಮತ್ತು ನಮ್ಮ ಮನೆಯ ಸ್ತ್ರೀಯರ ಕ್ಷೇಮಸಮಾಚಾರವನ್ನು ಕೇಳಲು ನೀನೇನು ಧರ್ಮರಾಜನೊ, ಭೀಮಸೇನನೊ ಅಥವಾ ಅರ್ಜುನನೊ ?

ಬೃಹನ್ನಳಾ—ಅದಿರಲಿ ಅಭಿಮನ್ಯು, ಆ ದೇವಕೀಪುತ್ರನಾದ ಕೇಶವನು ಕುಶಲಿಯೆ ?

ಅಭಿಮನ್ಯು—ಏನು, ಆತನನ್ನೂ ಹೆಸರುಹಿಡಿದು ಕರೆಯುವೆಯಾ ? (ತಾತ್ಸಾರದಿಂದ) ಓಹೋ ! ಅಷ್ಟಲ್ಲದೆ ಮತ್ತೇನು ! ನೀನು ಅಭಿಮಾನ ವಿಟ್ಟು ಕುಶಲವಾರ್ತೆಯನ್ನು ಕೇಳಿದ್ದರಿಂದ ಅವನು ಕುಶಲಿಯೇ ಆಗಿರಬೇಕು !

(ಭೀಮನೂ ಬೃಹನ್ನಳೆಯೂ ಒಬ್ಬರನ್ನೊಬ್ಬರು ನೋಡಿ ನಗುವರು.)

ಅಭಿಮನ್ಯು—ಏನೋ ಸಂಕೇತಮಾಡಿಕೊಂಡು ಇಬ್ಬರೂ ಪರಿಹಾಸಮಾಡುವಿರೋ ?

ಬೃಹನ್ನಳಾ—ಇಲ್ಲ ಇಲ್ಲ. ನಿನ್ನ ಪಿತನು ಅರ್ಜುನನು, ಜನಾರ್ದನನು ನಿನ್ನ ಮಾವನು. ತರುಣನಾದ ನೀನು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತನಾಗಿದ್ದರೂ, ಪಾಪ ! ಯುದ್ಧದಲ್ಲಿ ಪರಾಜಿತನಾದೆಯಲ್ಲಾ ಎಂದು ಯೋಚಿಸುತ್ತಿದ್ದೆ.

ಅಭಿಮನ್ಯು—ಸಾಕು ಸಾಕು! ಈ ಹರಟೆಯನ್ನು ಸಾಕುಮಾಡು! ಸ್ವಂತ ಸಾಹಸವನ್ನು ಹೊಗಳಿಕೊಳ್ಳುವ ವೀರರು ನಾವಲ್ಲ; ಅದು ನಮ್ಮ ಕುಲಧರ್ಮವಲ್ಲ! ಆದರೆ ನಿಮ್ಮ ಸೇನೆಯಲ್ಲಿ ಹತರಾದ ವರ ಮೈಯಲ್ಲಿ ನಾಟಿರುವ ಬಾಣಗಳನ್ನು ಪರೀಕ್ಷಿಸು! ಯಾರ ಹೆಸರಿದೆ ನೋಡು!

ಬೃಹನ್ನಳಾ—(ಭೀಮನನ್ನು ಕುರಿತು ಅಭಿಮಾನದಿಂದ) ಇವನು ಹೇಳುವುದು ನಿಜ. ನಮ್ಮ ಗಜರಥತುರಗಪದಾತಿಗಳಲ್ಲಿ ಇವನ ಬಾಣಗಳಿಗೆ ಗುರಿಯಾಗದುದು ಯಾವುದೂ ಇಲ್ಲ! ಅಷ್ಟು ಕೌಶಲ್ಯದಿಂದ ಇವನು ಕಾದಿದನು. ನಾನು ಕೂಡ ರಥವನ್ನು ಸಕಾಲಕ್ಕೆ ತಿರುಗಿಸದಿದ್ದಲ್ಲಿ ಇವನ ಬಾಣದ ರುಚಿಯನ್ನು ಸವಿಯಬೇಕಾಗಿತ್ತು.

ಅಭಿಮನ್ಯು—ಅದೇನಯ್ಯ, ನೀವಿಬ್ಬರೇ ಪಿಸುಮಾತಾಡುತ್ತಿರುವುದು? ಧೈರ್ಯವಿದ್ದರೆ ಗಟ್ಟಿಯಾಗಿ ಹೇಳಿ.

ಬೃಹನ್ನಳಾ—ಇದೆಲ್ಲಾ ಮಾತಿನ ಪರಾಕ್ರಮ! ಸಾಧಾರಣ ಕಾಲಾಳೊಬ್ಬನಿಗೆ ನೀನು ಕೈಸೆರೆ ಸಿಕ್ಕಿದೆಯಲ್ಲ!

ಅಭಿಮನ್ಯು—(ಭೀಮನನ್ನು ನೋಡುತ್ತ) ಓಹೋ! ಈತನು ಅದನ್ನೋ ನಿನ್ನಲ್ಲಿ ಹೇಳುತ್ತಿದ್ದುದು? ಆಯುಧರಹಿತನಾಗಿ ನೀನು ಬಂದುದರಿಂದ ನಾನು ಸೆರೆಸಿಕ್ಕಬೇಕಾಯಿತು. ನನ್ನ ಪಿತನು ಅರ್ಜುನನೆಂಬುದು ಜ್ಞಾಪಕದಲ್ಲಿರಲು, ಆಯುಧರಹಿತನಾಗಿ ಬಂದವನನ್ನು ನಾನು ಕೊಲ್ಲುವುದೆ?

ಭೀಮ—(ಅರ್ಜುನನಿಗೆ) ಅರ್ಜುನ! ನೀನು ನಿಜವಾಗಿಯೂ ಧನ್ಯ. ಕುಮಾರನ ಪಿತೃಗೌರವವನ್ನೂ ಪರಾಕ್ರಮವನ್ನೂ ಪ್ರತ್ಯಕ್ಷವಾಗಿ ಕಂಡ ನೀನು ಧನ್ಯನೇ ಸರಿ! (ಅಭಿಮನ್ಯುವನ್ನು ಕುರಿತು) ಕುಮಾರ! ಮಹಾರಾಜನು ನಿನ್ನನ್ನು ಬರಹೇಳಿರುವನು, ಬಾ ಹೋಗೋಣ.

ಅಭಿಮನ್ಯು—(ದರ್ಪದಿಂದ) ಸಾಕು, ಸಾಕು ! ಬಾಯನ್ನು ಬಿಗಿಹಿಡಿ ! ಒಂದೊಂದು ಭುಜವನ್ನೂ ಒಂದೊಂದು ಅಕ್ಷೋಹಿಣಿ ಸೈನ್ಯಕ್ಕೆ ಸಮನೆಂದು ಭಾವಿಸಿ, ನಿರಾಯುಧೀಪರಾಕ್ರಮವನ್ನು ಹೊಂದಿರಲು ನೀನೇನು ನಮ್ಮ ದೊಡ್ಡಪ್ಪನೆಂದು ತಿಳಿದೆಯಾ ?

(ಭಗವಾನನೂ ಅರ್ಜುನನೂ ಭೀಮನನ್ನು ಅರ್ಥಗರ್ಭಿತದೃಷ್ಟಿಯಿಂದ ನೋಡುವರು. ಭೀಮನು ಮುಗುಳ್ನಗೆಯನ್ನು ಸೂಚಿಸುವನು )

ಭಗವಾನ್—ವತ್ಸ, ಆ ನಿನ್ನ ದೊಡ್ಡಪ್ಪನಾರು ?

ಅಭಿಮನ್ಯು—ಏನು ? ನಮ್ಮ ದೊಡ್ಡಪ್ಪನಾರೆಂದು ಕೇಳಿದಿರಾ ?—ಹುಂ ! ನೀವು ಬ್ರಾಹ್ಮಣರು ; ನಾನು ಇದಿರಾಡಲೊಲ್ಲೆ. ಬೇರೆಯವರಾಗಿದ್ದರೆ ಆಗ ಯೋಗ್ಯವಾದ ಉತ್ತರವು ದೊರೆಯುತ್ತಿತ್ತು.

ರಾಜ—ಒಳ್ಳೆಯದು. ನಾನು ಕೇಳುವೆನು. ಆ ನಿನ್ನ ದೊಡ್ಡಪ್ಪನಾರು ?

ಅಭಿಮನ್ಯು—(ದರ್ಪದಿಂದ) ಹಾಗೆಯೋ ? ಒಳ್ಳೆಯದು, ಕೇಳು. ಯಾವನು ತನ್ನ ಬಾಹುಗಳಿಂದಲೇ ಜರಾಸಂಧನ ಗೋಣನ್ನು ಮುರಿದು, ಕೃಷ್ಣನಿಗೊಂದು ಮಹಾವಿಜಯವನ್ನೇ ತಪ್ಪಿಸಿದನೋ ಆ ಪರಾಕ್ರಮಶಾಲಿಯು !

ರಾಜ—(ನಗುತ್ತ) ನಿನ್ನ ದರ್ಪದ ನುಡಿಗಳಿಂದ ನನ್ನ ಆನಂದವು ಹೆಚ್ಚುತ್ತಿದೆ. ಅದಿರಲಿ, ನಿನ್ನನ್ನು ಹೇಗೆ ಉಪಚರಿಸಲಿ ?

ಅಭಿಮನ್ಯು—ಅನುಗ್ರಹವನ್ನು ತೋರಬೇಕಾದರೆ ನಿಗ್ರಹೋಚಿತಮರ್ಯಾದೆಯನ್ನು ಮಾಡಿ, ಕಾಲಿಗೆ ಸಂಕೋಲೆಯನ್ನು ತೊಡಿಸಿ. ಯಾವುದೋ ಭೀಮಬಾಹುಗಳು ನನ್ನನ್ನು ಎತ್ತಿತಂದವು ; ಇಲ್ಲಿಂದಲೂ ಬಾಹುಗಳೇ ಎತ್ತಿಕೊಂಡು ಹೋಗಲಿ.

— ಉತ್ತರಕುಮಾರನು ಮಾತಾಡುತ್ತಾ ಬರುವನು —

(ಉತ್ತರನೂ ಅಭಿಮನ್ಯುವಿನಂತೆಯೇ ವೇಷಭೂಷಣಗಳನ್ನು ಹೊಂದಿರುವನು. ತಲೆಯಲ್ಲಿ ಉತ್ತಮವಾದ ಶಿರೋವೇಷ್ಟಿ.)

ಉತ್ತರ—(ತಾನು ಬಂದ ಕಡೆಗೇ ನೋಡುತ್ತ) ಛಿ! ಛಿ! ನಾನು ಹೇಳುವುದು ತಿಳಿಯುವುದಿಲ್ಲವೆ? ನೀವು ಮಾಡುವುದೆಲ್ಲಾ ಮಿಥ್ಯಾಪ್ರಶಂಸೆ. ಮಹತ್ಕಾರ್ಯವನ್ನೆಸಗಿದವನು ನಾನಲ್ಲ.—(ಆಲೈಸಿ) ಏನು ಏನು? —ನನಗೆ ಸಂತೋಷವೆ? ಛಿ! ನಿಮ್ಮ ಸ್ತುತಿಯಿಂದ ನನಗೆ ಲಜ್ಜೆಯಾಗುವುದು. (ಮುಂದೆ ಬಂದು ಭಗವಾನನ ಬಳಿ ಸಾರಿ) ಭಗವನ್, ನಮಸ್ಕರಿಸುವೆನು.

ಭಗವಾನ್—ನಿನಗೆ ಮಂಗಳವಾಗಲಿ.

ಉತ್ತರ—ತಾತ, ಅಭಿವಂದಿಸುವೆನು.

ರಾಜ—ವತ್ಸ, ಆಯುಷ್ಮಂತನಾಗು. ಯುದ್ಧದಲ್ಲಿ ಸಾಹಸತೋರಿದ ಪರಾಕ್ರಮಿಗಳೆಲ್ಲರಿಗೂ ಯೋಗ್ಯರೀತಿಯಲ್ಲಿ ಮನ್ನಣೆಯನ್ನಿತ್ತೆಯಾ?

ಉತ್ತರ—ಅವರೆಲ್ಲರಿಗೂ ಮನ್ನಣೆಯು ದೊರೆತಿರುವುದು. (ಅರ್ಜುನನನ್ನು ಕೃತಜ್ಞತಾಪೂರಿತ ದೃಷ್ಟಿಯಿಂದ ನೋಡುತ್ತ) ಆದರೆ ಪೂಜ್ಯತಮನಾದ ಈತನಿಗೆ ಮಾತ್ರ ಇನ್ನೂ ಸಂದಿಲ್ಲ.

ರಾಜ—ಯಾರಿಗೆ, ಪುತ್ರ?

ಉತ್ತರ—ಈ ಮಹಾಮಹಿಮನಾದ ಧನಂಜಯನಿಗೆ!

ರಾಜ—(ಬೃಹನ್ನಳೆಯನ್ನು ಆಶ್ಚರ್ಯದಿಂದ ನೋಡುತ್ತ) ಏನು, ಧನಂಜಯನೆ?

ಉತ್ತರ—ತಾತ! ಇದೇನು ಹೀಗೆ ಹೇಳುವೆ? ಈತನೇ ಧನಂಜಯನು. ಈ ಮಹಾಮಹಿಮನು ಶ್ಮಶಾನದ ಬಳಿಯಿಂದ ಅಕ್ಷಯತೂಣೀರವನ್ನೂ ಗಾಂಡೀವವನ್ನೂ ತೆಗೆದು ತಂದು, ಭೀಷ್ಮಾದಿವೀರರನ್ನು ಸೋಲಿಸಿ ನನ್ನನ್ನು ಸಂರಕ್ಷಿಸಿದನು.

ರಾಜ—(ಬೃಹನ್ನಳೆಯನ್ನು ಕುರಿತು) ಬೃಹನ್ನಳಾ, ಇದು ನಿಜವೆ?

ಬೃಹನ್ನಳಾ—ಒಡೆಯನೆ, ಪ್ರಸನ್ನನಾಗು. ಕುಮಾರನು ಇನ್ನೂ ಬಾಲಕನಾಗಿರುವುದರಿಂದ ಈ ವಿಷಯದಲ್ಲಿ ಭ್ರಾಂತನಾಗಿರುವನು. ಈ ಕೆಲಸವನ್ನೆಲ್ಲ ತಾನೇ ಮಾಡಿ ಇತರರು ಮಾಡಿದಂತೆ ಭಾವಿಸುತ್ತಿರುವನು.

ಉತ್ತರ—ತಾತ! ನೀನು ಎಷ್ಟು ಮಾತ್ರವೂ ಅನುಮಾನಿಸಬೇಡ. ಇದೋ ನೋಡು—(ಎಂದು ಅರ್ಜುನನ ಬಳಿ ಬಂದು, ಕೈಗಳನ್ನು ಹಿಡಿದುಕೊಳ್ಳಲೆತ್ನಿಸುವನು. ಅರ್ಜುನನು ಕೈಗಳನ್ನು ಹಿಂದಕ್ಕೆಳೆದುಕೊಳ್ಳುವನು.) ಗಾಂಡೀವಧನುಸ್ಸಿನ ಹೆದೆಯ ಗುರುತು ಇನ್ನೂ ಈತನ ಮುಂದೋಳಲ್ಲಿರುವುದು. ಹನ್ನೆರಡು ವರ್ಷಗಳಾದರೂ ಬಣ್ಣವು ಅಳಿಸಿಲ್ಲ.

ಬೃಹನ್ನಳಾ—ಸರಿ ಸರಿ, ನಿನ್ನ ಮಾತನ್ನು ಕೇಳಿದರೆ! (ರಾಜನನ್ನು ಕುರಿತು) ಮದ್ದಲೆಯನ್ನು ಬಾರಿಸುವಾಗ ಕಡಗಗಳನ್ನು ಮೇಲಕ್ಕೆ ಒತ್ತಿ ಒತ್ತಿ ಈ ಗುರುತಾಗಿದೆ; ಅದೂ ಮುಂದೋಳಿನಲ್ಲಿಯೇ ಇದೆ, ಅಷ್ಟೆ.

ರಾಜ—ಎಲ್ಲಿ ತೋರಿಸು. ನಾನು ನೋಡುವೆನು.

ಬೃಹನ್ನಳಾ—(ಕೈಗಳನ್ನು ಹಿಂದೆಯೇ ಇಟ್ಟುಕೊಂಡು) ರುದ್ರಬಾಣದಿಂದ ಗಾಯಪಟ್ಟ ಭರತಕುಲೋದ್ಭವನಾದ ಅರ್ಜುನನು ನಾನಾದರೆ (ಭೀಮನನ್ನೂ ಧರ್ಮರಾಜನನ್ನೂ ತೋರಿಸುತ್ತ) ಈತನು ಭೀಮಸೇನನು, ಈತನು ಧರ್ಮರಾಜನು ಎಂತಲೂ ನೀವು ಹೇಳುತ್ತೀರಿ.

ರಾಜ—(ಆಶ್ಚರ್ಯ ಅಭಿಮಾನದಿಂದ, ಭೀಮನನ್ನೂ ಧರ್ಮರಾಜನನ್ನೂ ನೋಡುತ್ತ) ಏನು! ಧರ್ಮರಾಜನೆ, ವೃಕೋದರನೆ, ಧನಂಜಯನೆ! (ಧರ್ಮರಾಜನನ್ನು ಕುರಿತು) ನೀನು ನನ್ನಲ್ಲಿ ನಂಬಿಕೆಯನ್ನಿಡಬಾರದಾಗಿತ್ತೆ?—(ಕ್ಷಣಕಾಲ ಯೋಚಿಸಿ) ಹುಂ! ಪ್ರಾಪ್ತಸಮಯದಲ್ಲಿ ಎಲ್ಲವೂ ಪ್ರಕಟವಾಗುವುದು. ಬೃಹನ್ನಳಾ! ನೀನು ಇನ್ನು ಅಂತಃಪುರಕ್ಕೆ ಹೋಗಬಹುದು.

ಬೃಹನ್ನಳಾ—ಮಹಾರಾಜನ ಅಪ್ಪಣೆಯಂತೆ. (ಹೊರಡಲುದ್ಯುಕ್ತನಾಗುವನು.)

ಭಗವಾನ್—ಅರ್ಜುನ, ಬೇಡ ಬೇಡ! ಒಳಗೆ ಹೋಗಬೇಕಾದುದಿಲ್ಲ. ನಮ್ಮ ಪ್ರತಿಜ್ಞೆಯು ತೀರಿತಲ್ಲವೆ?

ಅರ್ಜುನ—ಆರ್ಯನ ಅಪ್ಪಣೆಯಾದಂತೆ.

ರಾಜ—ಶೂರರೂ, ಸತ್ಯಸಂಧರೂ ಆದ ಪಾಂಡವರು ಪ್ರತಿಜ್ಞಾಪರಿಪಾಲನಕ್ಕಾಗಿ ನನ್ನ ಮನೆಯಲ್ಲಿ ವಾಸಮಾಡಿದ್ದರಿಂದ ನನ್ನ ವಂಶವೇ ಪಾವನವಾಯಿತು.

ಅಭಿಮನ್ಯು—(ನಡೆದ ಸಂಗತಿಯನ್ನೆಲ್ಲ ಆಶ್ಚರ್ಯದಿಂದಲೂ ಸಂತೋಷದಿಂದಲೂ ನೋಡುತ್ತಿದ್ದವನು ಈಗ ಭೀಮಾರ್ಜುನರನ್ನು ನೋಡಿ ನಗುವನ್ನು ಸೂಚಿಸುತ್ತ) —ಓಹೋ! ಸರಿ. ಆದುದರಿಂದಲೇ ನಾನು ಕೋಪದಿಂದ ದೂಷಿಸಿದರೂ ನೀವು ಸಿಟ್ಟುಗೊಳ್ಳದೆ ಪ್ರತಿಯಾಗಿ ನಕ್ಕುಬಿಟ್ಟಿರಿ. ಪೂಜ್ಯರಾದ ನಿಮ್ಮನ್ನು ಕಾಣಲು ಗೋಗ್ರಹಣವು ಒಂದು ನಿಮಿತ್ತವಾಯಿತು. (ಭೀಮನನ್ನು ನೋಡಿ) ತಾತ, ಅಜ್ಞಾನದಿಂದ ನಾನು ಇದುವರೆಗೂ ನಿನ್ನನ್ನು ನಮಸ್ಕರಿಸಲಿಲ್ಲ. (ಆತನ ಬಳಿಗೆ ಹೋಗಿ ಮೊಣಕಾಲೂರಿ ನಮಸ್ಕರಿಸುವನು) ಪುತ್ರನ ಅಪರಾಧವನ್ನು ಕ್ಷಮಿಸಿ ಅನುಗ್ರಹಿಸು.

ಭೀಮ—(ಆತನನ್ನು ಹಿಡಿದೆತ್ತಿ, ಭುಜಗಳ ಮೇಲೆ ಕೈಯಿಟ್ಟು, ದಿಟ್ಟಿಸಿ ನೋಡಿ, ಮುಗುಳ್ನಗೆ ನಗುತ್ತ) ಬಾ ಬಾ, ಮಗನೆ! ನಿನ್ನ ಜನಕನಂತೆಯೇ ಪರಾಕ್ರಮಿಯಾಗು.—ಅಭಿಮನ್ಯು, ನಿನ್ನ ಜನಕನನ್ನು ವಂದಿಸಿದೆಯಾ?

ಅಭಿಮನ್ಯು—(ಅರ್ಜುನನ ಬಳಿಸಾರಿ ಮೊಣಕಾಲೂರಿ ನಮಸ್ಕರಿಸುವನು) ಜನಕನೇ, ನಮಸ್ಕರಿಸುವೆನು.

ಅರ್ಜುನ—(ಆತನನ್ನು ಹಿಡಿದೆತ್ತಿ ಆಲಿಂಗಿಸಿ) ಮಗು, ಅಭಿಮನ್ಯು! ಬಾ ಬಾ, ಪುತ್ರಾಲಿಂಗನ ಸುಖವು ನನ್ನ ಹೃದಯವನ್ನು ತುಂಬಿದೆ. ಹನ್ನೆರಡುವರ್ಷ, ಆ ಸುಖವು ದೂರವಾಗಿದ್ದು, ಪರಿಪೋಷಿತವಾಗಿ ಇಂದು ಲಭಿಸಿದೆ.—ವತ್ಸ, ವಿರಾಟೇಶ್ವರನಿಗೆ ನಮಸ್ಕರಿಸು.

ಅಭಿಮನ್ಯು—(ರಾಜನ ಬಳಿಗೆ ಬಂದು) ನಮಸ್ಕರಿಸುವೆನು.

ರಾಜ—ವತ್ಸ, ಹೀಗೆ ಬಾ. (ಬಳಿಗೆ ಬಂದ ಅಭಿಮನ್ಯುವಿನ ಭುಜದಮೇಲೆ ಕೈಯಿಟ್ಟು) ಯುಧಿಷ್ಠಿರನ ಧೈರ್ಯವನ್ನೂ, ಭೀಮಸೇನನ ಬಲವನ್ನೂ, ಅರ್ಜುನನ ನೈಪುಣ್ಯವನ್ನೂ, ಮಾದ್ರೀಸುತರ ಸೌಂದರ್ಯವನ್ನೂ, ಜಗತ್ಪ್ರಿಯನಾದ ಶ್ರೀಕೃಷ್ಣನ ಕೀರ್ತಿಯನ್ನೂ ಹೊಂದುವನಾಗು.

(ಅಭಿಮನ್ಯುವು ಹಿಂದಕ್ಕೆ ಸರಿಯುವನು. ರಾಜನು ಎದ್ದು ರಂಗಸ್ಥಳದ ಮುಂದಕ್ಕೆ ಬರುವನು.)

ರಾಜ—ಕುಮಾರ, ಹೀಗೆ ಬಾ.

(ಉತ್ತರನು ಮುಂದೆ ಬರುವನು.)

ಉತ್ತರ—ತಾತ, ಅದೇತಕ್ಕೆ ಕರೆದುದು ?

ರಾಜ—ಕುಮಾರ, ಇದುವರೆಗೂ ಅರ್ಜುನನು ಉತ್ತರೆಯ ನೃತ್ಯಗುರುವಾಗಿ, ಅಂತಃಪುರದಲ್ಲಿ ವಾಸಿಸಿದನೆಂಬುದು ನನ್ನನ್ನು ಬಾಧಿಸುತ್ತಿದೆ.

ಉತ್ತರ—(ಆಶ್ಚರ್ಯ ಅಪನಂಬಿಕೆಯನ್ನು ಸೂಚಿಸುವ ದನಿಯಿಂದ) ತಾತ !

ರಾಜ—ಇದನ್ನು ಪರಿಹರಿಸಿಕೊಳ್ಳಲು ಒಂದು ಉಪಾಯವನ್ನು ಮಾಡುವೆನು. ಯಾರಲ್ಲಿ ?

— ಸೇವಕನು ಬರುವನು —

ಸೇವಕ—ಮಹಾರಾಜನೆ, ಏನಪ್ಪಣೆ?

ರಾಜ—ಸ್ವಲ್ಪ ನೀರನ್ನು ತೆಗೆದುಕೊಂಡು ಬಾ.

ಸೇವಕ—ಅಪ್ಪಣೆ.

— ಅವನು ಹೋಗುವನು —

ರಾಜ—(ಅರ್ಜುನನ ಬಳಿ ಬಂದು) ಧನಂಜಯ ! ಇಂದಿನ ಯುದ್ಧಪ್ರಕರಣದಲ್ಲಿ ಅತಿಶಯ ಪರಾಕ್ರಮವನ್ನು ತೋರಿ ನೀನು ವಿಜಯಶಾಲಿಯಾಗಿ ಬಂದಿರುವೆ—

— ಸೇವಕನು ಗಿಂಡಿಯನ್ನು ತರುವನು —

(ರಾಜನು ಸೇವಕನಿಂದ ಗಿಂಡಿಯನ್ನು ತೆಗೆದುಕೊಂಡು)

—ಆದ್ದರಿಂದ, ವಿಜಯಶುಲ್ಕವನ್ನು ಕೊಡುವೆನು. ಆ ಶುಲ್ಕಾರ್ಥವಾಗಿ, ನೀನು ನೃತ್ಯಗೀತಾದಿ ವಿದ್ಯೆಯನ್ನು ಕಲಿಸಿದ ವತ್ಸೆಯಾದ ಉತ್ತರೆಯನ್ನು ಕೊಡುವೆನು, ಪರಿಗ್ರಹಿಸು. (ಎಂದು ನೀರನ್ನೆರೆಯಲುದ್ಯುಕ್ತನಾಗುವನು. ಧರ್ಮರಾಜನೂ ಭೀಮನೂ ನಾಚಿಕೆಯಿಂದ ತಲೆತಗ್ಗಿಸುವರು. ಅಭಿಮನ್ಯುವು ಆಶ್ಚರ್ಯದಿಂದ ನೋಡುತ್ತಿರುವನು )

**ಅರ್ಜುನ**—(ಮುಂದೆ ಬಂದು, ತನಗೆ ತಾನೆ) ಓಹೋ! ರಾಜನು ನನ್ನ ನಡತೆಯನ್ನು ತೂಗಿನೋಡುವಂತಿದೆ. ಇರಲಿ. (ರಾಜನನ್ನು ಕುರಿತು) ಎಲೈ ರಾಜನೆ! ನಿನ್ನ ಅಂತಃಪುರದ ಸರ್ವಸ್ವವನ್ನೂ ನಾನು ಮಾತೃಸಮಾನವಾಗೆಣಿಸಿದವನು. ಆದ್ದರಿಂದ, ನೀನು ಧಾರೆಯೆರೆದುಕೊಡುವ ಉತ್ತರಕುಮಾರಿಯನ್ನು ನನ್ನ ಮಗನಿಗಾಗಿ ಪರಿಗ್ರಹಿಸುವೆನು. (ಎಂದು ರಾಜನು ಧಾರೆಯೆರೆಯಲು ತೆಗೆದುಕೊಳ್ಳುವನು.)

**ಭೀಮ**—ಇದು ಉಚಿತವಾದುದು. (ಯುಧಿಷ್ಠಿರನನ್ನು ನೋಡಿ) ಆರ್ಯ, ನಾವೆಂದಿಗೂ ತಲೆಬಾಗಿಸಬೇಕಾಗಿಲ್ಲ.

**ರಾಜ**—(ಸಂತೋಷದಿಂದ) ಧನಂಜಯ! ನಿನ್ನಿಷ್ಟವಿದ್ದಂತಾಗಲಿ. ವೀರರಾದ ಪಾಂಡವರ ಚಾರಿತ್ರವು ಇಂದು ಸ್ಪಷ್ಟವಾಯಿತು.—ಧರ್ಮರಾಜ! ಇಂದಿನದಿನವು ಪ್ರಶಸ್ತವಾಗಿರುವುದರಿಂದ ವಿವಾಹ ಮಂಗಳೋತ್ಸವಕ್ಕೆ ಸಿದ್ಧಗೊಳಿಸಬಹುದಲ್ಲವೆ?

**ಧರ್ಮರಾಜ**—ಆಗಬಹುದು. ಪಿತಾಮಹನನ್ನೂ, ದ್ರೋಣಾದಿಗಳನ್ನೂ ಕರೆತರಲು ಉತ್ತರಕುಮಾರನನ್ನು ಕಳುಹಿಸೋಣವೆ?

**ರಾಜ**—ಆಗಬಹುದು. ಧರ್ಮರಾಜ, ಭೀಮಸೇನ, ಅರ್ಜುನ ಬನ್ನಿ. ಎಲ್ಲರೂ ಅಂತಃಪುರಕ್ಕೆ ಹೋಗಿ ಈ ಶುಭವಾರ್ತೆಯನ್ನು ತಿಳಿಸೋಣ.

— ಎಲ್ಲರೂ ಹೊರಡಲುದ್ಯುಕ್ತರಾಗುವರು. ಆಗ —
ತೆರೆಯು ಬೀಳುವುದು.

# ಮೂರನೆಯ ಅಂಕ.

---

## ಒಂದನೆಯ ದೃಶ್ಯ.

[ಕೌರವ ಶಿಬಿರದ ಬಳಿಯಲ್ಲಿ ಒಂದು ಪ್ರದೇಶ. ಪ್ರಹರಿಯೊಬ್ಬನು ನಿಂತಿರುವನು. ಗಂಡುಗಚ್ಚೆಯನ್ನು ಹಾಕಿ, ಕವಚವನ್ನು ತೊಟ್ಟು, ನಡುಕಟ್ಟನ್ನು ಬಿಗಿದಿರುವನು. ತಲೆಯ ಮೇಲೆ ಸೀಸಕ. ಕೈಯಲ್ಲಿ ಧನುಸ್ಸು-ಬಾಣ. ಬೆನ್ನಿನಲ್ಲಿ ಬತ್ತಳಿಕೆಯಿರುವುದು. ಪ್ರಹರಿಯು ಅತ್ತಿತ್ತ ಓಡಾಡುತ್ತಿರುವನು.]

— ಒಬ್ಬ ಸಾರಥಿಯು ಬರುವನು —

(ಸಾರಥಿಯೂ ಪ್ರಹರಿಯಂತೆಯೇ ಬಟ್ಟೆಯನ್ನು ಹಾಕಿಕೊಂಡಿರುವನು. ಕೈಯಲ್ಲಿ ಚಾವಟಿ.)

ಪ್ರಹರಿ—ಯಾರವರು ? ನಿಲ್ಲಿ !

ಸಾರಥಿ—ಅಯ್ಯಾ ! ಸರ್ವಕ್ಷತ್ರಿಯಾಚಾರ್ಯನಾದ ದ್ರೋಣನಿಗೂ ಉಳಿದ ಕ್ಷತ್ರಿಯರಿಗೂ ತ್ವರೆಯಿಂದ ತಿಳಿಸಬೇಕಾದ ಸುದ್ದಿಯಿರುವುದು.

ಪ್ರಹರಿ—ಅದೇನದು, ಅಂತಹ ತ್ವರಿತದ ಸುದ್ದಿ ?

ಸಾರಥಿ—ನೋಡು ! ಶ್ರೀಕೃಷ್ಣನ ಚಕ್ರಾಯುಧದ ಭಯವನ್ನೂ ಲಕ್ಷಿಸದೆ, ಗುಪ್ತರಾಗಿರುವ ಪಾಂಡವರ ಧೈರ್ಯವನ್ನೂ ನೆನೆಯದೆ, ಅಭಿಮನ್ಯುಕುಮಾರನನ್ನು ಶತ್ರುಗಳು ಹಿಡಿದುಕೊಂಡು ಹೋದರು.

ಪ್ರಹರಿ—ಇದು ನಿಜವೆ ? ಆತನನ್ನು ಯಾರೂ ರಕ್ಷಿಸಲಿಲ್ಲವೆ ?

ಸಾರಥಿ—ಕೌರವಸೇನೆಯಲ್ಲಿ ಅಂತಹ ಬಿಲ್ಲುಗಾರರೇ ಇಲ್ಲವೆಂದಾಯಿತು. ಭೀಷ್ಮದ್ರೋಣಾದಿಗಳಿಗೆ ಇದಕ್ಕಿಂತಲೂ ಹೆಚ್ಚಿನ ಅಪಮಾನವು ಬೇಕೆ ?

ಪ್ರಹರಿ—ಮೆಲ್ಲಗೆ ಮಾತಾಡು. ಭೀಷ್ಮದ್ರೋಣರು ಇಲ್ಲಿಯೇ ಅಡ್ಡಾಡು ತ್ತಿದ್ದರು.

— ಭೀಷ್ಮದ್ರೋಣರಿಬ್ಬರೂ ಬರುವರು —

— ಪ್ರಹರಿಯು ಹೋಗುವನು —

ದ್ರೋಣ—ಭೀಷ್ಮ ದ್ರೋಣರಿಬ್ಬರೂ ಇಲ್ಲಿಯೇ ಇರುವರು. (ಸೂತನನ್ನು ಕುರಿತು) ಏನದು ನೀನು ಹೇಳುತ್ತಿದ್ದುದು ? ನನ್ನ ಶಿಷ್ಯನಾದ—ರಣಪಂಡಿತನಾದ—ಧನಂಜಯಕುಮಾರನನ್ನು ಕೊಂಡೊಯ್ದರೆಂದೆಯಾ ? ನನ್ನ ಬಾಣಾಘಾತದ ಸವಿಯನ್ನು ತಿಳಿಯಬೇಕೆಂದಿರುವ ಆ ಸಾಹಸಿಯು ಯಾರು ?

ಭೀಷ್ಮ—ಸೂತ ! ಅದೇನು ಸಮಾಚಾರ ?

ಸಾರಥಿ—(ಭಯದಿಂದ) ಅವಧರಿಸಬೇಕು. ಯುದ್ಧರಂಗದಿಂದ ವಿಜಯಿಯಾಗದೆ ಹಿಂತಿರುಗೆನೆಂದು, ಅನುಭವವಿಲ್ಲದ ಆ ಬಾಲಕನು ಅಲ್ಲಿಯೇ ಯುದ್ಧಮಾಡುತ್ತ ನಿಂತನು.

ಭೀಷ್ಮ—ಆಗ ಅವನನ್ನು ಹಿಡಿದರೆ ? (ದ್ರೋಣನನ್ನು ಕುರಿತು) ಮದ್ದಾನೆಗಳ ಹಿಂಡನ್ನು ಹಿಡಿಯಲು ಬಂದು, ಸಾಧ್ಯವಾಗದಿರಲು, ಸಾವಕಾಶವಾಗಿ ತಿರುಗಾಡುತ್ತ ಹಿಂದಿದ್ದ ಮರಿಯಾನೆಯನ್ನು ಹಿಡಿದರು.

— ಪ್ರಹರಿಯು ಬರುವನು —

ಪ್ರಹರಿ—ಕ್ಷಮಿಸಬೇಕು. ಕೌರವೇಶ್ವರನು ತಮಗಾಗಿ ಕಾದಿರುವನು.

ಭೀಷ್ಮ—ಈ ಸಮಾಚಾರವು ಆತನಿಗೆ ತಿಳಿಯಿತೆ ?

ಪ್ರಹರಿ—ಹೌದು, ನಾನೇ ಅರಿಕೆಮಾಡಿದೆನು.

ಭೀಷ್ಮ—ಆಚಾರ್ಯ ! ಬನ್ನಿ, ಮುಂದಿನ ಕಾರ್ಯವನ್ನು ಆಲೋಚಿಸೋಣ

— ಎಲ್ಲರೂ ಹೋಗುವರು —

ತೆರೆಯು ಏಳುವುದು.

## ಎರಡನೆಯ ದೃಶ್ಯ

[ಕೌರವಶಿಬಿರದಲ್ಲಿ ಒಂದು ಕೋಣೆ. ಶಿಬಿರಯೋಗ್ಯವಾದ ವಸ್ತುಗಳಿವೆ. ಅಲ್ಲಲ್ಲಿ ಶಸ್ತ್ರಾಸ್ತ್ರಗಳನ್ನೂ, ಧನುಸ್ಸುಗಳನ್ನೂ ಇಟ್ಟಿರುವರು. ದುರ್ಯೋಧನನೂ, ಶಕುನಿಯೂ, ಕರ್ಣನೂ ಕುಳಿತುಕೊಂಡು ಮಾತಾಡುತ್ತಿರುವರು ]

— ಭೀಷ್ಮ ದ್ರೋಣ ಮತ್ತು ಸಾರಥಿ ಇವರು ಬರುವರು —

**ದುರ್ಯೋಧನ**—ಆಚಾರ್ಯ, ನಮಸ್ಕರಿಸುವೆನು. ತಾತ, ನಮಸ್ಕರಿಸುವೆನು.

**ಭೀಷ್ಮ, ದ್ರೋಣ**—ನಿನಗೆ ಮಂಗಳವಾಗಲಿ! (ಕುಳಿತುಕೊಳ್ಳುವರು).

**ದುರ್ಯೋಧನ**—ನಾವು ಕೇಳಿದುದೇನು? ಸೂತ, ಬಾಲಕನಾದ ಅಭಿಮನ್ಯುವನ್ನು ಹಿಡಿದವನಾರು? ನಾನೀಗಲೇ ಹೋಗಿ ಬಿಡಿಸಿಕೊಂಡು ಬರುವೆನು. ಅವನ ಪಿತೃಗಳಲ್ಲಿ ನನಗೆ ದ್ವೇಷವಿದ್ದರೂ ಆತನು ನನ್ನ ಮಗನಂತೆಯೇ ಅಲ್ಲವೆ? ನಮ್ಮ ಅವರ ವಿರೋಧದಲ್ಲಿ ಬಾಲಕರು ಎಂದೆಂದಿಗೂ ನಿರಪರಾಧಿಗಳು

**ಕರ್ಣ**—ನಿನ್ನ ಮಾತುಗಳು ಯೋಗ್ಯವೂ ಸ್ನೇಹಮಯವೂ ಆಗಿವೆ. ಗಾಂಧಾರಿಮಾತಾ! ಲೋಕಾಪವಾದ ಭೀತಿಯಿಂದಾಗಲಿ, ಸ್ವಜನನೆಂದಾಗಲಿ, ಬಾಲಕನೆಂದಾಗಲಿ ನೀನವನನ್ನು ರಕ್ಷಿಸಬೇಕಾಗಿಲ್ಲ. ನಿನ್ನ ಪ್ರಿಯವನ್ನು ಬಯಸಿ ಯುದ್ಧಮುಖದಲ್ಲಿ ವಿಪತ್ತಿಗೆ ಗುರಿಯಾಗಿರುವನು. ಆದುದರಿಂದ ನಾವು ಹೇಗಾದರೂ ಮಾಡಿ ಆತನನ್ನು ಬಿಡಿಸಿಕೊಂಡುಬರುವುದು ನಮ್ಮ ಕರ್ತವ್ಯ. ಅದನ್ನು ಮಾಡಲಾರೆವಾದರೆ, ಧನುಸ್ಸನ್ನು ಬಿಸುಟು ವಲ್ಕಲವನ್ನು ಧರಿಸುವುದೇ ಲೇಸು!

ಶಕುನಿ—ಅವನಿಗಾಗಿ ಇಷ್ಟೇಕೆ ಸಂಭ್ರಮ? ಸೌಭದ್ರನಿಗೆ ರಕ್ಷಕರು ಅನೇಕರಿರುವರು. ಈಗಾಗಲೆ — ಇಷ್ಟರಲ್ಲಿಯೇ — ಬಿಡುಗಡೆಯನ್ನು ಹೊಂದಿದ್ದಾನೆಂದು ತಿಳಿಯಿರಿ. ನೋಡಿ! ಈತನು ಫಲ್ಗುಣತನಯನೆಂದು ತಿಳಿದೊಡನೆಯೇ ವಿರಾಟನೇ ಬಿಟ್ಟುಬಿಡುವನು. ಅಥವಾ, ರಣರಂಗದಲ್ಲಿ ಸೋತನೆಂಬ ಕನಿಕರದಿಂದಲೋ, ಕೃಷ್ಣನ ಮೇಲಿನ ದಾಕ್ಷಿಣ್ಯದಿಂದಲೋ ವಿರಾಟನು ಆವನನ್ನೆಂದಿಗೂ ಬಂಧನದಲ್ಲಿಡನು. ಅದಲ್ಲದೆ, ಪ್ರಲಂಬನನ್ನು ಹಲಾಯುಧದಿಂದಲೇ ಕೊಂದ ವೀರ ಬಲರಾಮನಿಗಾದರೂ ಹೆದರಿ ಹೋಗಬಿಡುವನು. ಅದೂ ಇಲ್ಲದಿದ್ದರೆ, ಪ್ರಬಲನಾದ ಭೀಮಸೇನನು ಶತ್ರುಗಳನ್ನು ಸಂಹರಿಸಿ ಅಭಿಮನ್ಯುವನ್ನು ಬಿಡಿಸಲಾರನೋ?

ದ್ರೋಣ—(ಸೂತನನ್ನು ಕುರಿತು) ಆತನನ್ನು ಹೇಗೆ ಸೆರೆಹಿಡಿದರು? ರಥವೇನಾದರೂ ಮುರಿದುಹೋಯಿತೆ? ಕುದುರೆಗಳು ಚದರಿದುವೆ? ಬತ್ತಳಿಕೆಯು ಬರಿದಾಯಿತೆ? ಅಥವಾ ಧನುಸ್ಸು ಭಗ್ನವಾಯಿತೆ?

ಸಾರಥಿ—ಪೂಜ್ಯನೆ, ನಾನೇ ಆತನ ಸಾರಥಿಯಲ್ಲವೆ? ಇದಾವುದೂ ಆಗಲಿಲ್ಲ.

ದ್ರೋಣ—ಸಾಧಾರಣವಾಗಿ, ರಥಿಕರಿಗೆ ದೈವಿಕವಾಗಿ ಸಂಭವಿಸುವ ವಿಪತ್ತುಗಳೇ ಇವು. ಈ ಕಾರಣಗಳಾವುವೂ ಅಲ್ಲವೆನ್ನುವೆ. ಹಾಗಾದರೆ ವೈರಿಗಳು ಶರವರ್ಷವನ್ನು ಕರೆದು, ಭಯಗ್ರಸ್ತನಾದ ಆತನನ್ನು ಎಳೆದೊಯ್ದರೆ?—ಛಿ! ಛಿ! ಅದಿರಲಾರದು! ಆತನು ಯಾವಾಗಲೂ ಸ್ವಸ್ಥಚಿತ್ತನು; ಹಾಗೆ ಎದೆಗುಂದುವನಲ್ಲ.

ಸಾರಥಿ—ಆಯುಷ್ಮಂತನೆ, ಮೂರ್ತಿಮತ್ತಾದ ಧನುರ್ವೇದವೇ ಅಭಿಮನ್ಯುವಲ್ಲವೆ? ನಿಮಗೆ ಈ ವಿಷಯವು ತಿಳಿಯದೆ? ಈ ವಿಪತ್ತುಗಳು ಯಾವುವೂ ಸಂಭವಿಸಲಿಲ್ಲ. ಬಾಣಗಳು ಹೇರಳವಾಗಿ

ದ್ದವು. ರಥವೂ ಕೊಳ್ಳಿಯ ಚಕ್ರದಂತೆ ತಿರುಗುತ್ತಿತ್ತು. ಹೀಗಿದ್ದರೂ ಒಬ್ಬ ಸಾಧಾರಣ ಕಾಲಾಳು ಆತನನ್ನು ಹಿಡಿದೊಯ್ದನು.

ಶಕುನಿ—(ತಿರಸ್ಕಾರಸೂಚಕವಾಗಿ) ಏನು, ಸಾಧಾರಣ ಕಾಲಾಳೆ?

ದ್ರೋಣ—ಸೂತ! ಅವನು ಹೇಗಿದ್ದನು?

ಸಾರಥಿ—ಆತನ ರೂಪವನ್ನು ಹೇಳಲೆ ಅಥವಾ ಪರಾಕ್ರಮವನ್ನೆ?

ಭೀಷ್ಮ—ಏನು ಹುಡುಗಾಟ! ರೂಪದಿಂದ ಸ್ತ್ರೀಯರನ್ನು ವರ್ಣಿಸುವರು; ಪುರುಷನ ಪರಾಕ್ರಮವನ್ನು ಹೇಳಬೇಕು.

ಸಾರಥಿ—ಆಯುಷ್ಮಂತನೆ! ಕ್ಷಮಿಸಬೇಕು. ಆತನ ಪರಾಕ್ರಮವನ್ನೇ ಹೇಳುವೆನು.

ದುರ್ಯೋಧನ—ಯಾವನೋ ಒಬ್ಬ ಸಾಧಾರಣ ಕಾಲಾಳನ್ನು ಈ ಪ್ರೌಢ ರೀತಿಯಿಂದ ಹೊಗಳುವುದರಲ್ಲಿ ಪ್ರಯೋಜನವೇನು? ಅವನು ಪರಾಕ್ರಮದಲ್ಲಿಯೂ, ವೇಗದಲ್ಲಿಯೂ ವಾಯುದೇವನೇ ಆಗಿರಲಿ. ಅವನು ಯಾರೆಂದು ಹೇಳು. ಇಲ್ಲಿ ಯಾರೂ ಆತನಿಗೆ ಹೆದರಿಲ್ಲ.

ಸಾರಥಿ—ಮಹಾರಾಜನೆ, ಕೇಳಬೇಕು.—ಆತನು ಕುದುರೆಗಳಿಗಿಂತಲೂ ವೇಗವಾಗಿ ಹಾರಿ, ಕುಮಾರನನ್ನು ಒಂದು ಕೈಯಲ್ಲಿಯೂ, ರಥವನ್ನು ಇನ್ನೊಂದರಲ್ಲಿಯೂ ಹಿಡಿದನು. ಕುದುರೆಗಳು ಓಡುವಂತೆ ಕತ್ತುಗಳನ್ನು ಮುಂದಕ್ಕೆ ಚಾಚಿದ್ದರೂ ರಥವು ಸ್ವಲ್ಪವೂ ಚಲಿಸದೆ ನಿಂತಿದ್ದಿತು.

ಭೀಷ್ಮ—ಹಾಗಾದರೆ ನಾವೀಗ ಆಯುಧಗಳನ್ನು ಹಿಡಿಯ ಕೆಲಸವಿಲ್ಲ.

ಶಕುನಿ—ಅದೇಕೆ?

ಭೀಷ್ಮ—ಒಂದೇ ಕೈಯಲ್ಲಿ ರಥವನ್ನು ಚಲಿಸದಂತೆ ಹಿಡಿದರೆ ಆ ಕೈಯು ಭೀಮಸೇನನದೇ ಇರಬೇಕು. ಹಿಂದೆ ದ್ರೌಪದಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಜಯದ್ರಥನ ರಥವನ್ನು, ಭೀಮ

ಸೇನನು ಹಾಗೆಯೇ ಅಲ್ಲವೆ ಹಿಡಿದು ನಿಲ್ಲಿಸಿ ಅವನನ್ನು ಸದೆ ಬಡಿದುದು ?

**ದ್ರೋಣ**—ಅದು ನಿಜ. ಬಾಲ್ಯದಿಂದಲೂ ನಾನವನಿಗೆ ವಿದ್ಯಾಗುರುವಾ ದುದರಿಂದ ಆತನ ಬಲವನ್ನು ಚೆನ್ನಾಗಿಯೂ ಬಲ್ಲೆ. ಆ ಕಾಲ ದಲ್ಲಿ ಗರುಡಿಮನೆಯಲ್ಲಿ, ಕಿವಿಯವರೆಗೂ ಹೆದೆಯೆಳೆದು ನಾನು ಬಾಣವನ್ನು ಬಿಟ್ಟಾಗ, ಆ ಬಾಣವು ತನ್ನಲ್ಲಿಗೆ ಬರುವ ಮೊದಲೆ ಆತನು ವೇಗವಾಗಿ ಕೈಚಾಚಿ ಅದನ್ನು ಹಿಡಿದುಬಿಡುತ್ತಿದ್ದನು.

**ಶಕುನಿ**—(ಸಿಟ್ಟಿನಿಂದ) ನಿಮ್ಮ ಮಾತುಗಳನ್ನು ಕೇಳಿ ನನಗೆ ನಗುಬರು ತ್ತಿದೆ ! ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಲೋಕ ದಲ್ಲಿ ಭೀಮನಲ್ಲದೆ ಬೇರೊಬ್ಬ ಪರಾಕ್ರಮಿಯೇ ಇರಕೂಡದೆ?— ನಿಮಗೆ ಬೇಕಾದವರೇ ಬಹಳ ಯೋಗ್ಯರು !—ಏನು, ಪ್ರಪಂಚ ವನ್ನೆಲ್ಲಾ ಪಾಂಡವರು ಆಕ್ರಮಿಸಿರುವರೋ ?

**ಭೀಷ್ಮ**—ಗಾಂಧಾರರಾಜಾ ! ನಾವು ಹೇಳುವುದೆಲ್ಲವೂ ಅನುಮಾನದಿಂದ. ಆದರೆ ನೋಡು, ನಾವೆಲ್ಲರೂ—ನೀನೂ ಸಹ—ಯುದ್ಧವೆಂದರೆ ಅನೇಕಾನೇಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ, ರಥಾರೂಢ ರಾಗಿ ಹೋಗುತ್ತೇವೆ. ಆದರೆ, ನಾನು ಕೇಳಿರುವುದರಲ್ಲಿ ಇಬ್ಬರು ಮಾತ್ರ ತಮ್ಮ ಬಾಹುಗಳನ್ನೇ ಆಯುಧವೆಂದೆಣಿಸಿ ಯುದ್ಧಕ್ಕೆ ಹೊರಡುವರು.—ಒಬ್ಬ ಬಲರಾಮ ; ಒಬ್ಬ ಭೀಮಸೇನ !

**ಶಕುನಿ**—(ಬೇಸರವನ್ನು ಸೂಚಿಸುತ್ತ) ಸಾಹಸಿಗಳಾದ ನಾವೆಲ್ಲರೂ ಉತ್ತರ ನೊಬ್ಬನಿಂದ ಪರಾಜಿತರಾದೆವು. ಆದರೆ ಇಲ್ಲಿರುವ ಕೆಲವರು ಆತನೇ ಅರ್ಜುನನೆಂದು ಹೇಳಲೂ ಹಿಂಜರಿಯರು.

**ದ್ರೋಣ**—ಗಾಂಧಾರರಾಜಾ ! ನಿನಗೆ ಇನ್ನೂ ಅನುಮಾನವಿರುವುದೆ ? ರಣದಲ್ಲಿ, ಬರಸಿಡಿಲಂತೆ ಧನುಷ್ಟಂಕಾರಮಾಡಿ, ಅಸ್ತ್ರಮೇಘ

ದಿಂದ ಸೂರ್ಯಕಾಂತಿಯನ್ನೇ ಅಳಿಸಿ, ಶರವರ್ಷವನ್ನು ಕರೆಯು ವುದು, ಆ—ಆ— ಉತ್ತರನಿಗೆ ಸಾಧ್ಯವೆ ?

ಭೀಷ್ಮ—ಗಾಂಧಾರರಾಜಾ! ಸ್ಪಷ್ಟವಾಗಿ ಹೇಳುತ್ತೇನೆ ಕೇಳು. ನೀನೂ ಬಲ್ಲೆಯಷ್ಟೆ! ಅರ್ಜುನನು ಈ ದಿನ ಬಾಣಮುಖೇನ ತನ್ನ ಪರಿಚಯವನ್ನು ಹೇಳಿಕೊಂಡಿದ್ದಾನೆ.

— ಪ್ರಹರಿಯು ಬರುವನು —

(ಪ್ರಹರಿಯು ಒಳಗೆ ಬಂದು ಸೂತನ ಕೈಗೆ ಒಂದು ಬಾಣವನ್ನು ಕೊಟ್ಟು, ಪಿಸುಮಾತಿನಲ್ಲಿ ಏನೋ ಹೇಳಿ ಹೋಗುವನು. ಸೂತನು ಅದನ್ನು ಕ್ಷಣಕಾಲ ನೋಡಿ —)

ಸಾರಥಿ—ಆಯುಷ್ಮಂತನೆ, ಈ ವಿವಾದವಿನ್ನು ಬೇಡ. ಈ ಬಾಣವೇ ಅದನ್ನು ಇತ್ಯರ್ಥವಾಡುವುದು.

ಭೀಷ್ಮ—ಅದೇನು ಹಾಗೆ ಹೇಳುವೆ ?

ಸಾರಥಿ—ಈ ಬಾಣವು ನಿನ್ನ ಧ್ವಜಪಟವನ್ನು ಸೀಳಿ ಅದರಲ್ಲಿಯೇ ಸಿಕ್ಕಿಕೊಂಡಿದ್ದಿತಂತೆ. ಇದರ ಹಿಡಿಯಲ್ಲಿ ಯಾವುದೋ ಹೆಸರು ಸಹ ಇದೆ.

ಭೀಷ್ಮ—ಎಲ್ಲಿ? ಇಲ್ಲಿ ತಾ. (ಸೂತನು ಕೊಡುವನು. ಭೀಷ್ಮನು ಹೆಸರನ್ನು ಓದಿ, ಹರ್ಷಿತನಾಗಿ) ವತ್ಸ! ಗಾಂಧಾರರಾಜಾ! ವಾರ್ಧಕ್ಯದಿಂದ ನನ್ನ ಕಣ್ಣುಗಳು ಮಂಜಾಗಿವೆ. ಬಾಣದಲ್ಲಿರುವ ಹೆಸರನ್ನು ನೋಡು. (ಶಕುನಿಯು ಬಾಣವನ್ನು ತೆಗೆದುಕೊಂಡು ಓದಿ, ಬಿಸುಡುವನು. ಅದು ದ್ರೋಣನ ಕಾಲಬಳಿ ಬೀಳುವುದು.)

ಕರ್ಣ—ಗಾಂಧಾರರಾಜ! ಅದನ್ನೇಕೆ ಬಿಸುಟೆ; ಯಾರ ಹೆಸರಿದ್ದಿತು ?

ಶಕುನಿ—(ತಾತ್ಸಾರದಿಂದ) ಅರ್ಜುನನೆಂದಿತ್ತು.

ದ್ರೋಣ—(ಬಿದ್ದಬಾಣವನ್ನು ಎತ್ತಿಕೊಂಡು) ಬಾ, ಬಾ, ವತ್ಸ! ತಾತನಾದ ಭೀಷ್ಮನನ್ನು ನಮಸ್ಕರಿಸಲು ಮೊದಲು ನೀನು ಈ ಬಾಣವನ್ನು

ಆತನ ಬಳಿಗೆ ಕಳುಹಿದೆ. ಕ್ರಮವರಿತು ಈಗ ಅದು ನನ್ನ ಕಾಲ್ಗಳ ಮೇಲೆ ಬಿತ್ತು.

ಶಕುನಿ—(ಸಿಟ್ಟಿನಿಂದ) ಇದೇನು ಭ್ರಾಂತಿ ನಿಮ್ಮದು? ಅರ್ಜುನನೆಂಬ ಯೋಧನು ಬೇರೆ ಯಾರೂ ಇರಕೂಡದೋ? ನನ್ನ ಸೈನ್ಯದಲ್ಲಿಯೇ ಅರ್ಜುನನೆಂಬ ಕಾಲಾಳೊಬ್ಬನುಂಟು. ಇದೇಕೆ ಅವನ ಬಾಣವಾಗಿರಬಾರದು?

ದ್ರೋಣ—(ಪರಿಹಾಸದಿಂದ) ನಿಜ! ನಿಜ! ಶತ್ರುಸೈನ್ಯವನ್ನು ಬಿಟ್ಟು, ಸ್ವಪಕ್ಷದ ಮೇಲೆ ಬಾಣಪ್ರಯೋಗಮಾಡಿದವನಿಗೆ ನೀನೇ ಸಮರಾಚಾರ್ಯನಾಗಿರಬೇಕು!

ಶಕುನಿ—(ಸಿಟ್ಟಿನಿಂದ) ಆಗಲಿ. ಆದರೆ ಉತ್ತರನ ಹೆಸರುಳ್ಳ ಬಾಣಗಳಿದ್ದಲ್ಲಿ ಅವುಗಳನ್ನು ನೋಡಬೇಕು.

ದುರ್ಯೋಧನ—ಆಚಾರ್ಯರೆ? ರಾಜ್ಯಾರ್ಧವನ್ನು ಅವರಿಗೆ ಕೊಡುವುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕಾಗಿ ಕೃತ್ರಿಮವೇನಾದರೂ ನಡೆದಂತೆ ತೋರಿದರೆ, ಯುಧಿಷ್ಠಿರನನ್ನು ಕಂಡಲ್ಲದೆ ಅರ್ಧರಾಜ್ಯವನ್ನು ಕೊಡೆನು!

— ಪ್ರಹರಿಯು ಬರುವನು —

ಪ್ರಹರಿ—ಮಹಾರಾಜನಿಗೆ ಜಯವಾಗಲಿ. ವಿರಾಟನಗರದಿಂದ ಒಬ್ಬನು ಬಂದಿರುವನು.

ದುರ್ಯೋಧನ—ಒಳಗೆ ಬರಮಾಡು.

ಪ್ರಹರಿ—ಅಪ್ಪಣೆ.

—ಅವನು ಹೋಗುವನು—

ಕರ್ಣ—(ದ್ರೋಣನನ್ನು ನೋಡಿ) ಅಭಿಮನ್ಯುವಿನ ಸಮಾಚಾರವೇನಾದರೂ ತಿಳಿಯಬಹುದು.

— ಉತ್ತರನು ಬರುವನು —

ಉತ್ತರ—ಆಚಾರ್ಯರೆ, ಪಿತಾಮಹನೆ, ನೃಪಾಲರೆ, ಅಭಿವಂದಿಸುವೆನು.

ದ್ರೋಣ—ನಿನಗೆ ಮಂಗಳವಾಗಲಿ. ಕುಮಾರ, ಇದೇನು ಇಷ್ಟು ಅವಸರದಿಂದ ಬಂದಿರುವೆ? ವಿರಾಟೇಶ್ವರನು ಏನು ಹೇಳಿ ಕಳುಹಿದ್ದಾನೆ?

ಉತ್ತರ—ನನ್ನ ಪಿತನು ಕಳುಹಲಿಲ್ಲ.—ಅಲ್ಲದೆ, ನಾನು ಇನ್ನೂ ಬೇಗನೆ ಬರುತ್ತಿದ್ದೆ. ಆದರೆ ಕೌಂತೇಯನ ಬಾಣಹತಿಯಿಂದ ಪ್ರಾಣ ಬಿಟ್ಟ ಆನೆಗಳು ತಂಡೋಪತಂಡವಾಗಿ ದಾರಿಯಲ್ಲಿ ಬಿದ್ದಿದ್ದವು. ಆದುದರಿಂದ ಬರುವುದು ತಡವಾಯಿತು.

ಶಕುನಿ—(ಆಶ್ಚರ್ಯದಿಂದ) ಕೌಂತೇಯನ ಬಾಣಹತಿಯೆ?

ದ್ರೋಣ—ಹಾಗಾದರೆ, ಇಷ್ಟು ಅವಸರದಿಂದ ಯಾರು ಕಳುಹಿದರು?

ಉತ್ತರ—ಯುಧಿಷ್ಠಿರಮಹಾರಾಜನು.

(ದುರ್ಯೋಧನ, ಶಕುನಿ, ಕರ್ಣ ಇವರು ಆಶ್ಚರ್ಯಚಕಿತರಾಗಿ)

ದುರ್ಯೋಧನಾದಿಗಳು—ಏನು, ಯುಧಿಷ್ಠಿರಮಹಾರಾಜನೆ?

ದ್ರೋಣ—ಧರ್ಮರಾಜನು ಏನು ಹೇಳಿಕಳುಹಿದ್ದಾನೆ?

ಉತ್ತರ—ಆಚಾರ್ಯ, ಅವಧರಿಸಬೇಕು. "ಉತ್ತರೆಯು ನನಗೆ ಸೊಸೆಯಾಗುವಂತೆ ನಿಶ್ಚಯವಾಗಿರುವುದು. ಸಕಲ ರಾಜಮಂಡಲದೊಡನೆ ತಾವು ದಯಮಾಡಿಸಬೇಕು ವಿವಾಹವು ಇಲ್ಲಿಯೋ ಅಥವಾ ಹಸ್ತಿನಾಪುರದಲ್ಲಿಯೋ ಎಂಬುದನ್ನು ತಿಳಿಸಬೇಕು." ಎಂದು ಯುಧಿಷ್ಠಿರಮಹಾರಾಜನು ಬಿನ್ನೈಸಿರುವನು.

ಭೀಷ್ಮ—ಹಸ್ತಿನಾವತಿಯಲ್ಲಿ ಹೇಗೆ ಆಗುವುದು? ಅಲ್ಲಿಯೇ ಆಗುವುದು ಯುಕ್ತ.

ದ್ರೋಣ—(ದುರ್ಯೋಧನನನ್ನು ನೋಡಿ) ಈ ಕೆಲಸಕ್ಕಾಗಿಯೇ ನಾವು ಇಲ್ಲಿಗೆ ಬಂದುದು. ಇನ್ನೂ ಪಂಚರಾತ್ರಗಳು ಕಳೆದಿಲ್ಲ. ಗುರುದಕ್ಷಿಣೆಯನ್ನು ನೀನು ನಮಗೆ ಅಲ್ಲಿ ಸಲ್ಲಿಸಬಹುದು.

ದುರ್ಯೋಧನ—ಒಳ್ಳೆಯದು. ಪಾಂಡವರು ಮೊದಲು ಹೊಂದಿದ್ದ ರಾಜ್ಯವನ್ನು ನಾನವರಿಗೆ ಹಿಂತಿರುಗಿ ಕೊಡುವೆನು. ಕೊಟ್ಟ ಮಾತಿಗೆ ಪ್ರತಿಯಾಗಿ ನಾನು ನಡೆಯುವವನಲ್ಲ. ಸತ್ಯದ್ರೋಹಿಯು ಸತ್ತಂತೆಯೇ ಸರಿ! ಸತ್ಯವೇ ಶಾಶ್ವತವಲ್ಲವೆ?

ದ್ರೋಣ—ವತ್ಸ, ಸುಯೋಧನ! ಇದರಿಂದ ನಮ್ಮೆಲ್ಲರಿಗೂ ಸಂತೋಷವಾಗಿದೆ. ಕುಲವೈರವನ್ನು ಮರೆತು ಶಾಂತರಾಗಿ ನೀವಿಬ್ಬರೂ ಸೇರುವುದರಿಂದ ನಿಮ್ಮ ಕುಲವು ವೃದ್ಧಿಯಾಗುವುದು. ನಾವೆಲ್ಲ ವಿರಾಟನಗರಿಗೆ ಹೋಗಿ, ಸುಮುಹೂರ್ತದಲ್ಲಿ, ಉತ್ತರೆಯ ಪಾಣಿಗ್ರಹಣಮಹೋತ್ಸವದಲ್ಲಿಯೂ, ಧರ್ಮರಾಜನ ರಾಜ್ಯಪ್ರಾಪ್ತಿಯ ಆನಂದದಲ್ಲಿಯೂ ಭಾಗಿಗಳಾಗೋಣ. ವತ್ಸ, ಸುಯೋಧನ! ರಾಜಸಿಂಹನಾದ ನೀನು ಈ ಸಕಲ ಮಹೀವಲಯವನ್ನೆಲ್ಲಾ ಪರಿಪಾಲಿಸಿ ಕೀರ್ತಿವಂತನಾಗು. (ಎಂದು ಎರಡು ಕೈಗಳನ್ನೂ ಮೇಲೆತ್ತಿ ಆಶೀರ್ವದಿಸುತ್ತಿರುವನು.)

ತೆರೆಯು ನಿದಾನವಾಗಿ ಬೀಳುವುದು.

— ಪಂಚರಾತ್ರವು ಮುಗಿಯಿತು —